ಶುಕ್ರವಾರ, ಮೇ 26, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಾರಾ ನಗು...
ಕೋಲ್ಕತ್ತದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಪ್ರಚಾರ ಕಾರ್ಯಕ್ರಮವೊಂದರಲ್ಲಿ ಬಾಲಿವುಡ್ ನಟ ಸಾರಾ ಅಲಿ ಖಾನ್ ಪಾಲ್ಗೊಂಡಿದ್ದರು



ರಾಜ್ಯದಲ್ಲಿ ಶಾಂತಿ, ಕಾನೂನು ಸುವ್ಯವಸ್ಥೆ ಕದಡಲು ಅವಕಾಶ ಕೊಡುವುದಿಲ್ಲ: ಸಚಿವ ಪ್ರಿಯಾಂಕ್ ಖರ್ಗೆ

‘ಆರೆಸ್ಸೆಸ್ ಮೇಲೆ ಕ್ರಮಕ್ಕೂ ಹಿಂಜರಿಯಲ್ಲ’

ಪ್ರಜಾವಾಣಿ ವಾರ್ತೆ



ಪ್ರಿಯಾಂಕ್ ಖರ್ಗೆ

ನವದೆಹಲಿ: ‘ಯಾರಾದರೂ ಕೂಡಾ ಕರ್ನಾಟಕದ ವರ್ಚಸ್ಸಿಗೆ ಧಕ್ಕೆ ತಂದರೆ, ಸಮಾಜದಲ್ಲಿ ಕೋಮು ವಿಷ ಬಿತ್ತಿ, ಶಾಂತಿ ಕದಡಲು ಪ್ರಯತ್ನ ಮಾಡಿದರೆ ಅಂಥವರಿಗೆ ಕಾನೂನು ಹಾಗೂ ಸಂವಿಧಾನದ ಚೌಕಟ್ಟಿನಲ್ಲಿ ಕಡಿವಾಣ ಹಾಕಲು ತೀರ್ಮಾನಿಸಿದ್ದೇವೆ’ ಎಂದು ಕರ್ನಾಟಕ ಸರ್ಕಾರದ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಗುರುವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ರಾಜ್ಯವನ್ನು ಆರ್ಥಿಕ ಪ್ರಗತಿಯ ಹಾದಿಯಲ್ಲಿ ಕೊಂಡೊಯ್ಯಲು ಕಾನೂನು ಹಾಗೂ ಶಾಂತಿ ಸುವ್ಯವಸ್ಥೆ ಸುಭದ್ರವಾಗಿರಬೇಕು. ಶಾಂತಿ ಸುವ್ಯವಸ್ಥೆ ಇದ್ದರೆ ಬಂಡವಾಳ ಹರಿದು ಬರುತ್ತದೆ. ಆಗ ಮಾತ್ರ ರಾಜ್ಯದಲ್ಲಿ ಉದ್ಯೋಗ ಸೃಷ್ಟಿಯಾಗುತ್ತದೆ. ಯುವಕರ ಭವಿಷ್ಯ ಸುಭದ್ರವಾಗುತ್ತ-ದೆ. ಈ ದಿಸೆಯಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತೇವೆ. ರಾಜ್ಯವನ್ನು ಮೊದಲ ಸ್ಥಾನಕ್ಕೆ ತರಲು ಅಗತ್ಯವಿರುವ ಎಲ್ಲ ಉಪಕ್ರಮಗಳನ್ನು ಕೈಗೊಳ್ಳುತ್ತೇವೆ’ ಎಂದು ಸ್ಪಷ್ಟಪಡಿಸಿದರು.

ಬಜರಂಗದಳ, ಪಿಎಫ್ಐ ಅಷ್ಟೇ ಅಲ್ಲ, ಯಾವುದೇ ಕೋಮು ಸಂಘಟನೆಗಳು, ಜಾತಿ ಹಾಗೂ ಸಮುದಾಯಗಳ ಸಂಘಟನೆಗಳು ಶಾಂತಿ ಕದಡುವ ಕೆಲಸಕ್ಕೆ ಕೈ ಹಾಕಿದರೆ ಅವುಗಳ ವಿರುದ್ಧ ಕಾನೂನಾತ್ಮಕವಾಗಿ ಕ್ರಮ ಕೈಗೊಳ್ಳುತ್ತೇವೆ. ಅವುಗಳನ್ನು ನಿಷೇಧಿಸಲು ಸಹ ಹಿಂಜರಿಯುವುದಿಲ್ಲ ಎಂದು ಅವರು ಹೇಳಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘಟನೆಯನ್ನು (ಆರ್‌ಎಸ್‌ಎಸ್) ನಿಷೇಧ ಮಾಡುತ್ತೀರಾ ಎಂದು ಸುದ್ದಿಗಾರರು ಪ್ರಶ್ನಿಸಿದಾಗ, ‘ಯಾವುದೇ ಸಂಘಟನೆ ಇರಬಹುದು, ಶಾಂತಿ ಕದಡುವ ಕೆಲಸಕ್ಕೆ ಕೈ ಹಾಕಿದರೆ, ನಿಯಮಗಳನ್ನು ಮುರಿದರೆ ಕ್ರಮ ಕೈಗೊಳ್ಳುತ್ತೇವೆ. ಆರ್‌ಎಸ್‌ಎಸ್ ಸಹ ಶಾಂತಿ ಸುವ್ಯವಸ್ಥೆ ಹಾಳು ಮಾಡಿದರೆ ಕ್ರಮ ಕೈಗೊಳ್ಳಲು ಹಿಂಜರಿಯುವುದಿಲ್ಲ’ ಎಂದು ಅವರು ತಿಳಿಸಿದರು.

‘ನಮ್ಮ ನಿಲುವು ಬಹಳ ಸ್ಪಷ್ಟವಾಗಿದೆ, ಅದು ಸಂಘಟನೆಗಳು ಅಥವಾ ವ್ಯಕ್ತಿಗಳು ಅಥವಾ ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯ ಸಂಘಟನೆಗಳು ಇರಬಹುದು ಅಥವಾ ವ್ಯಕ್ತಿಯೇ ಆಗಿರಬಹುದು. ಇದರಲ್ಲಿ ಗೊಂದಲಕ್ಕೆ ಒಳಗಾಗುವಂತಹುದು ಏನಿದೆ ಎಂಬುದು ಅರ್ಥವಾಗುತ್ತಿಲ್ಲ’ ಎಂದು ಅವರು ಮರು ಪ್ರಶ್ನಿಸಿದರು.

‘ನೆಹರೂ, ಇಂದಿರಾಗೆ ಆಗದ್ದು ನಿಮಗೆ ಸಾಧ್ಯವೇ’



ಸಿ.ಟಿ.ರವಿ

ಬೆಂಗಳೂರು: ‘ನೆಹರೂ, ಇಂದಿರಾ ಗಾಂಧಿಯವರಿಂದಲೇ ಆರ್‌ಎಸ್‌ಎಸ್ ನಿಷೇಧ ಮಾಡಲು ಆಗಿಲ್ಲ. ನಿಮ್ಮಿಂದ ನಿಷೇಧ ಸಾಧ್ಯವೇ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಪ್ರಶ್ನಿಸಿದ್ದಾರೆ.

ಪ್ರಧಾನಿ, ಗೃಹ ಸಚಿವ, ಲೋಕಸಭಾಧ್ಯಕ್ಷ ಸೇರಿ ಬಹುತೇಕ ಹುದ್ದೆಗಳಲ್ಲಿ ಆರ್‌ಎಸ್‌ಎಸ್ ಸ್ವಯಂ ಸೇವಕರೇ ಇದ್ದಾರೆ ಎಂದು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

ಪ್ರಿಯಾಂಕ್ ಖರ್ಗೆ ಸೂಪರ್ ಸಿ.ಎಂನಂತೆ ವರ್ತಿಸುತ್ತಿದ್ದಾರೆ. ದೇಶ ವಿರೋಧಿ ಕೆಲಸ ಮಾಡುವ ಪಿಎಫ್ಐ ಜತೆ ಇವರಿಗೆ ದೋಸ್ತಿ ಇದೆ. ಮಾಜಿ ಶಾಸಕ ಅಖಂಡ ಶ್ರೀನಿವಾಸಮೂರ್ತಿ ಅವರ ಮನೆಗೆ ಬೆಂಕಿ ಇಟ್ಟಿದ್ದು ಬಿಜೆಪಿ ಅಥವಾ ಆರ್‌ಎಸ್‌ಎಸ್ ಅಲ್ಲ. ಪಿಎಫ್ಐ, ಎಸ್‌ಡಿಪಿಐನವರು. ಆರ್‌ಎಸ್‌ಎಸ್ ಕಾರ್ಯಕರ್ತ ರಾಜು ಸೇರಿ ಹಲವರನ್ನು ಹತ್ಯೆ ಮಾಡಿದವರು ಪಿಎಫ್ಐನವರು. ಆರ್‌ಎಸ್‌ಎಸ್ ಮತ್ತು ಪಿಎಫ್ಐ ಅನ್ನು ಹೋಲಿಸುವುದು ಬೌದ್ಧಿಕ ದಿವಾಳಿತನ ಎಂದು ಹರಿಹಾಯ್ದರು.

ಆರ್‌ಎಸ್‌ಎಸ್ ಅನ್ನು ನಿಷೇಧಿಸಲು ಹೋಗಿ ನೆಹರೂ ಮತ್ತು ಇಂದಿರಾ ಗಾಂಧಿ ಕೈ ಸುಟ್ಟುಕೊಂಡಿದ್ದರು. ಅದರ ಪರಿಣಾಮಗಳು ಏನಾದವು ಎಂಬುದನ್ನು ಪ್ರಿಯಾಂಕ್ ಖರ್ಗೆ ಅವರು ತಮ್ಮ ಹಿರಿಯರಿಂದ ತಿಳಿದುಕೊಳ್ಳಲಿ. ಆ ಬಳಿಕ ನಿಷೇಧಕ್ಕೆ ಮುಂದಾಗಲಿ ಎಂದು ಬಿಜೆಪಿ ರಾಜ್ಯ ಪ್ರಧಾನಕಾರ್ಯದರ್ಶಿ ಎನ್.ರವಿಕುಮಾರ್ ಸವಾಲು ಹಾಕಿದರು.

ಚರ್ಚೆ ನಡೆದಿಲ್ಲ: ಸಚಿವ ಪರಮೇಶ್ವರ




ಬೆಂಗಳೂರು: ‘ಬಜರಂಗದಳ, ಪಿಎಫ್ಐನಂತಹ ಸಂಘಟನೆಗಳು ಶಾಂತಿ ಕದಡಿದರೆ ಅವುಗಳನ್ನು ನಿಷೇಧಿಸಲು ಬದ್ಧ ಎಂದು ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಹೇಳಿದ್ದೆವು. ಅದರ ಹೊರತಾಗಿ ಯಾವುದೇ ಚರ್ಚೆ ನಡೆದಿಲ್ಲ’ ಎಂದು ಸಚಿವ ಜಿ. ಪರಮೇಶ್ವರ ತಿಳಿಸಿದರು.

‘ಆರ್‌ಎಸ್‌ಎಸ್ ನಿಷೇಧಿಸುವುದಕ್ಕೂ ಸರ್ಕಾರ ಸಿದ್ಧ’ ಎಂಬ ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆ ಕುರಿತು ಸುದ್ದಿಗಾರರಿಗೆ ಗುರುವಾರ ಪ್ರತಿಕ್ರಿಯಿಸಿದ ಅವರು, ‘ಪ್ರಣಾಳಿಕೆಯ ಹೊರತಾಗಿ ಏನೂ ನಡೆದಿಲ್ಲ. ಸಚಿವರು ಏನಾದರೂ ಹೇಳಿದ್ದರೆ ಅದು ಅವರ ವೈಯಕ್ತಿಕ ಅಭಿಪ್ರಾಯ. ಬಜರಂಗದಳ, ಪಿಎಫ್ಐ ಸಂಘಟನೆಗಳು ಶಾಂತಿ ಕದಡುವ ಪ್ರಯತ್ನ ಮಾಡಿದರೆ ನಿಷೇಧಿಸುವ ಮಟ್ಟಕ್ಕೂ ಹೋಗುತ್ತೇವೆ’ ಎಂದರು.

‘ಕೆಲವರು ವೈಯಕ್ತಿಕ ಅಭಿಪ್ರಾಯ ವ್ಯಕ್ತಪಡಿಸಿರಬಹುದು. ಆದರೆ, ಇಂತಹ ವಿಚಾರಗಳಲ್ಲಿ ಸರ್ಕಾರವು ಚರ್ಚಿಸಿ ಸೂಕ್ತ ತೀರ್ಮಾನಕ್ಕೆ ಬರಬೇಕಾಗುತ್ತದೆ. ಈಗ ಅಂತಹ ಯಾವುದೇ ಚರ್ಚೆ ನಡೆದಿಲ್ಲ’ ಎಂದು ಹೇಳಿದರು.

ಸುದ್ದಿ 2 ನಿಮಿಷ

ರಿವರ್ಸ್ ಗೇರ್ ಸರ್ಕಾರ: ಬೊಮ್ಮಾಯಿ ಟೀಕೆ



ಹುಬ್ಬಳ್ಳಿ: ‘ರಾಜ್ಯದಲ್ಲಿ ಇರುವುದು ರಿವರ್ಸ್ ಗೇರ್ ಸರ್ಕಾರ. ಜನರಿಗೆ ಕೊಟ್ಟ ಗ್ಯಾರಂಟಿ ಹಾಗೂ ನಾವು ಮಾಡಿರುವ ಜನಪರ ಕಾಯ್ದೆ ವಿಷಯದಲ್ಲಿ ರಿವರ್ಸ್ ಹೋಗುವುದರೊಂದಿಗೆ, ಸೇಡಿನ ಕ್ರಮಕ್ಕೆ ಮುಂದಾಗಿದೆ’ ಎಂದು ಶಾಸಕ ಹಾಗೂ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ಇಲ್ಲಿ ಟೀಕಿಸಿದರು.

ತಮ್ಮ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಅಧಿಕಾರಕ್ಕೆ ಬಂದಾಗ ಎಲ್ಲವನ್ನೂ ಬದಲಿಸುತ್ತೇವೆ ಎನ್ನುವುದು ದುರಹಂಕಾರ ತೋರಿಸುತ್ತದೆ. ಈಗ ಅವರ ಕೈಯಲ್ಲಿ ಅಧಿಕಾರವಿದೆ. ಏನೇನು ಮಾಡುತ್ತಾರೊ ನೋಡೋಣ. ಜನರಿಗೆ ಅನ್ಯಾಯವಾದರೆ ಕಾನೂನು ಮತ್ತು ರಾಜಕೀಯ ಹೋರಾಟ ಮಾಡುತ್ತೇವೆ’ ಎಂದರು.

ಜಮೀರ್ ಒತ್ತಡ: ವಕ್ಫ್ ಮಂಡಳಿ ನಾಮನಿರ್ದೇಶನ ರದ್ದತಿ ವಾಪಸ್

ಬೆಂಗಳೂರು: ರಾಜ್ಯ ವಕ್ಫ್ ಮಂಡಳಿಗೆ ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮಾಡಿದ್ದ ಸದಸ್ಯರ ನಾಮನಿರ್ದೇಶನವನ್ನು ರದ್ದುಗೊಳಿಸಿ ಹೊರಡಿಸಿದ್ದ ಅಧಿಸೂಚನೆಯನ್ನು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯು ಎರಡೇ ದಿನಗಳಲ್ಲಿ ಹಿಂಪಡೆದಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಮೇ 20ರಂದು ಅಸ್ತಿತ್ವಕ್ಕೆ ಬಂದಿತ್ತು. ಹಿಂದಿನ ಸರ್ಕಾರದ ಅವಧಿಯಲ್ಲಿ ನಿಗಮ, ಮಂಡಳಿ, ಪ್ರಾಧಿಕಾರ, ಅಕಾಡೆಮಿಗಳಿಗೆ ಮಾಡಿದ್ದ ನಾಮನಿರ್ದೇಶನಗಳನ್ನು ರದ್ದುಗೊಳಿಸುವಂತೆ ಮುಖ್ಯಮಂತ್ರಿ ಆದೇಶ ಹೊರಡಿಸಿದ್ದರು. ಆ ಬಳಿಕ ವಿವಿಧ ಇಲಾಖೆಗಳು ಪ್ರತ್ಯೇಕ ಆದೇಶಗಳನ್ನು ಹೊರಡಿಸಿದ್ದವು.

ಎನ್.ಕೆ. ಮುಹಮ್ಮದ್ ಶಾಫಿ ಸಅದಿ, ಮೀರ್ ಅಝರ್ ಹುಸೇನ್ ಮತ್ತು ಜಿ.ಕೆ. ಯಾಕೂಬ್ ಅವರನ್ನು ರಾಜ್ಯ ವಕ್ಫ್ ಮಂಡಳಿ ಸದಸ್ಯರಾಗಿ ಹಿಂದಿನ ಬಿಜೆಪಿ ಸರ್ಕಾರವು 2020ರ ಜನವರಿ 2ರಂದು ನಾಮನಿರ್ದೇಶನ ಮಾಡಿತ್ತು. ಶಾಫಿ ಸಅದಿ ಬಿಜೆಪಿ ಬೆಂಬಲದಿಂದ ವಕ್ಫ್ ಮಂಡಳಿಯ ಅಧ್ಯಕ್ಷರೂ ಆಗಿದ್ದರು. ಐಎಎಸ್ ಅಧಿಕಾರಿ ಜೆಹರಾ ನಸೀಮ್ ಅವರನ್ನು ಮಂಡಳಿಯ ಸದಸ್ಯರನ್ನಾಗಿ 2023ರ ಮಾರ್ಚ್ 9ರಂದು ನಾಮನಿರ್ದೇಶನ ಮಾಡಲಾಗಿತ್ತು.

ನಾಲ್ಕೂ ಜನರ ನಾಮನಿರ್ದೇಶವನ್ನು ರದ್ದುಗೊಳಿಸಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯು ಸೋಮವಾರ (ಮೇ 22) ಅಧಿಸೂಚನೆ ಹೊರಡಿಸಿತ್ತು. ಬುಧವಾರ ಹೊಸ ಅಧಿಸೂಚನೆ ಹೊರಡಿಸಿರುವ ಇಲಾಖೆಯು, ‘ವಕ್ಫ್ ಮಂಡಳಿ ಸದಸ್ಯರ ನಾಮನಿರ್ದೇಶನ ರದ್ದುಗೊಳಿಸಿ ಹೊರಡಿಸಿದ್ದ ಅಧಿಸೂಚನೆಯನ್ನು ಮುಂದಿನ ಆದೇಶದವರೆಗೆ ಹಿಂಪಡೆಯಲಾಗಿದೆ’ ಎಂದು ತಿಳಿಸಿದೆ.

ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿಯೊಬ್ಬರು, ‘ವಕ್ಫ್ ಮಂಡಳಿ ಸದಸ್ಯರ ನಾಮನಿರ್ದೇಶನ ರದ್ದುಗೊಳಿಸಿದ್ದ ಅಧಿಸೂಚನೆ ಹಿಂಪಡೆಯುವಂತೆ ಸಚಿವ ಬಿ.ಜೆಡ್. ಜಮೀರ್ ಅಹಮದ್ ಖಾನ್ ಅವರು ನಿರ್ದೇಶನ ನೀಡಿದ್ದರು. ಅದರಂತೆ ಕ್ರಮ ಕೈಗೊಳ್ಳಲಾಗಿದೆ’ ಎಂದು ತಿಳಿಸಿದರು.

ಜೆಡಿಎಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಅವರ ಅಧ್ಯಕ್ಷತೆಯಲ್ಲಿ ನಡೆದ ಆತ್ಮಾವಲೋಕನ ಸಭೆ

ಗ್ಯಾರಂಟಿಗಳ ಅನುಷ್ಠಾನಕ್ಕೆ ಹೋರಾಡಿ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರಿನ ಅರಮನೆ ಮೈದಾನದಲ್ಲಿ ಗುರುವಾರ ನಡೆದ ಜೆಡಿಎಸ್ ಆತ್ಮಾವಲೋಕನ ಸಭೆಯಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡ ಮಾತನಾಡಿದರು. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜಫ್ರುಲ್ಲಾ ಖಾನ್ ಮತ್ತು ಮಹಿಳಾ ಘಟಕದ ಅಧ್ಯಕ್ಷೆ ಲೀಲಾದೇವಿ ಆರ್. ಪ್ರಸಾದ್ ಇದ್ದರು – ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಗ್ಯಾರಂಟಿಗಳ ಭರವಸೆ ನೀಡಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಈಗ ಷರತ್ತು ವಿಧಿಸಲು ಹೊರಟಿದೆ. ಈಗ ನಾವು ಜನರ ಜತೆ ನಿಲ್ಲಬೇಕು. ಜನರೇ ಆಂದೋಲನಕ್ಕೆ ಧುಮುಕುವಂತೆ ಮಾಡಬೇಕು’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪಕ್ಷದ ಮುಖಂಡರಿಗೆ ಸೂಚಿಸಿದರು.

ಈ ಚುನಾವಣೆಯಲ್ಲಿ ಜೆಡಿಎಸ್ ಸೋಲಿನ ಕುರಿತು ಪರಾಮರ್ಶೆ ನಡೆಸಲು ನಗರದ ಅರಮನೆ ಮೈದಾನದಲ್ಲಿ ಗುರುವಾರ ನಡೆದ ಆತ್ಮಾವಲೋಕನ ಸಭೆಯಲ್ಲಿ ಅವರು ಮಾತನಾಡಿದರು. ಜೆಡಿಎಸ್‌ನ ನೂತನ ಶಾಸಕರು, ವಿಧಾನ ಪರಿಷತ್ ಸದಸ್ಯರು, ಪರಾಜಿತ ಅಭ್ಯರ್ಥಿಗಳು ಮತ್ತು ಪಕ್ಷದ ಜಿಲ್ಲಾ ಘಟಕಗಳ ಅಧ್ಯಕ್ಷರು ಸಭೆಯಲ್ಲಿದ್ದರು.

‘ನನಗೂ ಉಚಿತ, ನಿನಗೂ ಉಚಿತ ಎಂದು ಕಾಂಗ್ರೆಸ್ ನಾಯಕರು ಚುನಾವಣಾ ಪ್ರಚಾರದಲ್ಲಿ ಭರವಸೆ ನೀಡುತ್ತಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಗ ಹೇಳಿದ್ದೇನು? ಈಗ ಮಾಡುತ್ತಿರುವುದೇನು? ಇದನ್ನೇ ನಾವು ಜನರ ಮುಂದಿಡಬೇಕು’ ಎಂದರು.

ಕಾಂಗ್ರೆಸ್‌ನಿಂದ ಕುತಂತ್ರ: ‘ಬಿಜೆಪಿಯಿಂದ ನಲುಗಿದ ಒಂದು ಸಮುದಾಯದ ಪರವಾಗಿ ನಾವು ಧ್ವನಿ ಎತ್ತಿದ್ದೆವು. ಅಚಲವಾಗಿ ಬೆಂಬಲ ಕೊಟ್ಟು, ಬಿಜೆಪಿ ಸರ್ಕಾರ ತೊಂದರೆ ನೀಡಿದಾಗ ಹೆಜ್ಜೆ ಹೆಜ್ಜೆಗೂ ಧೈರ್ಯ ತುಂಬಿದ್ದೆವು. ಆದರೆ ಅವರು ನಮ್ಮ ಪಕ್ಷದ ಪರವಾಗಿ ನಿಲ್ಲಲಿಲ್ಲ’ ಎಂದು ಕುಮಾರಸ್ವಾಮಿ ಬೇಸರ ವ್ಯಕ್ತಪಡಿಸಿದರು.

ಪಕ್ಷದ ಅಭ್ಯರ್ಥಿಗಳಿಗೆ ಅಗತ್ಯ ಪ್ರಮಾಣದ ಆರ್ಥಿಕ ಶಕ್ತಿ ನೀಡಲು ಸಾಧ್ಯವಾಗಲಿಲ್ಲ. ಕೆಲವು ಜಿಲ್ಲಾ ಘಟಕಗಳ ಅಧ್ಯಕ್ಷರು ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಲು ಶ್ರಮಿಸಲಿಲ್ಲ. ಕೆಲವೆಡೆ ಅಭ್ಯರ್ಥಿಗಳೇ ನಾಮಪತ್ರ ಸಲ್ಲಿಸಿದ ಬಳಿಕ ಅನ್ಯ ಪಕ್ಷಗಳ ಅಭ್ಯರ್ಥಿಗಳ ಜತೆ ಶಾಮೀಲಾದರು ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಫಲಿತಾಂಶದಿಂದ ಧೈರ್ಯ ಕಳೆದುಕೊಳ್ಳಬೇಕಿಲ್ಲ. 1989ರಲ್ಲಿ ಪಕ್ಷದ ವರಿಷ್ಠ ಎಚ್.ಡಿ. ದೇವೇಗೌಡ ಅವರು ಎರಡು ಕ್ಷೇತ್ರಗಳಲ್ಲಿ ಸೋತಿದ್ದರು. ಆದರೆ, ನಂತರದ ಐದು ವರ್ಷಗಳಲ್ಲಿ ಅವರ ನೇತೃತ್ವದಲ್ಲೇ ಪೂರ್ಣ ಪ್ರಮಾಣದ ಸರ್ಕಾರ ಬಂತು. ಈಗಲೂ ಪಕ್ಷ ಬಲಪಡಿಸಲು ಸಾಧ್ಯವಿದೆ. ಮೈಮರೆಯದೆ ಕೆಲಸ ಮಾಡಬೇಕು ಎಂದು ಸೂಚಿಸಿದರು.

ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಸಭೆಯಲ್ಲಿದ್ದರು.

‘ಲೋಕಸಭೆ ಚುನಾವಣೆವರೆಗೆ ಅಷ್ಟೆ ಸರ್ಕಾರ ಸುಭದ್ರ’

ಬೆಂಗಳೂರು: ‘ಲೋಕಸಭಾ ಚುನಾವಣೆವರೆಗಷ್ಟೇ ಈ ಸರ್ಕಾರ ಸುಭದ್ರ. ಆ ಬಳಿಕ ಏನು ಬೇಕಾದರೂ ಆಗಬಹುದು’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಚುನಾವಣಾ ಸೋಲಿನ ಕುರಿತು ನಗರದ ಅರಮನೆ ಮೈದಾನದಲ್ಲಿ ಜೆಡಿಎಸ್ ಗುರುವಾರ ಆಯೋಜಿಸಿದ್ದ ಆತ್ಮಾವಲೋಕನ ಸಭೆಯಲ್ಲಿ ಮಾತನಾಡಿದ ಅವರು, ‘ಮುಂದಿನ ವರ್ಷ ನಡೆಯುವ ಲೋಕಸಭಾ ಚುನಾವಣೆಯ ಫಲಿತಾಂಶದ ಮೇಲೆ ಈ ಸರ್ಕಾರದ ಭವಿಷ್ಯ ನಿಂತಿದೆ’ ಎಂದರು.

‘ನಾನು ಭವಿಷ್ಯ ಹೇಳುತ್ತಿಲ್ಲ. ಲೋಕಸಭಾ ಚುನಾವಣೆ ಬಳಿಕ ಏನೆಲ್ಲಾ ಬೆಳವಣಿಗೆ ನಡೆಯುತ್ತದೆಯೋ ಗೊತ್ತಿಲ್ಲ. ಈ ಸರ್ಕಾರ ಇರಬಹುದು ಅಥವಾ ಹೋಗಬಹುದು. ಏನು ಬೇಕಾದರೂ ಆಗಬಹುದು’ ಎಂದು ಹೇಳಿದರು.

‘ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 135 ಸ್ಥಾನಗಳನ್ನು ಗೆದ್ದಿದೆ. ಆದರೆ, ಸರ್ಕಾರದಲ್ಲಿ ವಿಶ್ವಾಸದ ಕೊರತೆ ಇದೆ. ಜನರ ಕೆಲಸ ಮಾಡಲು ಸರ್ಕಾರದಲ್ಲಿ ಇರುವವರಿಗೆ ಆಗುತ್ತಿಲ್ಲ. ನಾವು ಪಕ್ಷ ಸಂಘಟನೆಯತ್ತ ಗಮನಹರಿಸುತ್ತೇವೆ. ವಿಷಯಾಧಾರಿತವಾಗಿ ಹೋರಾಟ ಮಾಡಬೇಕು. ಪಕ್ಷದ ಸಂಘಟನೆಯನ್ನು ಬಲಪಡಿಸಿಕೊಂಡು ಜನರ ಜತೆ ನಿಲ್ಲೋಣ’ ಎಂದರು.

‘ಪಕ್ಷ ಉಳಿಸಲು ಬದ್ಧ’

‘ಪಕ್ಷಕ್ಕಾಗಿ ಜೀವ ಸವೆಸಿದ್ದೇನೆ. ಕೊನೆಯ ಉಸಿರು ಇರುವವರೆಗೂ ಪಕ್ಷಕ್ಕಾಗಿ ಹೋರಾಡುತ್ತೇನೆ. ಈ ಪಕ್ಷವನ್ನು ಉಳಿಸಿಕೊಳ್ಳಲು ನಾನು ಬದ್ಧ’ ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಹೇಳಿದರು.

‘ಸೋಲಿಗೆ ಕಾರಣಗಳನ್ನು ಹುಡುಕೋಣ. ಸೋತಾಗ ನಿರಾಶೆ, ನೋವು ಸಹಜ. ನಾನು ಈ ಎಲ್ಲ ಹಂತಗಳನ್ನು ದಾಟಿಕೊಂಡು ಬಂದಿದ್ದೇನೆ’ ಎಂದರು.

‘ಗ್ಯಾರಂಟಿ ಬಗ್ಗೆ ಬಿಜೆಪಿಗೆ ಹೊಟ್ಟೆಯುರಿ’

ಬೆಂಗಳೂರು: ‘ಗ್ಯಾರಂಟಿಗಳನ್ನು ಜಾರಿ ಮಾಡುವ ಸಂಬಂಧ ನುಡಿದಂತೆ ನಡೆದಿರುವ ನಮ್ಮನ್ನು ನೋಡಿ ಬಿಜೆಪಿಗೆ ಹತಾಶೆಯಾಗಿದೆ. ಹೊಟ್ಟೆ ಉರಿಯಿಂದ ಅಪಪ್ರಚಾರ ಮಾಡುತ್ತಿದೆ’ ಎಂದು ಸಚಿವ ಜಿ.ಪರಮೇಶ್ವರ ಹೇಳಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಹೀಗೆ ಮುಂದುವರೆದರೆ ತಮ್ಮ ಗತಿಯೇನು ಎಂಬ ಆತಂಕಕ್ಕೆ ಒಳಗಾಗಿ ಅವರು ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಿದ್ದಾರೆ’ ಎಂದು ಹೇಳಿದ್ದಾರೆ.

‘ಚುನಾವಣೆಯ ಮೊದಲು ನೀಡಿದ ಭರವಸೆಯಂತೆ ನಡೆದುಕೊಂಡಿದ್ದೇವೆ. ಪ್ರಮಾಣ ವಚನ ಸ್ವೀಕರಿಸಿದ ಒಂದು ಗಂಟೆಯೊಳಗೆ ಸಂಪುಟ ಸಭೆಯನ್ನು ನಡೆಸಿ, ಗ್ಯಾರಂಟಿ ಜಾರಿ ಮಾಡುವ ಸಂಬಂಧ ತೀರ್ಮಾನ ತೆಗೆದುಕೊಂಡು, ಅದೇ ದಿನ ಸಂಜೆಯೇ ಆದೇಶವನ್ನೂ ಹೊರಡಿಸಿದ್ದೇವೆ’ ಎಂದು ಅವರು ಹೇಳಿದರು.

ಗೋ ಸಾಗಣೆಗೆ ಇ–ಪರವಾನಗಿ ಕಡ್ಡಾಯ

• ಜಿ.ಬಿ.ನಾಗರಾಜ್

ಚಿತ್ರದುರ್ಗ: ಜಾನುವಾರು ಸಾಗಣೆಯ ಪರವಾನಗಿ ಪಡೆಯುವ ವ್ಯವಸ್ಥೆಗೆ ತಾಂತ್ರಿಕ ಸ್ಪರ್ಶ ನೀಡಿರುವ ಪಶುಸಂಗೋಪನಾ ಇಲಾಖೆಯು, ‘ಇ – ಪರವಾನಗಿ’ಯನ್ನು ಕಡ್ಡಾಯಗೊಳಿಸಿದೆ. ವಾಹನದಲ್ಲಿ ಸಾಗಣೆಯಾಗುವ ಜಾನುವಾರುಗಳ ಖಚಿತತೆಗೆ ಇದು ಸಹಕಾರಿಯಾಗುತ್ತಿದೆ.

‘ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆ–2021’ಕ್ಕೆ ಅನುಗುಣವಾಗಿ ನೂತನ ವ್ಯವಸ್ಥೆ ರೂಪುಗೊಂಡಿದೆ. ಜಾನುವಾರುಗಳ ಮಾಲೀಕರು, ಖರೀದಿದಾರರು, ಸಾಗಣೆದಾರರಿಗೆ ಎದುರಾಗುತ್ತಿದ್ದ ತೊಂದರೆಯನ್ನು ನೀಗಿಸಲು ಈ ವ್ಯವಸ್ಥೆ ನೆರವಾಗಿದೆ.

ಹಸು, ಕರು, ಎತ್ತು, ಎಮ್ಮೆ ಹಾಗೂ ಕೋಣ ಸಾಗಣೆಗೆ ಪರವಾನಗಿಯನ್ನು ಕಡ್ಡಾಯಗೊಳಿಸಿ ಇಲಾಖೆಯು 2021ರ ಜನವರಿಯಲ್ಲಿ ನೀತಿ ರೂಪಿಸಿತ್ತು. ಗೋಹತ್ಯೆ ನಿಷೇಧ ಕಾಯ್ದೆ ಜಾರಿಗೊಂಡ ಬಳಿಕ ಇದು ಕಟ್ಟುನಿಟ್ಟಾಗಿ ಜಾರಿಗೊಂಡಿತ್ತು. ಕೃಷಿ ಹಾಗೂ ಪಶುಸಂಗೋಪನೆಯ ಉದ್ದೇಶಕ್ಕೂ ಜಾನುವಾರು ಸಾಗಣೆಗೆ ಪರವಾನಗಿ ಕಡ್ಡಾಯಗೊಳಿಸಲಾಗಿತ್ತು. ಪರವಾನಗಿ ಪಡೆಯಲು ಇಲಾಖೆ, ಪಶು ಆಸ್ಪತ್ರೆಗಳಿಗೆ ಅಲೆಯಬೇಕಾಗಿತ್ತು. ಹೊಸ ವ್ಯವಸ್ಥೆಯಿಂದ ಇದು ತಪ್ಪಲಿದೆ.

ಪರವಾನಗಿ ಅಗತ್ಯ ಇರುವವರು ಮನೆಯಿಂದಲೇ ಅರ್ಜಿ ಸಲ್ಲಿಸಬಹುದು. ಇದಕ್ಕಾಗಿ ಇಲಾಖೆಯು https://animaltrans.karahvs.in ಜಾಲತಾಣವನ್ನು ರೂಪಿಸಿದೆ.

ಪಶುಪಾಲನೆ, ಚಿಕಿತ್ಸೆ, ಕೃಷಿ, ಮಾರಾಟ, ಗೋಶಾಲೆ, ಜಾನುವಾರು ಜಾತ್ರೆ, ಕಸಾಯಿ ಖಾನೆ ಹೀಗೆ ಸಾಗಣೆಯ ಉದ್ದೇಶವನ್ನು ನಮೂದಿಸಬೇಕು. ಸಾಗಣೆಗೆ ಬಳಸುವ ವಾಹನದ ಸಂಖ್ಯೆ, ಚಾಲಕನ ಹೆಸರು, ಚಾಲನಾ ಪರವಾನಗಿ, ದೂರವಾಣಿ ಸಂಖ್ಯೆ, ಸಾಗಣೆ ಮಾಡುವ ಜಾನುವಾರು ಹಾಗೂ ಅದರ ಮಾಲೀಕರ ಚಿತ್ರವನ್ನು ಅರ್ಜಿಯೊಂದಿಗೆ ಕಳುಹಿಸಬೇಕು. ವಾಹನ ಕ್ರಮಿಸುವ ದೂರ, ಸ್ಥಳದ ಮಾಹಿತಿ ಒದಗಿಸಬೇಕು. ಅರ್ಜಿ ಯಾವ ಹಂತದಲ್ಲಿದೆ ಎಂಬುದನ್ನು ತಿಳಿಯಲೂ ಜಾಲತಾಣದಲ್ಲಿ ಅವಕಾಶ ಕಲ್ಪಿಸಲಾಗಿದೆ.

ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಯು ಸಂಬಂಧಿಸಿದ ಪಶುವೈದ್ಯಾಧಿಕಾರಿಗೆ ರವಾನೆಯಾಗುತ್ತದೆ. ಅರ್ಜಿ ವಿಲೇವಾರಿಗೆ ಕಾಲಮಿತಿ ನಿಗದಿಪಡಿಸಿ ‘ಸಕಾಲ’ದ ವ್ಯಾಪ್ತಿಗೆ ತರಲಾಗಿದೆ. ಕ್ಯೂ ಆರ್ ಕೋಡ್ ಹೊಂದಿದ ಇ–ಪರವಾನಗಿಯನ್ನು ಸಾಗಣೆ ಸಂದರ್ಭದಲ್ಲಿ ಪೊಲೀಸರು ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ತೋರಿಸಬಹುದು.

ಜಾನುವಾರುಗಳ ಕಳ್ಳಸಾಗಣೆ ತಡೆಯಲು ಈ ವ್ಯವಸ್ಥೆ ಅನುಕೂಲ ಕಲ್ಪಿಸಲಿದೆ. ಅಲ್ಲದೆ, ಕೆಲವು ಕೋಮುಗಳ ನಡುವೆ ನಡೆಯುತ್ತಿದ್ದ ಕಲಹಕ್ಕೂ ಕಡಿವಾಣ ಬೀಳಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಂಚನೆಗೆ ಕಡಿವಾಣ



ಕೈಯಲ್ಲಿ ಅರ್ಜಿ ಭರ್ತಿ ಮಾಡಿಸಿ ಪಡೆಯುತ್ತಿದ್ದ ಪರವಾನಗಿಯನ್ನು ದುರ್ಬಳಕೆ ಮಾಡಿಕೊಳ್ಳಲು ಅವಕಾಶವಿತ್ತು. ಒಂದು ಜಾನುವಾರು ಸಾಗಣೆಗೆ ಅನುಮತಿ ಪಡೆದು ಮತ್ತೊಂದು ಜಾನುವಾರು ಸಾಗಣೆ ಮಾಡುವುದು ಇಲಾಖೆಯ ಗಮನಕ್ಕೆ ಬಂದಿತ್ತು. ಇದಕ್ಕೆ ಕಡಿವಾಣ ಹಾಕಲು ಇ–ಪರವಾನಗಿಯಲ್ಲಿ ಜಾನುವಾರುವಿನ ಭಾವಚಿತ್ರ, ಕಿವಿ ಓಲೆ ಸಂಖ್ಯೆ ಕಡ್ಡಾಯಗೊಳಿಸಲಾಗಿದೆ.

‘ಹಿಂದೆ ಪರವಾನಗಿ ಪಡೆದವರು ಜಾನುವಾರುಗಳನ್ನು ಅದಲು ಬದಲು ಮಾಡಿ ಸಾಗಿಸುತ್ತಿದ್ದರು. ಈಗ ಇ– ಪರವಾನಗಿಯಲ್ಲಿ ಜಾನುವಾರು ಚಿತ್ರವು ಇರುವುದರಿಂದ ವಂಚನೆಗೆ ಕಡಿವಾಣ ಬೀಳಲಿದೆ’ ಎನ್ನುತ್ತಾರೆ ಪಶುಸಂಗೋಪನಾ ಇಲಾಖೆಯ ಉಪನಿರ್ದೇಶಕ ಎ.ಬಾಬುರತ್ನ.

ಇ–ಪರವಾನಗಿ ಸೌಲಭ್ಯದಿಂದ ಪಾರದರ್ಶಕ ವ್ಯವಸ್ಥೆ ರೂಪುಗೊಂಡಿದೆ. ಜಾನುವಾರು ಸಾಗಣೆ ವಿವರ, ಅರ್ಜಿಯ ಸ್ಥಿತಿ ಎಲ್ಲರಿಗೂ ಸುಲಭವಾಗಿ ಲಭ್ಯವಾಗುತ್ತವೆ.

ಎ.ಬಾಬುರತ್ನ, ಉಪನಿರ್ದೇಶಕ, ಪಶುಸಂಗೋಪನಾ ಇಲಾಖೆ

ಸಂಕ್ಷಿಪ್ತ ಸುದ್ದಿ

ಜೆಡಿಎಸ್ ಯುವ ಘಟಕಕ್ಕೆ ನಿಖಿಲ್ ರಾಜೀನಾಮೆ



ಬೆಂಗಳೂರು: ನಿಖಿಲ್ ಕುಮಾರಸ್ವಾಮಿ ಅವರು ಜೆಡಿಎಸ್ ಯುವ ಘಟಕದ ಅಧ್ಯಕ್ಷ ಸ್ಥಾನಕ್ಕೆ ಬುಧವಾರ ರಾಜೀನಾಮೆ ಸಲ್ಲಿಸಿದ್ದಾರೆ.

ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿರುವ ಅವರು, ‘ಚುನಾವಣಾ ಫಲಿತಾಂಶ ಅತೀವ ಬೇಸರ ತಂದಿದೆ. ಈಗ ಪಕ್ಷವನ್ನು ಮರು ಸಂಘಟಿಸಬೇಕಿದೆ. ಹೊಸ ನಾಯಕತ್ವಕ್ಕೆ ಅವಕಾಶ ನೀಡುವ ದೃಷ್ಟಿಯಿಂದ ನನ್ನ ರಾಜೀನಾಮೆಯನ್ನು ಅಂಗೀಕರಿಸಬೇಕು’ ಎಂದು ಮನವಿ ಮಾಡಿದ್ದಾರೆ.

ಹುಂಡಿಯಲ್ಲಿ ₹1.02 ಕೋಟಿ ಸಂಗ್ರಹ

ಮುನಿರಾಬಾದ್ (ಕೊಪ್ಪಳ ಜಿಲ್ಲೆ): ಕಲ್ಯಾಣ ಕರ್ನಾಟಕ ಭಾಗದ ಪ್ರಸಿದ್ಧ ಯಾತ್ರಾ ಸ್ಥಳ ಹುಲಿಗಿ ಹುಲಿಗೆಮ್ಮ ದೇವಿ ದೇವಸ್ಥಾನದಲ್ಲಿನ ಹುಂಡಿ ಎಣಿಕೆ ಮಾಡಲಾಗಿದ್ದು, 35 ದಿನದಲ್ಲಿ ₹1.02 ಕೋಟಿ ನಗದು ಸಂಗ್ರಹವಾಗಿದೆ.

ಎರಡು ದಿನ ಎಣಿಕೆ ನಡೆಯಿತು. ₹1.02 ಕೋಟಿ ನಗದು, 350 ಗ್ರಾಂ ಚಿನ್ನ, 15 ಕೆ.ಜಿ ಬೆಳ್ಳಿ ಸಂಗ್ರಹವಾಗಿದೆ. ಕಡಿಮೆ ಅವಧಿಯಲ್ಲಿ ಒಂದು ಕೋಟಿ ಸಂಗ್ರಹವಾಗಿರುವುದು ಇದೇ ಮೊದಲು ಎಂದು ದೇವಸ್ಥಾನದ ಸಿಬ್ಬಂದಿ ತಿಳಿಸಿದರು.

ಪ್ರಸಿದ್ಧ ಜಾತ್ರೆ: ಇಲ್ಲಿಯ ದೇವಸ್ಥಾನ ಸರ್ಕಾರದ ಕ್ಲಾಸ್ 1 ಪ್ರತಿಷ್ಠಿತ ದೇವಸ್ಥಾನಗಳ ಪಟ್ಟಿಯಲ್ಲಿದೆ. ಹುಲಿಗೆಮ್ಮ ದೇವಿಗೆ ರಾಜ್ಯವಲ್ಲದೆ ಪಕ್ಕದ ರಾಜ್ಯಗಳಲ್ಲಿ ಕೂಡ ಹೆಚ್ಚಿನ ಭಕ್ತರಿದ್ದಾರೆ.

ಸಿಮ್ಸ್ ಡೀನ್ ವಿರುದ್ಧ ತನಿಖೆ

ಚಾಮರಾಜನಗರ: ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಅವಹೇಳನ ಮಾಡಿದ ಆರೋಪ ಹೊತ್ತಿರುವ ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ (ಸಿಮ್ಸ್) ಡೀನ್ ಮತ್ತು ನಿರ್ದೇಶಕ ಡಾ.ಜಿ.ಎಂ.ಸಂಜೀವ್ ವಿರುದ್ಧ ವೈದ್ಯಕೀಯ ಶಿಕ್ಷಣ ಇಲಾಖೆ ತನಿಖೆ ಆರಂಭಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆಯ ಅನ್ವಯ, ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ನವೀನ್ ರಾಜ್ ಸಿಂಗ್ ಅವರು ತನಿಖಾ ಸಮಿತಿಯನ್ನು ರಚಿಸಿ ಬುಧವಾರ ಆದೇಶ ಹೊರಡಿಸಿದ್ದರು.

ಸಮಿತಿಯಲ್ಲಿರುವ ಡಾ.ರವಿ ಮತ್ತು ಕೆ.ಎ.ಉಮಾ ಅವರು ಜಿಲ್ಲಾಧಿಕಾರಿ ಡಿ.ಎಸ್.ರಮೇಶ್ ಮತ್ತು ಎಸ್‌ಪಿ ಪದ್ಮಿನಿ ಸಾಹು ಅವರೊಂದಿಗೆ ಸಿಮ್ಸ್‌ಗೆ ಭೇಟಿ ನೀಡಿ ಮಾಹಿತಿ ಕಲೆ ಹಾಕಿ ಹಿಂದಿರುಗಿದರು.





ಕಲಬುರಗಿ ತಾಲ್ಲೂಕಿನ ಪಾಣೇಗಾಂವ ಗ್ರಾಮದಲ್ಲಿ ಮಕ್ಕಳು ವೃದ್ಧೆಯನ್ನು ಗಾಲಿಕುರ್ಚಿ ಮೇಲೆ ಮತಗಟ್ಟೆಗೆ ಕರೆದೊಯ್ದ ಚಿತ್ರ (ಪ್ರಥಮ ಬಹುಮಾನ) ಮಂಗಳೂರಿನ ಪಾವೂರು–ಉಳಿಯ ದ್ವೀಪದ ಮತದಾರರು ದೋಣಿಯಲ್ಲಿ ಮತಗಟ್ಟೆಗೆ ಬಂದ ಚಿತ್ರ (ತೃತೀಯ ಬಹುಮಾನ)

ಚಿತ್ರ ಸ್ಪರ್ಧೆ: ಪ್ರಜಾವಾಣಿಯ ಇಬ್ಬರಿಗೆ ಬಹುಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭಾ ಚುನಾವಣೆ ಅವಧಿಯಲ್ಲಿ ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿಯು ನಡೆಸಿದ ರಾಜ್ಯಮಟ್ಟದ ಛಾಯಾಚಿತ್ರ ಸ್ಪರ್ಧೆಯಲ್ಲಿ ‘ಪ್ರಜಾವಾಣಿ’ಯ ಕಲಬುರಗಿ ಬ್ಯೂರೊ ಹಿರಿಯ ಛಾಯಾಗ್ರಾಹಕ ತಾಜುದ್ದೀನ್ ಆಜಾದ್ ಅವರಿಗೆ ಪ್ರಥಮ ಹಾಗೂ ಮಂಗಳೂರಿನ ‘ಪ್ರಜಾವಾಣಿ’ ಬ್ಯೂರೊಗಳ ಛಾಯಾಗ್ರಾಹಕ ಫಕ್ರುದ್ದೀನ್ ಎಚ್. ಅವರಿಗೆ ತೃತೀಯ ಬಹುಮಾನ ಲಭಿಸಿವೆ.

ಬಾಗಲಕೋಟೆಯ ಹಳ್ಳಿ ಸಂದೇಶ ಸುದ್ದಿ ಪತ್ರಿಕೆ ಛಾಯಾಗ್ರಾಹಕ ಇಂದ್ರಕುಮಾರ್ ದಸ್ತೇನವರ್ ಅವರಿಗೆ ದ್ವಿತೀಯ ಬಹುಮಾನ ದೊರಕಿದೆ.

ಹವ್ಯಾಸಿ ಛಾಯಾಗ್ರಾಹಕ ಕೆ. ವೆಂಕಟೇಶ್ ಅವರನ್ನು ವಿಶೇಷ ಬಹುಮಾನಕ್ಕೆ ಆಯ್ಕೆ ಮಾಡಲಾಗಿದೆ.

ಕನ್ನಡಪ್ರಭದ ಬೆಂಗಳೂರಿನ ಹಿರಿಯ ಛಾಯಾಗ್ರಾಹಕ ಸುರೇಶ್ ಪಿ. ಮತ್ತು ಎಕನಾಮಿಕ್ ಟೈಮ್ಸ್ ಛಾಯಾಗ್ರಾಹಕ ಎನ್. ನರಸಿಂಹಮೂರ್ತಿ ಅವರಿಗೆ ಸಮಾಧಾನಕರ ಬಹುಮಾನಗಳು ಲಭಿಸಿವೆ.

ಮೇ 10 ರಂದು ನಡೆದ ಮತದಾನದ ಸಂದರ್ಭದ ಛಾಯಾಚಿತ್ರಗಳನ್ನು ಸ್ಪರ್ಧೆಗೆ ಆಹ್ವಾನಿಸಲಾಗಿತ್ತು.

63 ಜನ ಛಾಯಾಗ್ರಾಹಕರು ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು.

ಆಯ್ಕೆ ಸಮಿತಿಯು ಎಲ್ಲ ಛಾಯಾಚಿತ್ರಗಳನ್ನು ಪರಿಶೀಲಿಸಿ, ಅತ್ಯುತ್ತಮ ಚಿತ್ರಗಳನ್ನು ಬಹುಮಾನಕ್ಕೆ ಆಯ್ಕೆ ಮಾಡಿದೆ ಎಂದು ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

ಪ್ರಥಮ ಬಹುಮಾನಕ್ಕೆ ₹25,000, ದ್ವಿತೀಯ ಬಹುಮಾನಕ್ಕೆ ₹15,000, ತೃತೀಯ ಬಹುಮಾನಕ್ಕೆ ₹10,000, ವಿಶೇಷ ಬಹುಮಾನಕ್ಕೆ ₹5,000 ಮತ್ತು ಸಮಾಧಾನಕರ ಬಹುಮಾನಗಳಿಗೆ ತಲಾ ₹3,000 ನಗದು ನೀಡಲಾಗುತ್ತದೆ.

ಶೀಘ್ರದಲ್ಲಿಯೇ ಬಹುಮಾನ ವಿತರಣೆ ನಡೆಯಲಿದೆ ಎಂದು ಮಾಹಿತಿ ನೀಡಿದ್ದಾರೆ.

ಪಡಿತರ ಚೀಟಿ, ಆಧಾರ್ ಜೋಡಣೆಗೆ ₹250 ವಸೂಲಿ ಆರೋಪ


ಸೈಬರ್ ಕೇಂದ್ರಗಳಿಗೆ ‘ಗೃಹಲಕ್ಷ್ಮಿ’ಯರ ಲಗ್ಗೆ

ಪ್ರಜಾವಾಣಿ ವಾರ್ತೆ

ಕೆಜಿಎಫ್ (ಕೋಲಾರ): ರಾಜ್ಯ ಸರ್ಕಾರದ ಗೃಹಲಕ್ಷ್ಮಿ ಯೋಜನೆ ಅಡಿ ಹೆಸರು ನೋಂದಾಯಿಸಲು ಗುರುವಾರ ಮುಂಜಾನೆ ನೂರಾರು ಮಹಿಳೆಯರು ನಗರದ ಸೈಬರ್ ಸೆಂಟರ್‌ಗಳಿಗೆ ಮುಗಿಬಿದ್ದಿದ್ದರು.

ಪಡಿತರ ಚೀಟಿಗೆ ಮೇ 31ರ ಒಳಗಾಗಿ ಆಧಾರ್ ಜೋಡಣೆ ಮಾಡಿ ಹೆಸರು ನೋಂದಾಯಿಸಿದರೆ ಮಾತ್ರ ಗೃಹಲಕ್ಷ್ಮಿ ಯೋಜನೆ ಅಡಿ ಮನೆಯ ಯಜಮಾನಿಗೆ ಪ್ರತಿ ತಿಂಗಳು ₹2 ಸಾವಿರ ಸಿಗುತ್ತದೆ ಎಂಬ ಸುಳ್ಳು ಸಂದೇಶ ಸಾಮಾಜಿಕ ಜಾಲತಾಣ ಮತ್ತು ವಾಟ್ಸ್‌ಆ್ಯಪ್‌ಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ.

ಇದನ್ನು ನಂಬಿದ ಮಹಿಳೆಯರು ಮುಂಜಾನೆಯಿಂದಲೂ ಎಲ್ಲ ದಾಖಲೆಗಳೊಂದಿಗೆ ಸೈಬರ್ ಸೆಂಟರ್‌ಗಳ ಮುಂದೆ ಸರದಿ ಸಾಲಿನಲ್ಲಿ ನಿಂತಿದ್ದರು. ನಗರದ ಬಹುತೇಕ ಸೈಬರ್ ಸೆಂಟರ್‌ಗಳು ಮಹಿಳೆಯರಿಂದ ತುಂಬಿದ್ದವು. ಪಡಿತರ ಚೀಟಿಗೆ ಆಧಾರ್ ಜೋಡಣೆ ಮಾಡಲು ಬಂದಿರುವುದಾಗಿ ಅವರು ಹೇಳಿದರು.



ವ್ಯಾಟ್ಸ್‌ಆ್ಯಪ್‌ನಲ್ಲಿ ಹರಿದಾಡುತ್ತಿರುವ ಸಂದೇಶದ ಚಿತ್ರ

ಗೃಹಲಕ್ಷ್ಮಿ ಯೋಜನೆಯಲ್ಲಿ ಮನೆಯ ಯಜಮಾನಿ ಪ್ರತಿ ತಿಂಗಳು ₹2,000 ಪಡೆಯಲು ಆಧಾರ್ ಜೋಡಣೆ ಮಾಡಿರಬೇಕು. ಮನೆಯ ಯಜಮಾನಿ ಹೆಸರಿನಲ್ಲಿ ಪಡಿತರ ಚೀಟಿ ಇರಬೇಕು. ಆಧಾರ್ ಸಂಖ್ಯೆ ಬ್ಯಾಂಕ್ ಖಾತೆಗೆ ಜೋಡಣೆಯಾಗಿರಬೇಕು ಮತ್ತು ಬ್ಯಾಂಕ್ ಖಾತೆ ಚಾಲ್ತಿಯಲ್ಲಿರಬೇಕು ಎಂದು ವಾಟ್ಸ್‌ಆ್ಯಪ್‌ನಲ್ಲಿ ಹರಿದಾಡುತ್ತಿರುವ ಸಂದೇಶವನ್ನು ಮಹಿಳೆಯರು ತೋರಿಸಿದರು. ಈ ಸಂದೇಶದ ಕೆಳಗೆ ಸೈಬರ್ ಸೆಂಟರ್ ಹೆಸರು, ಸಂಪರ್ಕ ಸಂಖ್ಯೆಯನ್ನೂ ಮುದ್ರಿಸಲಾಗಿದೆ.

‘ಕಾಂಗ್ರೆಸ್ ಸರ್ಕಾರ ಘೋಷಿಸಿರುವ ಗೃಹಲಕ್ಷ್ಮಿ ಯೋಜನೆಗೆ ಹೆಸರು ನೋಂದಾಯಿಸಲು ಮೇ 31 ಕಡೆ ದಿನ ಎಂದು ಹೇಳಿದ ಕಾರಣ ಬ್ಯಾಂಕ್ ಖಾತೆಗೆ ಪಡಿತರ ಚೀಟಿ, ಆಧಾರ್ ಲಿಂಕ್ ಮಾಡಿಸಲು ಬಂದಿದ್ದೇವೆ’ ಎಂದು ಸರದಿಯಲ್ಲಿ ನಿಂತಿದ್ದ ಮಹಿಳೆಯರು ತಾವು ತಂದಿದ್ದ ಬ್ಯಾಂಕ್ ಪಾಸ್‌ಬುಕ್, ಆಧಾರ್ ಕಾರ್ಡ್ ಮತ್ತು ಪಡಿತರ ಚೀಟಿ ತೋರಿಸಿದರು.

ಪಡಿತರ ಚೀಟಿಗೆ ಆಧಾರ್ ಜೋಡಣೆಗೆ ಸೈಬರ್ ಸೆಂಟರ್‌ನವರು ₹250 ಹಣ ಪಡೆಯುತ್ತಿದ್ದಾರೆ. ಸಾಮಾನ್ಯ ದಿನಗಳಲ್ಲಿ ಆಧಾರ್ ಲಿಂಕ್ ಮಾಡಲು ₹40 ರಿಂದ ₹50 ಶುಲ್ಕ ಪಡೆಯುತ್ತಾರೆ. ನಗರದಲ್ಲಿ 23 ಸಾವಿರಕ್ಕೂ ಹೆಚ್ಚು ಬಿಪಿಎಲ್ ಕಾರ್ಡ್‌ದಾರರಿದ್ದು, 800 ಅಂತ್ಯೋದಯ ಮತ್ತು 760 ಎಪಿಎಲ್ ಕಾರ್ಡ್‌ದಾರರಿದ್ದಾರೆ.

‘ಸರ್ಕಾರದಿಂದ ಮಾರ್ಗಸೂಚಿ ಆಗಿಲ್ಲ’

‘ಸರ್ಕಾರದಿಂದ ಇದುವರೆಗೂ ನಮಗೆ ಯಾವುದೇ ಅಧಿಕೃತ ಮಾಹಿತಿ ಬಂದಿಲ್ಲ. ಗೃಹಲಕ್ಷ್ಮಿ ಯೋಜನೆ ಅಡಿ ಪ್ರತಿ ತಿಂಗಳು ಹಣ ಬಿಡುಗಡೆಗೆ ಮಾರ್ಗಸೂಚಿ ಕೂಡ ಬಿಡುಗಡೆಯಾಗಿಲ್ಲ. ರಾಜ್ಯ ಸರ್ಕಾರ ತಾತ್ವಿಕ ಒಪ್ಪಿಗೆ ನೀಡಿದೆ. ಸಚಿವ ಸಂಪುಟ ಒಪ್ಪಿಗೆ ದೊರೆತ ಬಳಿಕ ಮಾರ್ಗಸೂಚಿ ಬಿಡುಗಡೆಗೆ ಸಮಯಾವಕಾಶ ಬೇಕಾಗುತ್ತದೆ’ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಪೂರೈಕೆ ಇಲಾಖೆಯ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

‘ಗೃಹಲಕ್ಷ್ಮಿ ಯೋಜನೆ ಅಡಿ ಹೆಸರು ನೋಂದಾಯಿಸಲು ಪಡಿತರ ಚೀಟಿಗೆ ಆಧಾರ್ ಜೋಡಣೆ ಮಾಡುವುದಾಗಿ ಹೇಳಿ ಸೈಬರ್ ಸೆಂಟರ್‌ಗಳಲ್ಲಿ ಮಹಿಳೆಯರಿಂದ ಹಣ ವಸೂಲಿ ಮಾಡಿರುವ ಬಗ್ಗೆ ದೂರು ಬಂದ ಹಿನ್ನೆಲೆಯಲ್ಲಿ ಆಹಾರ ನಿರೀಕ್ಷಕರು ನಗರದ ಆರು ಸೈಬರ್ ಸೆಂಟರ್‌ಗಳಿಗೆ ತೆರಳಿ ಪರಿಶೀಲಿಸುತ್ತಿದ್ದಾರೆ’ ಎಂದು ಅಧಿಕಾರಿಗಳು ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಕಿರುತೆರೆಯಿಂದ 'ಮುನ್ನುಡಿ' ಚಿತ್ರದ ಮೂಲಕ ಹಿರಿತೆರೆ ಪಯಣ ಆರಂಭಿಸಿದ್ದ ಛಾಯಾ ಸಿಂಗ್, ಮತ್ತೆ ಕಿರುತೆರೆಗೆ ಮರಳಿದ್ದಾರೆ.



ಸಂಖ್ಯೆ-ಸುದ್ದಿ
'ಸ್ಮಾರ್ಟ್ ಸಿಟಿ' ಪ್ರಗತಿಗೆ ಕೇಂದ್ರವೇ ಅಡ್ಡಗಾಲು

ಏಂಜೆಲ್ ತೆರಿಗೆ: 21 ದೇಶಕ್ಕೆ ವಿನಾಯಿತಿ 8
'ದೇಶದ ಸಂಸದೀಯ ವ್ಯವಸ್ಥೆ ನಾಶ' 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,872 ▲	18,321 ▲	₹62,100 (ಬೆಂಗಳೂರು) ▼	₹72,300 (ಬೆಂಗಳೂರು) ▼	82.72 ▼

ಕುನೊ ಉದ್ಯಾನ ಮತ್ತೆರಡು ಚೀತಾ ಮರಿಗಳ ಸಾವು

ಭೋಪಾಲ್ (ಪಿಟಿಐ): ನಮೀಬಿಯಾದಿಂದ ಭಾರತದ ಕುನೊ ರಾಷ್ಟ್ರೀಯ ಉದ್ಯಾನಕ್ಕೆ ಕರೆತಂದಿದ್ದ ಚೀತಾಗಳ ಪೈಕಿ 'ಜ್ವಾಲಾ' ಎನ್ನುವ ಚೀತಾದ ಎರಡು ಮರಿಗಳು ಮೃತಪಟ್ಟಿವೆ ಎಂದು ಅರಣ್ಯ ಇಲಾಖೆ ಗುರುವಾರ ತಿಳಿಸಿದೆ.

ಮಂಗಳವಾರವಷ್ಟೇ ಒಂದು ಮರಿ ಮೃತಪಟ್ಟಿತ್ತು. 'ಜ್ವಾಲಾ'ದ ಒಟ್ಟು ನಾಲ್ಕು ಮರಿಗಳ ಪೈಕಿ ಇದುವರೆಗೆ ಮೂರು ಮರಿಗಳು ಸತ್ತಿವೆ.

ನಿತ್ರಾಣದ ಕಾರಣದಿಂದ ಮರಿಯೊಂದು ಮೃತಪಟ್ಟಿದೆ ಎಂದು ಇಲಾಖೆ ಮಂಗಳವಾರ ತಿಳಿಸಿತ್ತು. ಅದೇ ದಿನವೇ ಇನ್ನೆರಡು ಮರಿಗಳು ಮೃತಪಟ್ಟಿದ್ದರೂ ಈ ಸುದ್ದಿಯನ್ನು ಇಲಾಖೆಯು ಗುರುವಾರದವರೆಗೂ ಬಹಿರಂಗಪಡಿಸಿರಲಿಲ್ಲ. ಈ ವಿಷಯವನ್ನು ಮಂಗಳವಾರವೇ ಯಾಕೆ ಬಹಿರಂಗ ಪಡಿಸಲಿಲ್ಲ ಎನ್ನುವ ಕುರಿತು ಇಲಾಖೆ ಯಾವುದೇ ಕಾರಣ ನೀಡಿಲ್ಲ.

ಮೃತಪಟ್ಟ ಈ ಮೂರೂ ಮರಿಗಳ ಆರೋಗ್ಯ ಸರಿ ಇಲ್ಲ ಎಂಬ ವಿಚಾರವು ಮಂಗಳವಾರವೇ ಮೇಲ್ವಿಚಾರಣಾ ತಂಡದ ಗಮನಕ್ಕೆ ಬಂದಿತ್ತು. ಆದ್ದರಿಂದ ಈ ಮೂರು ಮರಿಗಳ ಮೇಲೆ ತಂಡವು ನಿಗಾ ಇರಿಸಿತ್ತು.

ಚಿನಕುರಳಿ
ಪ್ರಕಾಶ್ ಶೆಟ್ಟಿ



ಖರ್ಗೆ ನೇತೃತ್ವದಲ್ಲಿ ಇಂದು ಸಭೆ ● ಸಚಿವರ ಪಟ್ಟಿಗೆ ಅಂತಿಮ ರೂಪ?

ಸಂಪುಟ: ಇನ್ನಷ್ಟು ಕಗ್ಗಂಟು

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ರಾಜ್ಯ ಸಚಿವ ಸಂಪುಟ ವಿಸ್ತರಣೆ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಾಂಗ್ರೆಸ್‌ನ ಕೇಂದ್ರ ನಾಯಕರ ಜತೆಗೆ ಗುರುವಾರ ಬೆಳಿಗ್ಗೆಯಿಂದ ರಾತ್ರಿಯವರೆಗೆ ಸುದೀರ್ಘವಾಗಿ ಸಮಾಲೋಚನೆ ನಡೆಸಿದರೂ ಕಗ್ಗಂಟು ಬಿಡಿಸಲಾಗಲಿಲ್ಲ.

ಸಚಿವರ ಪಟ್ಟಿಗೆ ಅಂತಿಮ ರೂಪ ನೀಡುವ ಸಂಬಂಧ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಸಭೆ ನಿಗದಿಯಾಗಿದೆ. ಸಿದ್ದರಾಮಯ್ಯ ಅವರು ಕಾಂಗ್ರೆಸ್‌ನ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರನ್ನು ಶುಕ್ರವಾರ ಭೇಟಿಯಾಗುವ ಸಾಧ್ಯತೆ ಇದೆ. ಸಚಿವರ ಪಟ್ಟಿಗೆ ವರಿಷ್ಠರು ಒಪ್ಪಿಗೆ ನೀಡಿದರೆ ಶನಿವಾರ ಸಂಪುಟ ವಿಸ್ತರಣೆಯಾಗಲಿದೆ. ಬೆಳಿಗ್ಗೆ 11.30ಕ್ಕೆ ರಾಜಭವನದಲ್ಲಿ ಪ್ರಮಾಣವಚನ ಕಾರ್ಯಕ್ರಮ ನಡೆಸಲು ಕಾಂಗ್ರೆಸ್ ಉದ್ದೇಶಿಸಿದೆ.

ಈ ವರ್ಷದ ಅಂತ್ಯದಲ್ಲಿ ಚುನಾವಣೆ ನಡೆಯಲಿರುವ ಮಧ್ಯಪ್ರದೇಶ, ರಾಜಸ್ಥಾನ ಹಾಗೂ ಛತ್ತೀಸಗಢದ ಕಾಂಗ್ರೆಸ್ ಮುಖಂಡರೊಂದಿಗೆ ಹೈಕಮಾಂಡ್‌ನ ಸಭೆ ಶುಕ್ರವಾರಕ್ಕೆ ನಿಗದಿಯಾಗಿತ್ತು. ಕರ್ನಾಟಕದ ಸಚಿವ ಸಂಪುಟದ ಬಿಕ್ಕಟ್ಟನ್ನು ಬಗೆಹರಿಸುವ ಸಲುವಾಗಿ ಈ ಸಭೆಯನ್ನು ಕೊನೆಯ ಕ್ಷಣದಲ್ಲಿ ಮುಂದೂಡಲಾಗಿದೆ.

ಸಂಪುಟದಲ್ಲಿ ಒಟ್ಟು 34 ಸಚಿವರ ಸೇರ್ಪಡೆಗೆ ಅವಕಾಶ ಇದೆ. ಈಗ 10 ಸ್ಥಾನಗಳು ಭರ್ತಿಯಾಗಿವೆ. 20 ಶಾಸಕರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲು ಗುರುವಾರ ನಡೆದ ಸಭೆಯಲ್ಲಿ ಗಂಭೀರ ಚರ್ಚೆಗಳು ಆಗಿವೆ. 24 ಸ್ಥಾನಗಳನ್ನು ಒಂದೇ ಕಂತಿನಲ್ಲಿ ಭರ್ತಿ ಮಾಡಲು ಕೇಂದ್ರ ನಾಯಕತ್ವವು ಕಸರತ್ತು ನಡೆಸಿದೆ. ಪಟ್ಟಿ ಬಹುತೇಕ ಅಂತಿಮವಾಗಿದ್ದು, ಶನಿವಾರವೇ ಸಂಪುಟ ವಿಸ್ತರಣೆ ಆಗಲಿದೆ ಎಂದು ಸಿದ್ದರಾಮಯ್ಯ ಅವರ ಆಪ್ತ ಮೂಲಗಳು ತಿಳಿಸಿವೆ. ಪಟ್ಟಿ ಶೇ 80ರಷ್ಟು ಅಂತಿಮವಾಗಿದೆ ಎಂದು ಶಿವಕುಮಾರ್ ಆಪ್ತ ಮೂಲಗಳು ಹೇಳಿವೆ.

ನವದೆಹಲಿಗೆ ಬುಧವಾರ ಪ್ರತ್ಯೇಕವಾಗಿ ಬಂದಿದ್ದ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಅವರು ರಾತ್ರಿಯೇ ವರಿಷ್ಠರೊಂದಿಗೆ ಮೊದಲ ಸುತ್ತಿನ ಮಾತುಕತೆ ನಡೆಸಿದ್ದರು. ಕಾಂಗ್ರೆಸ್ ವಾರ್ ರೂಂನಲ್ಲಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರೊಂದಿಗೆ ಉಭಯ ನಾಯಕರು ಸುಮಾರು ಏಳು ಗಂಟೆ ಚರ್ಚಿಸಿದರು. ಆದರೆ, ಸಭೆ ಅಪೂರ್ಣಗೊಂಡಿತು. ಶಿವಕುಮಾರ್ ಅವರು ಕೆಲವು ಕೆಲಸದ ನಿಮಿತ್ತ ಬೆಂಗಳೂರಿಗೆ ತೆರಳಿದರು.

ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಅವರು ತಮ್ಮ ಆಪ್ತ ಶಾಸಕರಿಗೆ ಸಚಿವ ಸ್ಥಾನ ಕೊಡಿಸಲು ಪಟ್ಟು ಹಿಡಿದಿದ್ದು, ನಾಲ್ಕೈದು ಶಾಸಕರ ಸೇರ್ಪಡೆ ವಿಷಯದಲ್ಲಿ ಸಹಮತಕ್ಕೆ ಬಂದಿಲ್ಲ. ವಿಧಾನ ಪರಿಷತ್‌ನಿಂದ ಯಾರನ್ನು ಸೇರಿಸಿಕೊಳ್ಳಬೇಕು ಎಂಬ ಕುರಿತು ಖರ್ಗೆ ತೀರ್ಮಾನ ಕೈಗೊಳ್ಳಲಿದ್ದಾರೆ. ಪರಿಷತ್‌ನ ಸದಸ್ಯರಾದ ಬಿ.ಕೆ. ಹರಿಪ್ರಸಾದ್, ಪ್ರಕಾಶ್ ಹುಕ್ಕೇರಿ, ಪ್ರಕಾಶ್ ರಾಠೋಡ್, ಯು.ಬಿ. ವೆಂಕಟೇಶ್ ಸಂಪುಟಕ್ಕೆ ಸೇರ್ಪಡೆಯಾಗಲು ಲಾಬಿ ನಡೆಸಿದ್ದಾರೆ. ಹರಿಪ್ರಸಾದ್ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲು ಸಿದ್ದರಾಮಯ್ಯ ಬಣ ವಿರೋಧ ವ್ಯಕ್ತಪಡಿಸಿದೆ. ಖರ್ಗೆ ಅವರನ್ನು ಭೇಟಿ ಮಾಡಿರುವ ಹರಿಪ್ರಸಾದ್ ಅವರು ಈ ಬಗ್ಗೆ ಅಸಮಾಧಾನ ತೋಡಿಕೊಂಡಿದ್ದಾರೆ. ಮಧು ಬಂಗಾರಪ್ಪ ಅವರ ಸೇರ್ಪಡೆ ಕುರಿತು ಉಭಯ ನಾಯಕರು ಒಮ್ಮತಕ್ಕೆ ಬಂದಿಲ್ಲ. ಸಚಿವ ಸ್ಥಾನಕ್ಕೆ ಈಗ ಹರಿಪ್ರಸಾದ್ ಅವರನ್ನು ಪರಿಗಣಿಸಿ ಎರಡು ವರ್ಷಗಳ ಬಳಿಕ ಮಧು ಅವರಿಗೆ ಅವಕಾಶ ನೀಡುವ ಕುರಿತು ಹೈಕಮಾಂಡ್ ಮಟ್ಟದಲ್ಲಿ ಚರ್ಚೆಗಳು ಆಗಿವೆ ಎಂದು ಮೂಲಗಳು ತಿಳಿಸಿವೆ.

2ನೇ ಪುಟ ನೋಡಿ

ಡಿಸಿಎಂ: ವಾಲ್ಮೀಕಿ ಸಮುದಾಯದ ಪಟ್ಟು

ಕಾಂಗ್ರೆಸ್‌ನ ಪರಿಶಿಷ್ಟ ಪಂಗಡದ (ಎಸ್‌ಟಿ) ಶಾಸಕರೊಬ್ಬರನ್ನು ಉಪ ಮುಖ್ಯಮಂತ್ರಿಯನ್ನಾಗಿ ಮಾಡಬೇಕು ಎಂದು ಸಚಿವ ಸತೀಶ ಜಾರಕಿಹೊಳಿ ನೇತೃತ್ವದ ನಿಯೋಗವು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮನವಿ ಮಾಡಿದೆ.

'ಪರಿಶಿಷ್ಟ ಪಂಗಡದವರು ಈ ಸಲ ಕಾಂಗ್ರೆಸ್‌ಗೆ ಬೆನ್ನಿಗೆ ನಿಂತಿದ್ದಾರೆ. ಕಾಂಗ್ರೆಸ್‌ನಿಂದ ವಾಲ್ಮೀಕಿ ಸಮುದಾಯದ 15 ಮಂದಿ ಗೆದ್ದಿದ್ದಾರೆ. ಉಪ ಮುಖ್ಯಮಂತ್ರಿ ಸ್ಥಾನದ ಜತೆಗೆ ಮೂರು ಅಥವಾ ನಾಲ್ಕು ಸಚಿವ ಸ್ಥಾನಗಳನ್ನು ಸಮುದಾಯಕ್ಕೆ ನೀಡಬೇಕು' ಎಂದು ನಿಯೋಗವು ಒತ್ತಾಯಿಸಿತು. ಈ ವಿಷಯದ ಕುರಿತು ಮುಖ್ಯಮಂತ್ರಿ ಅವರೊಂದಿಗೆ ಚರ್ಚೆ ನಡೆಸುವುದಾಗಿ ಖರ್ಗೆ ಅವರು ನಿಯೋಗಕ್ಕೆ ಭರವಸೆ ನೀಡಿದರು. ನಿಯೋಗದಲ್ಲಿ ಶಾಸಕರಾದ ಟಿ.ರಘುಮೂರ್ತಿ, ಬಿ.ಎಂ.ನಾಗರಾಜ್, ಇ.ತುಕಾರಾಂ, ಜೆ.ಎನ್.ಗಣೇಶ್, ಬಸನಗೌಡ ದದ್ದಲ್, ಅನಿಲ್ ಚಿಕ್ಕಮಾದು, ಎನ್.ಟಿ. ಶ್ರೀನಿವಾಸ್ ಮತ್ತಿತರರು ಇದ್ದರು.



ಮತ್ತೆ ಪ್ರತಿಕ್ರಿಯಿಸುವೆ: ಸಿದ್ದರಾಮಯ್ಯ



ಕರ್ನಾಟಕ ಭವನದಲ್ಲಿ ಗುರುವಾರ ಬೆಳಿಗ್ಗೆ ಪತ್ರಕರ್ತರನ್ನು ಉದ್ದೇಶಿಸಿ ಸಿದ್ದರಾಮಯ್ಯ, 'ಏನ್ರಪ್ಪಾ, ಏನಾದರೂ ಕೇಳುವುದು ಇದೆಯಾ, ಸಂಪುಟ ವಿಸ್ತರಣೆ ವಿಷಯವೊಂದನ್ನು ಬಿಟ್ಟು' ಎಂದು ಕೇಳಿದರು. ಆಗ ಪತ್ರಕರ್ತರು, ಸಂಪುಟ ವಿಸ್ತರಣೆ ಯಾವಾಗ ಎಂದು ಕೇಳಿದರು. ಅದಕ್ಕೆ ಮುಖ್ಯಮಂತ್ರಿ, 'ಅದಕ್ಕೆ ಮತ್ತೆ ಪ್ರತಿಕ್ರಿಯಿಸುವೆ' ಎಂದು ಹೇಳಿ ತೆರಳಿದರು. ವರಿಷ್ಠರ ಸಭೆಯ ಬಳಿಕ ಉಭಯ ನಾಯಕರು ಪ್ರತಿಕ್ರಿಯೆ ನೀಡಲು ನಿರಾಕರಿಸಿದರು.



'ನೈಟ್ ಲ್ಯಾಂಡಿಂಗ್' ಮಿಗ್‌-29ಕೆ ವಿಮಾನವು ಬುಧವಾರ ರಾತ್ರಿ ಐಎನ್‌ಎಸ್ ವಿಕ್ರಾಂತ್ ಯುದ್ಧನೌಕೆಯ ಮೇಲೆ ಇಳಿದಿರುವುದು –ಪಿಟಿಐ ಚಿತ್ರ

ಸುದ್ದಿ 9

₹ 20 ಸಾವಿರ ಕೋಟಿ ಕಾಮಗಾರಿಗಳಿಗೆ ತಡೆ

ಮುಖ್ಯ ಕಾರ್ಯದರ್ಶಿಗೆ ಮುಖ್ಯಮಂತ್ರಿ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದಿನ ಬಿಜೆಪಿ ಸರ್ಕಾರದ ಅವಧಿಯ ಕೊನೆಯಲ್ಲಿ ವಿವಿಧ ಇಲಾಖೆಗಳಲ್ಲಿ ಮಂಜೂರು ಮಾಡಲಾದ ಸುಮಾರು ₹ 20,000 ಕೋಟಿ ಮೌಲ್ಯದ ಕಾಮಗಾರಿಗಳು ಹಾಗೂ ಟೆಂಡರ್ ಪ್ರಕ್ರಿಯೆಗಳನ್ನು ಸ್ಥಗಿತಗೊಳಿಸುವಂತೆ ಮುಖ್ಯ ಕಾರ್ಯದರ್ಶಿಯವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ನಿರ್ದೇಶನ ನೀಡಿದ್ದಾರೆ.

ವಿವಿಧ ಇಲಾಖೆಗಳು, ನಿಗಮಗಳು, ಮಂಡಳಿಗಳಲ್ಲಿ ಹೊಸದಾಗಿ ಕೈಗೆತ್ತಿಕೊಂಡಿರುವ ಕಾಮಗಾರಿಗಳು ಮತ್ತು ಬಾಕಿ ಇರುವ ಬಿಲ್ ಪಾವತಿ ಸ್ಥಗಿತಗೊಳಿಸುವಂತೆ ಮುಖ್ಯಮಂತ್ರಿ ಅವರು ಪ್ರಮಾಣವಚನ ಸ್ವೀಕರಿಸಿದ ದಿನವೇ ಆದೇಶ ಹೊರಡಿಸಲಾಗಿತ್ತು. ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಅವರಿಗೆ ಸೋಮವಾರ ಟಿಪ್ಪಣಿಯೊಂದನ್ನು ಕಳುಹಿಸಿರುವ ಸಿದ್ದರಾಮಯ್ಯ, ವಿವಿಧ ಇಲಾಖೆಗಳಲ್ಲಿ ಹಿಂದಿನ ಕೆಲವು ತಿಂಗಳಲ್ಲಿ ಮಂಜೂರು ಮಾಡಲಾದ ಕಾಮಗಾರಿಗಳ ತಡೆಗೆ ಸೂಚಿಸಿದ್ದಾರೆ.

5ನೇ ಪುಟ ನೋಡಿ

ಸಿಂಡಿಕೇಟ್, ಅಕಾಡೆಮಿಕ್ ಕೌನ್ಸಿಲ್ ನಾಮನಿರ್ದೇಶನವೂ ರದ್ದು

ಮೇ 22ರ ವರೆಗೆ ವಿವಿಧ ವಿಶ್ವವಿದ್ಯಾಲಯಗಳ ಸಿಂಡಿಕೇಟ್, ಅಕಾಡೆಮಿಕ್ ಕೌನ್ಸಿಲ್, ಕಾರ್ಯಕಾರಿ ಸಮಿತಿ, ವ್ಯವಸ್ಥಾಪನಾ ಮಂಡಳಿಗಳಿಗೆ ಸರ್ಕಾರದ ಕಡೆಯಿಂದ ಮಾಡಿರುವ ಎಲ್ಲ ಅಧಿಕಾರೇತರ ಸದಸ್ಯರ ನಾಮನಿರ್ದೇಶನಗಳನ್ನು ರದ್ದುಪಡಿಸಿ ಉನ್ನತ ಶಿಕ್ಷಣ ಇಲಾಖೆ ಬುಧವಾರ ಅಧಿಸೂಚನೆ ಹೊರಡಿಸಿದೆ.

ಉನ್ನತ ಶಿಕ್ಷಣ ಪರಿಷತ್ತಿನ ಎಲ್ಲ ಅಧಿಕಾರೇತರ ಸದಸ್ಯರು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿರುವ ಎಲ್ಲ ಖಾಸಗಿ ವಿಶ್ವವಿದ್ಯಾಲಯಗಳ ಆಡಳಿತ ಮಂಡಳಿಗಳಿಗೆ ಸರ್ಕಾರದ ಕಡೆಯಿಂದ ಮಾಡಿರುವ ಎಲ್ಲ ಅಧಿಕಾರೇತರ ಸದಸ್ಯರ ನಾಮನಿರ್ದೇಶನಗಳನ್ನೂ ರದ್ದುಪಡಿಸಲಾಗಿದೆ.

ಒಳ ಪುಟಗಳು
'ಪಾಕ್‌ನಲ್ಲಿ ಅಘೋಷಿತ ಸೇನಾ ಆಡಳಿತ' 8
ಮಳೆ: ನೆಲಕಚ್ಚಿದ ಬೆಳೆ, ಕುಸಿದ ಮನೆ 5
ಇಸ್ರೊದ 'ಎನ್‌ವಿಎಸ್‌-01' ಉಪಗ್ರಹ 29ರಂದು ಉಡಾವಣೆ 8
'ಅದಾನಿ'ಯಲ್ಲಿ ಎಲ್‌ಐಸಿ ಹೂಡಿಕೆ ಮೌಲ್ಯ ವೃದ್ಧಿ 8



₹24 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಿದ್ದರೂ 'ಸ್ಮಾರ್ಟ್' ಆಗದ ಉದ್ಯಾನ • ಸಾರ್ವಜನಿಕರ ಬೇಸರ

'ಕಬ್ಬನ್'ಗೆ ಹರಿಯುತ್ತಿದೆ ಕೊಳಚೆ ನೀರು

• ಖಲೀಲಅಹ್ಮದ ಶೇಖ

ಬೆಂಗಳೂರು: ಜನರ ನೆಚ್ಚಿನ ತಾಣವಾಗಿರುವ ಕಬ್ಬನ್ ಉದ್ಯಾನಕ್ಕೆ ಕೊಳಚೆ ನೀರು ಹರಿದು ಬರುತ್ತಿದೆ. ಇದರಿಂದ ವಾಯುವಿಹಾರಿಗಳು ಮೂಗು ಮುಚ್ಚಿಕೊಂಡು ಹೆಜ್ಜೆ ಹಾಕುವ ಸ್ಥಿತಿ ನಿರ್ಮಾಣವಾಗಿದೆ.

ಚಿನ್ನಸ್ವಾಮಿ ಕ್ರೀಡಾಂಗಣ ಸೇರಿ ಉದ್ಯಾನದ ವಿವಿಧ ಭಾಗಗಳಲ್ಲಿರುವ ಒಳಚರಂಡಿ ಮೂಲಕ ಕೊಳಚೆ ನೀರು ಉದ್ಯಾನಕ್ಕೆ ಹರಿದು ಬರುತ್ತಿದೆ. ಇಲ್ಲಿ ನಿರ್ಮಿಸಿರುವ ಕಲ್ಲಿನ ಸೇತುವೆಯಲ್ಲಿ ಪ್ಲಾಸ್ಟಿಕ್ ತ್ಯಾಜ್ಯ, ಬಾಟಲ್ ಸೇರಿ ಕಟ್ಟಿಕೊಂಡು ಈ ಪ್ರದೇಶವೆಲ್ಲ ಗೆಬ್ಬೆದ್ದು ನಾರುತ್ತಿದೆ. ಇದೇ ನೀರು ಬಿದಿರು ಮೆಳೆಯ ಮಾರ್ಗವಾಗಿ ಕಮಲದ ಕೊಳ ಮತ್ತು ಬಾಲಭವನದ ಪುಟಾಣಿ ಕೆರೆ ತಲುಪುತ್ತಿದೆ. ಅಲ್ಲಿಯೂ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ.

'ಸ್ಮಾರ್ಟ್‌ಸಿಟಿ ಯೋಜನೆಯಡಿ ₹24 ಕೋಟಿ ವೆಚ್ಚದಲ್ಲಿ ಕಬ್ಬನ್ ಉದ್ಯಾನದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳು ಕೈಗೊಳ್ಳಲಾಗಿದೆ. ಆದರೆ, ಈ ಕೊಳಚೆ ನೀರಿನ ಸಮಸ್ಯೆ ಮಾತ್ರ ಸರಿಪಡಿಸಿಲ್ಲ. ಬಿದಿರು ಮೆಳೆಯ ಸುತ್ತಮುತ್ತ ಕಟ್ಟಿಕೊಂಡಿರುವ ತ್ಯಾಜ್ಯ ನೀರಿನಿಂದ ಇಡೀ ಪರಿಸರ ದುರ್ನಾತದಿಂದ ಕೂಡಿದೆ' ಎಂಬುದು ವಾಯುವಿಹಾರಿಗಳ ಆರೋಪ.

'ಸುಮಾರು ₹1.5 ಕೋಟಿ ವೆಚ್ಚದಲ್ಲಿ ಕಮಲದ ಕೊಳದ ಅಭಿವೃದ್ಧಿಯನ್ನು ಮಾಡಲಾಗಿದೆ ಎಂಬುದು ಅಧಿಕಾರಿಗಳ ವಾದ. ಆದರೆ, ಕೊಳದ ಹೂಳನ್ನೇ ತೆಗೆದಿಲ್ಲ. ಇದರ ಅಭಿವೃದ್ಧಿಯೂ ಆಗಿಲ್ಲ. ಜತೆಗೆ ಕೊಳಚೆ ನೀರು ಬರುತ್ತಿದ್ದು, ದುರ್ವಾಸನೆ ಬೀರುತ್ತಿದೆ. ಇದರಿಂದ ಉದ್ಯಾನದ ಪರಿಸರಕ್ಕೆ ಧಕ್ಕೆಯಾಗುತ್ತಿದೆ. ಕೊಳ ಹಿಂದೆ ಹೇಗೆ ಇತ್ತೂ ಈಗಲೂ ಹಾಗೆ ಇದೆ' ಎಂದು ವಾಯುವಿಹಾರಿ ಹೇಮಾ ಅವರು ದೂರಿದರು.

'ಉದ್ಯಾನಕ್ಕೆ ಬರುವ ಕೊಳಚೆ ನೀರಿನ ಬಗ್ಗೆ ಹಲವು ಬಾರಿ ಅಧಿಕಾರಿಗಳು ಗಮನಕ್ಕೆ ತಂದರೂ ಶಾಶ್ವತ ಪರಿಹಾರ ಸಿಕ್ಕಿಲ್ಲ. ಮಳೆ ಬಂದರೆ ಉದ್ಯಾನದ ಸುತ್ತಮುತ್ತಲಿನ ನೀರು ಉದ್ಯಾನಕ್ಕೆ ಪ್ರವೇಶಿಸುತ್ತದೆ. ಇದರಿಂದ ಪಾದಚಾರಿ ಮಾರ್ಗಗಳೆಲ್ಲ ಕೆಸರುಮಯವಾಗುತ್ತವೆ. ಜತೆಗೆ ಕೊಳಚೆ ನೀರಿನ ದುರ್ನಾತದಿಂದ ಮೂಗು ಮುಚ್ಚಿಕೊಂಡು ವಾಕಿಂಗ್ ಮಾಡುವ ಪರಿಸ್ಥಿತಿ ಇದೆ' ಎಂದು ಕಬ್ಬನ್ ಉದ್ಯಾನ ನಡಿಗೆದಾರರ ಸಂಘದ ಅಧ್ಯಕ್ಷ ಎಸ್. ಉಮೇಶ ಆರೋಪಿಸಿದರು.



ಕಬ್ಬನ್ ಉದ್ಯಾನದಲ್ಲಿ ನಿರ್ಮಿಸಿರುವ ಕಲ್ಲಿನ ಸೇತುವೆಯಲ್ಲಿ ಸಂಗ್ರಹವಾಗಿರುವ ತ್ಯಾಜ್ಯ ನೀರು
— ಪ್ರಜಾವಾಣಿ ಚಿತ್ರ: ಎಂ.ಎಸ್. ಮಂಜುನಾಥ್



ಉದ್ಯಾನವು ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸಿದೆ. ಇಂತಹ ಪ್ರತಿಷ್ಠಿತ ಉದ್ಯಾನದೊಳಗೆ ಒಳಚರಂಡಿ ನೀರು ಬರುವುದು ಸರಿಯಲ್ಲ

ಸೋನಿಕಾ ಗೌಡ, ವಾಯುವಿಹಾರಿ



ಉದ್ಯಾನಕ್ಕೆ ವಾರಾಂತ್ಯದಲ್ಲಿ ನೂರಾರು ಜನ ಕುಟುಂಬ ಸಮೇತ ಆಗಮಿಸುತ್ತಾರೆ. ಆದರೆ, ಇಲ್ಲಿ ಕೊಳಚೆ ನೀರು ಹರಿಯುತ್ತಿದೆ

ಎಸ್. ಉಮೇಶ್, ಕಬ್ಬನ್ ಉದ್ಯಾನ ನಡಿಗೆದಾರರ ಸಂಘದ ಅಧ್ಯಕ್ಷ

ಕಬ್ಬನ್ ಉದ್ಯಾನಕ್ಕೆ ಒಳಚರಂಡಿ ಮೂಲಕ ಮಳೆ ನೀರು ಮಾತ್ರ ಬರುತ್ತದೆ. ಮಳೆಗಾಲದಲ್ಲಿ ಯಾವುದೇ ರೀತಿಯ ವಾಸನೆಯು ಬರುವುದಿಲ್ಲ. ಯಾವುದೇ ರೀತಿಯ ಕೊಳಚೆ ನೀರು ಉದ್ಯಾನಕ್ಕೆ ಬರುವುದಿಲ್ಲ

ಎಚ್.ಟಿ.ಬಾಲಕೃಷ್ಣ, ತೋಟಗಾರಿಕೆ ಇಲಾಖೆ ಉಪನಿರ್ದೇಶಕ (ಕಬ್ಬನ್ ಉದ್ಯಾನ)

ಸುದ್ದಿ 2 ನಿಮಿಷ

ಕಾಂಗ್ರೆಸ್‌ನಿಂದ ದ್ವೇಷದ ರಾಜಕಾರಣ: ಅಶ್ವತ್ಥನಾರಾಯಣ

ಬೆಂಗಳೂರು: 'ಕಾಂಗ್ರೆಸ್ ಸರ್ಕಾರ ದ್ವೇಷದ ರಾಜಕಾರಣ ಆರಂಭಿಸಿದ್ದು, ಎರಡೇ ವಾರದಲ್ಲಿ ಅಧಿಕಾರದ ಪಿತ್ತ ನೆತ್ತಿಗೇರಿದೆ. ನನ್ನ ವಿರುದ್ಧ ಎಫ್‌ಐಆರ್ ದಾಖಲಿಸಿದ್ದು, ಅದರ ವಿರುದ್ಧ ಕಾನೂನಾತ್ಮಕ ಮತ್ತು ರಾಜಕೀಯ ಹೋರಾಟ ನಡೆಸುತ್ತೇನೆ' ಎಂದು ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದ್ದಾರೆ.

'ಕಳೆದ ಫೆಬ್ರುವರಿಯಲ್ಲಿ ನೀಡಿದ ಹೇಳಿಕೆ ಸಂಬಂಧ ನಾನು ಈಗಾಗಲೇ ಸದನದಲ್ಲೇ ಸ್ಪಷ್ಟನೆ ನೀಡಿದ್ದೇನೆ. ವಿಷಾದವನ್ನೂ ವ್ಯಕ್ತಪಡಿಸಿದ್ದೇನೆ' ಎಂದು ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

ಆದರೆ, ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತಿದ್ದಂತೆ ನಾಲ್ಕು ತಿಂಗಳ ಹಿಂದಿನ ಹೇಳಿಕೆಯನ್ನು ನೆಪವಾಗಿಸಿಕೊಂಡು ಎಫ್‌ಐಆರ್ ದಾಖಲಾಗುವಂತೆ ಮಾಡಿದೆ. ವೈಯಕ್ತಿಕವಾಗಿ ಸಿದ್ದರಾಮಯ್ಯ ಅವರ ಮೇಲೆ ದ್ವೇಷವಿಲ್ಲ. ಅವರ ಬಗ್ಗೆ ಗೌರವವಿದೆ. ಸೈದ್ಧಾಂತಿಕವಾಗಿ ವ್ಯತ್ಯಾಸಗಳಿವೆ. ಈ ಹಿನ್ನೆಲೆಯಲ್ಲಿ ಮಂಡ್ಯದಲ್ಲಿ ಚುನಾವಣಾ ಪ್ರಚಾರದ ವೇಳೆ ನೀಡಿದ್ದ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಲಾಗುತ್ತಿದೆ ಎಂದು ಹೇಳಿದರು.



ಶಾಸಕರ ಮೇಲೆ ಎಫ್‌ಐಆರ್: ಬಿಜೆಪಿ ಖಂಡನೆ

ಬೆಂಗಳೂರು: ಕಾಂಗ್ರೆಸ್ ಸರ್ಕಾರ ಬಿಜೆಪಿ ಶಾಸಕರಾದ ಡಾ.ಅಶ್ವತ್ಥನಾರಾಯಣ ಮತ್ತು ಹರೀಶ್ ಪೂಂಜಾ ಅವರ ಮೇಲೆ ಎಫ್‌ಐಆರ್ ದಾಖಲಿಸಿರುವುದನ್ನು ಬಿಜೆಪಿ ಖಂಡಿಸಿದೆ.

ಸದಾ ಅಘೋಷಿತ ತುರ್ತುಪರಿಸ್ಥಿಯ ಬಗ್ಗೆ ಮಾತನಾಡುತ್ತಿದ್ದ ಕಾಂಗ್ರೆಸ್ ಈಗ ರಾಜ್ಯದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ ಹೇರಲು ಮುಂದಾಗಿದೆ ಎಂದು ಬಿಜೆಪಿ ರಾಜ್ಯ ಎಸ್‌ಸಿ ಮೋರ್ಚಾ ಅಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ ದೂರಿದರು.

ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಅನೇಕ ಹಿಂದೂ ಕಾರ್ಯಕರ್ತರ ಕೊಲೆ ಆಗಿದೆ ಎಂದು ಹೇಳಿದ್ದಾರೆ. ಈ ವಿಚಾರ ಸಾವಿರಾರು ಬಾರಿ ಪ್ರಸ್ತಾಪ ಆಗಿದೆ. ಆದರೆ, ಈಗ ಅವರ ಮೇಲೆ ಮಾತ್ರ ಎಫ್‌ಐಆರ್ ದಾಖಲಿಸಿದ್ದಾರೆ. ಇದು ದ್ವೇಷದ ರಾಜಕಾರಣಕ್ಕೆ ಸಾಕ್ಷಿ ಎಂದು ಹರಿಹಾಯ್ದರು.

'ಬಿಜೆಪಿ ಮುಖಂಡರು, ಕಾರ್ಯಕರ್ತರನ್ನು ಧಮ್ಕಿ ಹಾಕಿ ಬಾಯಿ ಮುಚ್ಚಿಸುವುದಾಗಿ ಭಾವಿಸಿದರೆ ಅದು ಭ್ರಮೆ. ನಿಮ್ಮ ಗೊಡ್ಡು ಬೆದರಿಕೆಗಳಿಗೆ ಯಾರೂ ಹೆದರುವುದಿಲ್ಲ. ಉತ್ತಮವಾಗಿ ಕೆಲಸ ಮಾಡುವ ಪೊಲೀಸ್ ಅಧಿಕಾರಿಗಳಿಗೂ ಧಮ್ಕಿ ಹಾಕಿದ್ದಾರೆ. ಇದು ಪೊಲೀಸರ ಸ್ಥೈರ್ಯವನ್ನು ಕುಗ್ಗಿಸುವ ಕೃತ್ಯ. ಪೊಲೀಸರು ಕೇಸರಿ ವಸ್ತ್ರ ಧರಿಸಿ ಕರ್ತವ್ಯಕ್ಕೆ ಹಾಜರಾಗಿದ್ದನ್ನು ನೋಡಿದ್ದಿರಾ' ಎಂದೂ ಅವರು ಪ್ರಶ್ನಿಸಿದರು.

ಚಿಕ್ಕಬಳ್ಳಾಪುರದಲ್ಲಿ ಘಟನೆ

ಅನ್ಯ ಧರ್ಮದ ಯುವಕನ ಜತೆ ಓಡಾಡದಂತೆ ಬೆದರಿಕೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ನಗರದ ಚಾಟ್ಸ್ ಸೆಂಟರ್‌ವೊಂದಕ್ಕೆ ಬುಧವಾರ ಸಂಜೆ ಮುಸ್ಲಿಂ ಯುವತಿಯೊಬ್ಬಳು ಹಿಂದೂ ಯುವಕನ ಜೊತೆ ಬಂದಿದ್ದಕ್ಕೆ ಯುವಕರ ಗುಂಪೊಂದು ಆಕ್ಷೇಪ ವ್ಯಕ್ತಪಡಿಸಿದೆ. ಯುವತಿಯ ಜೊತೆಗಿದ್ದ ಯುವಕನನ್ನು ಗುಂಪಿನ ಕೆಲವರು ತಳ್ಳಾಡಿದ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಚಾಟ್ಸ್ ಸೆಂಟರ್‌ನಲ್ಲಿ ಕುಳಿತಿದ್ದ ಯುವಕ ಮತ್ತು ಯುವತಿ ಬಳಿಗೆ ಬಂದ ಯುವಕರ ಗುಂಪು, ಇಬ್ಬರಿಗೂ ಎಚ್ಚರಿಕೆ ನೀಡಿ ಅಲ್ಲಿಂದ ತೆರಳಿದೆ. ಸ್ವಲ್ಪ ಸಮಯದ ಬಳಿಕ ಚಾಟ್ ಸೆಂಟರ್‌ನಿಂದ ಹೊರಬಂದ ಜೋಡಿಯನ್ನು ಅಡ್ಡಗಟ್ಟಿದ ಯುವಕರ ಗುಂಪು ಮತ್ತೆ ಜಗಳ ತೆಗೆದಿದೆ.

ಹಿಂದೂ ಧರ್ಮದ ಯುವಕನ ಜೊತೆ ಓಡಾಡದಂತೆ ಯುವತಿಗೆ ತಾಕೀತು ಮಾಡಿದೆ. ಇದರಿಂದ ಸಿಟ್ಟಾದ ಯುವತಿ, 'ಕೆಟ್ಟದಾಗಿ ಬೈದರೆ ಸರಿ ಇರುವುದಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾಳೆ. ವಾಗ್ವಾದ ತಾರಕಕ್ಕೆ ಏರಿದಾಗ ಯುವಕರ ಗುಂಪು, ಯುವತಿಯನ್ನು ಕೆಟ್ಟದಾಗಿ ನಿಂದಿಸಿ, ಯುವಕನನ್ನು ತಳ್ಳಾಡಿದೆ. ನಂತರ ಎರಡೂ ಕಡೆಯವರು ಅಲ್ಲಿಂದ ತೆರಳಿದ್ದಾರೆ.

ಈ ಎಲ್ಲ ಘಟನೆ ನಂತರ ಯುವತಿ ಮನೆಯಿಂದಲೇ ವಿಡಿಯೊವೊಂದನ್ನು ಮಾಡಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾಳೆ. 'ನನ್ನಿಂದ ತಪ್ಪಾಯಿತು. ಇನ್ನು ಮುಂದೆ ಹೀಗೆ ಮಾಡುವುದಿಲ್ಲ' ಎಂದು ಹೇಳಿದ್ದಾಳೆ. ಈ ವೇಳೆ ಪಕ್ಕದಲ್ಲಿದ್ದ ಯುವಕನೊಬ್ಬ, 'ಅಲ್ಲಿದ್ದವರೆಲ್ಲ ನನ್ನ ಅಣ್ಣತಮ್ಮಂದಿರು' ಎಂದು ಹೇಳುವಂತೆ ಬಲವಂತ ಮಾಡಿದ ಮಾತುಗಳು ವಿಡಿಯೊದಲ್ಲಿವೆ.

ಯುವತಿಯ ವಿಚಾರಣೆ ನಡೆಸಲಾಗುವುದು. ಹಲ್ಲೆಗೆ ಯತ್ನಿಸಿದ ಮೂವರು ಹುಡುಗರ ಗುರುತು ಪತ್ತೆಯಾಗಿದೆ. ಆಕೆಯ ದೂರು ಆಧರಿಸಿ ಕಾನೂನು ರೀತಿಯ ಕ್ರಮ ಕೈಗೊಳ್ಳಲಾಗುವುದು

ಡಿ.ಎಲ್.ನಾಗೇಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಶ್ರದ್ಧಾ ವಾಲ್ಕರ್ ಕೊಲೆ ಮಾದರಿಯಂತೆಯೇ ಹತ್ಯೆ

ಹೈದರಾಬಾದ್‌ನಲ್ಲಿ ಮಹಿಳೆಯ ಬರ್ಬರ ಕೊಲೆ

ಹೈದರಾಬಾದ್ (ಪಿಟಿಐ): ದೇಶವನ್ನು ಬೆಚ್ಚಿಬೀಳಿಸಿದ್ದ ದೆಹಲಿಯ ಶ್ರದ್ಧಾ ವಾಲ್ಕರ್ ಕೊಲೆ ಮಾದರಿಯಂತೆಯೇ, ಹೈದರಾಬಾದ್‌ನಲ್ಲಿ ಹತ್ಯೆ ಮಾಡಿರುವ ಬಿ.ಚಂದ್ರ ಮೋಹನ್ (48) ಎಂಬಾತನನ್ನು ಪೊಲೀಸರು ಬುಧವಾರ ಬಂಧಿಸಿದ್ದಾರೆ.

'ಈತ ತನ್ನ ಮನೆಯ ನೆಲ ಮಹಡಿಯಲ್ಲಿ ಬಾಡಿಗೆಗಿದ್ದ ಮತ್ತು ತನ್ನೊಂದಿಗೆ ಸಂಬಂಧ ಹೊಂದಿದ್ದ ವೈ. ಅನುರಾಧಾ ರೆಡ್ಡಿ (55) ಅವರನ್ನು ಮೇ 12ರಂದು ಚಾಕುವಿನಿಂದ ಇರಿದು ಕೊಂದಿದ್ದಾನೆ. ನಂತರ ಅವರ ದೇಹವನ್ನು ಕಲ್ಲು ಕತ್ತರಿಸುವ ಯಂತ್ರದಿಂದ ಆರು ಭಾಗಗಳಾಗಿ ಕತ್ತರಿಸಿದ್ದಾನೆ' ಎಂದು ಡಿಸಿಪಿ (ಆಗ್ನೇಯ ವಲಯ) ಸಿ.ಎಚ್. ರೂಪೇಶ್ ಗುರುವಾರ ತಿಳಿಸಿದರು.

'ಸಂತ್ರಸ್ತೆಯ ಮನೆಯ ರೆಫ್ರಿಜರೇಟರ್‌ನಲ್ಲಿಯೇ ಅವರ ಕಾಲು ಮತ್ತು ಕೈಗಳನ್ನು ಸಂರಕ್ಷಿಸಿಟ್ಟಿದ್ದ ಆರೋಪಿಯು, ಆಕೆಯ ದೇಹದ ಉಳಿದ ಭಾಗಗಳನ್ನು ಆಕೆಯ ಸೂಟ್‌ಕೇಸ್‌ನಲ್ಲಿ ತುಂಬಿಸಿಟ್ಟಿದ್ದನು. ಶಿರವನ್ನು ಕಪ್ಪು ಪಾಲಿಥಿನ್ ಚೀಲದಲ್ಲಿ ಹೊತ್ತು ಮೇ 15ರಂದು ಮೂಸಿ ನದಿ ಬಳಿಯ ಕಸದ ತೊಟ್ಟಿಗೆ ಎಸೆದಿದ್ದ. ಹಂತ ಹಂತವಾಗಿ ದೇಹದ ಇತರ ಭಾಗಗಳನ್ನು ವಿಲೇವಾರಿ ಮಾಡಲು ಆತ ಯೋಜಿಸಿದ್ದ' ಎಂದು ಅವರು ಹೇಳಿದರು.

ಮುಖ್ಯಾಂಶಗಳು

- ದೇಹವನ್ನು 6 ಭಾಗಗಳಾಗಿ ಕತ್ತರಿಸಿದ್ದ ಆರೋಪಿ
- ದೇಹ ಕತ್ತರಿಸಲು ಕಲ್ಲು ಕತ್ತರಿಸುವ ಯಂತ್ರ ಬಳಕೆ
- ಕೈ, ಕಾಲುಗಳನ್ನು ರೆಫ್ರಿಜರೇಟರ್‌ನಲ್ಲಿದ್ದ ಮೋಹನ್

'ಕೊಲೆಯ ಸಾಕ್ಷ್ಯಗಳನ್ನು ನಾಶ ಮಾಡಲು ಆತ ಈ ರೀತಿಯ ಸರಣಿ ಕೃತ್ಯಗಳನ್ನು ಎಸಗಿದ್ದಾನೆ' ಎಂದು ಮಾಹಿತಿ ನೀಡಿದರು.

'ಸ್ಥಳೀಯ ನಾಗರಿಕ ಸಂಸ್ಥೆಯ ಕೆಲ ಕಾರ್ಯಕರ್ತರು ಮಹಿಳೆಯ ಶಿರವನ್ನು ಮೇ 17ರಂದು ಗಮನಿಸಿ ಪೊಲೀಸರಿಗೆ ಮಾಹಿತಿ ನೀಡಿದ್ದರು. ನಂತರ ಸ್ಥಳ ಪರಿಶೀಲಿಸಿ, ಪ್ರಕರಣ ದಾಖಲಿಸಿಕೊಳ್ಳಲಾಯಿತು. ತನಿಖೆಗಾಗಿ ಪೊಲೀಸರ ಎಂಟು ತಂಡಗಳನ್ನು ರಚಿಸಿ, ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಿ ಆರೋಪಿಯನ್ನು ಪತ್ತೆಹಚ್ಚಲಾಯಿತು' ಎಂದು ಅವರು ತಿಳಿಸಿದರು.

'ಮೋಹನ್ ಮತ್ತು ಅನುರಾಧಾ ಅವರ ನಡುವೆ ಹಣಕಾಸಿನ ವ್ಯವಹಾರ ಇತ್ತು. ಮೋಹನ್‌ಗೆ ₹ 7 ಲಕ್ಷ ನೀಡಿದ್ದ ಅನುರಾಧಾ ಅವರು ಅದನ್ನು ಹಿಂದಿರುಗಿಸುವಂತೆ ಹಲವು ಬಾರಿ ಒತ್ತಡ ಹೇರಿದ್ದರು. ಇದರಿಂದ ಕೋಪಗೊಂಡಿದ್ದ ಆತ, ಯೋಜನೆ ರೂಪಿಸಿ ಹತ್ಯೆ ಮಾಡಿದ್ದಾನೆ' ಎಂದು ಅವರು ವಿವರಿಸಿದರು.

'ಹತ್ಯೆ ಮಾಡಿದ ಬಳಿಕ ಆರೋಪಿಯು ಫಿನಾಯಿಲ್‌ನಿಂದ ಮನೆಯನ್ನು ಶುಚಿಗೊಳಿಸಿ, ಅಗರಬತ್ತಿ, ಸುಗಂಧ ದ್ರವ್ಯಗಳನ್ನು ಬಳಸಿ ದುರ್ವಾಸನೆ ಹರಡದಂತೆ ನೋಡಿಕೊಂಡಿದ್ದ' ಎಂದು ಅವರು ಹೇಳಿದರು.

'ಅನುರಾಧಾ ಅವರ ಮೊಬೈಲ್ ತೆಗೆದುಕೊಂಡಿದ್ದ ಮೋಹನ್, ಮೃತರ ನಿಕಟವರ್ತಿಗಳಿಗೆ ಸಂದೇಶಗಳನ್ನು ಕಳುಹಿಸುವ ಮೂಲಕ ಯಾರಿಗೂ ಸಂದೇಹ ಬಾರದಂತೆ ನೋಡಿಕೊಂಡಿದ್ದ' ಎಂದು ತಿಳಿಸಿದರು.

ಕಾಯಂಗೊಳಿಸಲು ಪೌರಕಾರ್ಮಿಕರ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಕಾಯಂಗೊಳಿಸಬೇಕು ಆಲ್ ಇಂಡಿಯಾ ಸೆಂಟ್ರಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ಸ್ (ಎಐಸಿಸಿಟಿಯು) ಆಗ್ರಹಿಸಿದೆ.

ನಗರ ಸ್ಥಳೀಯ ಸಂಸ್ಥೆಗಳ ನೇರವೇತನ ಪಾವತಿ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಏಕಕಾಲಕ್ಕೆ ಕಾಯಂಗೊಳಿಸಬೇಕು ಎಂದು ಅದು ಆಗ್ರಹಿಸಿದೆ.

ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪತ್ರ ಬರೆದಿರುವ ಎಐಸಿಸಿಟಿಯುನ ಅಧ್ಯಕ್ಷ ಕ್ಲಿಫ್ಟನ್ ಡಿ ರೋಜಾರಿಯೋ, 'ಕಸ ಸಂಗ್ರಹಿಸುವ, ಅದನ್ನು ವಿಲೇವಾರಿ ಮಾಡುವ ವಾಹನಗಳ ಚಾಲಕರು, ಯುಜಿಡಿ ಕಾರ್ಮಿಕರು, ಕ್ಲೀನರ್‌ಗಳನ್ನು ನೇರವೇತನ ಪಾವತಿ ಅಡಿಯಲ್ಲಿ ತರಬೇಕು. ಐಪಿಡಿ ಸಾಲಪ್ಪ ವರದಿಯನ್ನು ತಕ್ಷಣವೇ ಜಾರಿಗೊಳಿಸಬೇಕು' ಎಂದಿದ್ದಾರೆ.

ರಾಜಸ್ಥಾನ: ಇಂದಿನಿಂದ 'ಕೈ' ಚುನಾವಣಾ ಕಾರ್ಯತಂತ್ರ ಸಭೆ

ನವದೆಹಲಿ (ಪಿಟಿಐ): ಕರ್ನಾಟಕದಲ್ಲಿ ಸರ್ಕಾರ ರಚಿಸಿದ ಉತ್ಸಾಹದಲ್ಲಿರುವ ಕಾಂಗ್ರೆಸ್ ಮಧ್ಯಪ್ರದೇಶ, ರಾಜಸ್ಥಾನ ಮತ್ತು ಛತ್ತೀಸಗಢದಲ್ಲಿ ಚುನಾವಣೆ ಎದುರಿಸುವ ಸಂಬಂಧ ಕಾರ್ಯತಂತ್ರ ರೂಪಿಸಲು ಶುಕ್ರವಾರದಿಂದ ಎರಡು ದಿನಗಳ ಕಾಲ ಚರ್ಚೆ ನಡೆಯಲಿದೆ.

ಮಧ್ಯಪ್ರದೇಶ ಮತ್ತು ರಾಜಸ್ಥಾನದಲ್ಲಿ ಮೇ 26ರಂದು ಚುನಾವಣೆ ಸಂಬಂಧ ಪ್ರತ್ಯೇಕವಾಗಿ ಸಭೆ ನಡೆಯಲಿವೆ. ಮೇ 27ರಂದು ಛತ್ತೀಸಗಢದಲ್ಲಿ ಸಭೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ ಈ ಮೂರು ರಾಜ್ಯಗಳಲ್ಲಿ ಚುನಾವಣೆಗೆ ಸಿದ್ಧತೆ ನಡೆದಿದೆ. ಚುನಾವಣಾ ಕಾರ್ಯತಂತ್ರ ನಿಪುಣ ಸುನೀಲ್ ಕನುಗೋಲು ಆಯಾ ರಾಜ್ಯದ ನಾಯಕರೊಂದಿಗೆ ಪಕ್ಷದ ಕಾರ್ಯತಂತ್ರ ಕುರಿತು ಸಭೆಯಲ್ಲಿ ಚರ್ಚಿಸಲಿದ್ದಾರೆ.

ತೆಲಂಗಾಣ ಮತ್ತು ಮಿಜೋರಾಂನಲ್ಲಿ ಸಭೆ ನಡೆಯಲಿದೆ. ಮಲ್ಲಿಕಾರ್ಜುನ ಖರ್ಗೆ ಅವರು ದೆಹಲಿಯಲ್ಲಿ ಎಲ್ಲಾ ರಾಜ್ಯಗಳ ನಾಯಕರೊಂದಿಗೆ ಪ್ರತ್ಯೇಕವಾಗಿ ಸಭೆ ನಡೆಸಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಸಂಪುಟ ವಿಸ್ತರಣೆ: ಇನ್ನಷ್ಟು ಕಗ್ಗಂಟು

ಒಂದನೇ ಪುಟದಿಂದ...

ಬ್ರಾಹ್ಮಣ ಕೋಟಾದಡಿ ಯಾರನ್ನು ಸಂಪುಟಕ್ಕೆ ಸೇರಿಸಿಕೊಳ್ಳಬೇಕು ಎಂಬ ನಿರ್ಧಾರವನ್ನು ಖರ್ಗೆ ಅವರಿಗೆ ಬಿಡಲು ರಾಜ್ಯ ನಾಯಕರು ತೀರ್ಮಾನಿಸಿದ್ದಾರೆ. ಹಿರಿಯ ಶಾಸಕರಾದ ಆರ್.ವಿ.ದೇಶಪಾಂಡೆ ಹಾಗೂ ದಿನೇಶ್ ಗುಂಡೂರಾವ್ ಅವರು ಸಚಿವ ಸ್ಥಾನದ ಪ್ರಬಲ ಆಕಾಂಕ್ಷಿಗಳಾಗಿದ್ದಾರೆ. ಲಕ್ಷ್ಮಣ ಸವದಿ ಅವರಿಗೆ ಸಚಿವ ಸ್ಥಾನ ನೀಡುವ ಬಗ್ಗೆಯೂ ಖರ್ಗೆ ತೀರ್ಮಾನ ಕೈಗೊಳ್ಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈಶ್ವರ ಖಂಡ್ರೆ, ಎಚ್.ಕೆ.ಪಾಟೀಲ, ಸಂತೋಷ್ ಲಾಡ್, ಶಿವಾನಂದ ಪಾಟೀಲ, ಲಕ್ಷ್ಮಿ ಹೆಬ್ಬಾಳಕರ, ಎಸ್.ಎಸ್.ಮಲ್ಲಿಕಾರ್ಜುನ, ಶರಣ ಬಸಪ್ಪ ದರ್ಶನಾಪುರ, ಎಚ್.ಸಿ.ಮಹದೇವಪ್ಪ, ಪಿರಿಯಾಪಟ್ಟಣದ ವೆಂಕಟೇಶ್, ಬೈರತಿ ಸುರೇಶ್, ಕೃಷ್ಣ ಬೈರೇಗೌಡ, ಪುಟ್ಟರಂಗ ಶೆಟ್ಟಿ, ಡಿ.ಸುಧಾಕರ್, ಚೆಲುವರಾಯ ಸ್ವಾಮಿ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳುವ ಕುರಿತು ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಬಹುತೇಕ ಒಮ್ಮತಕ್ಕೆ ಬಂದಿದ್ದಾರೆ. ಎನ್.ಎ. ಹ್ಯಾರಿಸ್ ಅವರಿಗೆ ಸಚಿವ ಸ್ಥಾನ ನೀಡಲು ಸಿದ್ದರಾಮಯ್ಯ ಒಪ್ಪಿಲ್ಲ ಎಂದೂ ಗೊತ್ತಾಗಿದೆ.

ಶಿವಕುಮಾರ್ ಅವರು ಶುಕ್ರವಾರ ಬೆಳಿಗ್ಗೆ ಮತ್ತೆ ನವದೆಹಲಿಗೆ ಬರಲಿದ್ದು, ಹೈಕಮಾಂಡ್‌ನ ನಾಯಕರನ್ನು ಭೇಟಿ ಮಾಡಲಿದ್ದಾರೆ. ಮುಖ್ಯಮಂತ್ರಿಯವರು ಬೆಂಗಳೂರಿಗೆ ಶುಕ್ರವಾರ ಮರಳಲಿದ್ದಾರೆ. ಸಚಿವರಿಗೆ ಖಾತೆ ಹಂಚಿಕೆ ಕುರಿತು ಈ ವರೆಗೆ ಚರ್ಚೆ ನಡೆದಿಲ್ಲ. ಶುಕ್ರವಾರದ ಸಭೆಯಲ್ಲಿ ಈ ಬಗ್ಗೆ ತೀರ್ಮಾನ ಕೈಗೊಳ್ಳುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷರ ವಜಾಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷರನ್ನು ವಜಾಗೊಳಿಸುವಂತೆ ಕೆಪಿಸಿಸಿ ವಕ್ತಾರ ರಮೇಶ್ ಬಾಬು ಒತ್ತಾಯಿಸಿದ್ದಾರೆ.

ಈ ಬಗ್ಗೆ ಮುಖ್ಯ ಕಾರ್ಯದರ್ಶಿ ಅವರಿಗೆ ಪತ್ರ ಬರೆದಿರುವ ಅವರು, 'ವಿವಿಧ ನಿಗಮ, ಮಂಡಳಿ, ಸ್ವಾಯತ್ತ ಸಂಸ್ಥೆಗಳಿಗೆ ಹಿಂದಿನ ಸರ್ಕಾರದ ಅವಧಿಯಲ್ಲಿ ಮಾಡಲಾಗಿದ್ದ ನಾಮ ನಿರ್ದೇಶನಗಳನ್ನು ರದ್ದುಪಡಿಸಿ ಆದೇಶ ಹೊರಡಿಸಲು ಆಯಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ ಹಾಗೂ ಕಾರ್ಯದರ್ಶಿಗಳಿಗೆ ಆದೇಶ ನೀಡಲಾಗಿದೆ. ಆದರೂ, ಹಲವು ಸಂಸ್ಥೆಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ತಮ್ಮ ಸ್ಥಾನಗಳಿಗೆ ರಾಜಿನಾಮೆ ಸಲ್ಲಿಸಿಲ್ಲ' ಎಂದಿದ್ದಾರೆ.

'ರಾಜೀನಾಮೆ ನೀಡದ ಪದಾಧಿಕಾರಿಗಳನ್ನು ರಾಜ್ಯ ಸರ್ಕಾರ ಕೂಡಲೇ ವಜಾಗೊಳಿಸಬೇಕು. ಇಲ್ಲದಿದ್ದರೆ ಅಧಿಕಾರ ದುರುಪಯೋಗ ಪಡಿಸಿಕೊಳ್ಳುವ ಸಾಧ್ಯತೆ ಇದೆ' ಎಂದು ತಿಳಿಸಿದ್ದಾರೆ.



ಗಿರಿನಗರದಲ್ಲಿರುವ ವಾಸವಿ ಕ್ಷೇತ್ರದ 'ಕನ್ಯಕಾಪರಮೇಶ್ವರಿ' ದೇವಿಯ 5 ಅಡಿ 7 ಇಂಚಿನ ಸಿಲಿಕಾನ್ ಪ್ರತಿಮೆಯು 'ಅಂತರರಾಷ್ಟ್ರೀಯ ವಂಡರ್ ಬುಕ್ ಆಫ್ ರಿಕಾರ್ಡ್'ನಲ್ಲಿ ಸೇರ್ಪಡೆಯಾಗಿದೆ.

ಮೈಸೂರು ರೇಸ್

ಕೋಸ್ಟಲ್ ಕ್ರೂಝ್ ಗೆಲ್ಲುವ ನಿರೀಕ್ಷೆ

ಸ್ಟಾರ್ ಸುಪ್ರೀಮ್ ಟ್ರೋಫಿ ಶುಕ್ರವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕೋಸ್ಟಲ್ ಕ್ರೂಝ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸೂಪರ್ ಸೆಕ್ಸಿ 5, ವೈಟ್‌ಲೈಸ್ 11, ಯೂಮರ್ ಲೇಡಿ 13
2ನೇ ರೇಸ್: ಕಂಟ್ರೆಸ್ ಫೇಮ್ 15, ಡಿ ಕರ್ಣ 3, ಬ್ರೇಕ್ ಅವೇ 4
3ನೇ ರೇಸ್: ಡಿ ರೋಮನ್ ರೀನ್ಸ್ 2, ಸನ್‌ಲೈಟ್ ಸ್ಟಾರ್ಮ್ 6, ಕೊಯೊಟೆ ಗರ್ಲ್ 1
4ನೇ ರೇಸ್: ಹೀರೊಯಿಸ್ಮ್ 4, ಡಿ ಡಿಯರ್ 7, ಹೀರೊಯಿಸಂ 4
5ನೇ ರೇಸ್: ಕೋಸ್ಟಲ್ ಕ್ರೂಝ್ 11, ಪ್ರಿನ್ಸ್ ಕಾರ್ಪೊರೇಟ್ 3, ಕಾಂಟ್ರಿಬ್ಯೂಟರ್ 4
6ನೇ ರೇಸ್: ಸ್ಪಾರ್ಕಲ್ಸ್ 9, ಕಂಟ್ರೆಸ್ ಲೈಟ್ 12, ಕಲಹರಿ ಗೋಲ್ಡ್ 5,
7ನೇ ರೇಸ್: ಐ ದಿ ಮೈಂಡ್ 1, ಫ್ಲೆಮಿಂಗೊ ಡ್ಯಾನ್ಸರ್ 2, ಸಮಯ್ ಬಲ್ವಾನ್ 8

ಉತ್ತಮ ಬೆಟ್: ಸ್ಪಾರ್ಕಲ್ಸ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ನಗರದಲ್ಲಿ ಇಂದು

'ಎಚ್.ಎಸ್. ದೊರೆಸ್ವಾಮಿ' ಅವರ ಸಂಸ್ಮರಣೆ: ಉದ್ಘಾಟನೆ: ವಿಜಯಾ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಅತಿಥಿಗಳು: ಇಂದಿರಾ ಕೃಷ್ಣಪ್ಪ, ಸಿರಿಮನೆ ನಾಗರಾಜ್, ಎಂ.ಪಿ. ನಾಡಗೌಡ, ಮೈಕಲ್ ಫರ್ನಾಂಡಿಸ್, ಕೆ. ಮರುಳಸಿದ್ಧಪ್ಪ, ಬಿ.ಟಿ. ಲಲಿತಾ ನಾಯಕ್, ರುದ್ರಪ್ಪ, ಎಸ್.ಜಿ. ಸುಶೀಲಮ್ಮ, ವಸುಂಧರಾ ಭೂಪತಿ, ಝಾನ್ಸಿ ರಾಣಿ ಲಕ್ಷ್ಮಿಬಾಯಿ, ರುದ್ರಪ್ಪ ಹನಗವಾಡಿ, ಮಾವಳ್ಳಿ ಶಂಕರ್, ಆಯೋಜನೆ: ಕರ್ನಾಟಕ ಗಾಂಧಿ ಸ್ಮಾರಕ, ಡಾ.ಎಚ್.ಎಸ್. ದೊರೆಸ್ವಾಮಿ ವೇದಿಕೆ, ಸ್ಥಳ: ಗಾಂಧಿ ಪ್ರತಿಮೆ, ಮಹಾತ್ಮ ಗಾಂಧಿ ರಸ್ತೆ, ಬೆಳಿಗ್ಗೆ 8.30ರಿಂದ

ಮಾವು, ಹಲಸು ಮೇಳಕ್ಕೆ ಚಾಲನೆ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಉದಯ್ ಗರುಡಾಚಾರ್, ಆಯೋಜನೆ: ಹಾಪ್‌ಕಾಮ್ಸ್, ಸ್ಥಳ: ಡಾ.ಎಂ.ಎಚ್. ಮರೀಗೌಡ ರಸ್ತೆ, ಲಾಲ್‌ಬಾಗ್, ಬೆಳಿಗ್ಗೆ 10

'ಕವಿತೆಯೊಳಾಸೆಗೆಯ್ವ ಫಲಮಾವುದೊ': ಉದ್ಘಾಟನೆ: ಬಸವರಾಜ ಕಲ್ಗುಡಿ, ಆಶಯ ನುಡಿ: ಎಚ್.ಎಲ್. ಪುಷ್ಪ, ಅಧ್ಯಕ್ಷತೆ: ಎಚ್.ಎನ್. ಸುಬ್ರಮಣ್ಯ, ಅತಿಥಿಗಳು: ಸುಜಾತ ಎಚ್. ಆರ್., ವಿ. ವೆಂಕಟಶಿವಾರೆಡ್ಡಿ, ಬಿ.ಎಸ್. ಅರುಣಕುಮಾರ್, ಇಸ್ಥೂರಿ ಸುಧಾಕರ್, ಕಮಲಾ ವೈ.ಸಿ., ಆಯೋಜನೆ: ಸಾಹಿತ್ಯ ಅಕಾಡೆಮಿ, ಕರ್ನಾಟಕ ಲೇಖಕಿಯರ ಸಂಘ, ಸ್ಥಳ: ಡಾ.ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಮಧ್ಯಾಹ್ನ 2ರಿಂದ

'ವೈಯಾಕರಣಿ ಗರಣಿ ಕೃಷ್ಣಾಚಾರ್ಯ ದತ್ತಿ ಉಪನ್ಯಾಸ: 'ಮರೆಯಲಾಗದ ತೇಜಸ್ವಿ' ಕುರಿತು ಉಪನ್ಯಾಸ: ಜಿ.ಟಿ. ನರೇಂದ್ರಕುಮಾರ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5

ಸಾಂಸ್ಕೃತಿಕ ವೈಭವ–2023: ಉದ್ಘಾಟನೆ: ಎಂ. ಶಿವರಾಜು, ಅಧ್ಯಕ್ಷತೆ: ಎಂ. ಪ್ರಕಾಶಮೂರ್ತಿ, ಅತಿಥಿಗಳು: ವೆಂಕಟೇಶ್, ಎಸ್.ಎ. ಹಿರೇಮಠ್, ಸಿ. ಸೋಮಶೇಖರ್, ಮಹೇಶ್ ಕುಮಾರ್ ಟಿ., 'ಎಂಐಎಫ್‌ಎ' ಪ್ರಶಸ್ತಿ ಪ್ರದಾನ: ಬಿ.ಆರ್. ಸತೀಶ್, ಪ್ರಶಸ್ತಿ ಪುರಸ್ಕೃತರು: ಸೂರಿ ಮಿರಾಡೆ, ದೇವಿಕಾ ನಾಗರಾಜ್, ರಾಮಾನುಜಂ ಎಲ್.ಆರ್., ಆಯೋಜನೆ: ಮಹೇಶ್ ಲಲಿತಕಲಾ ಸಂಸ್ಥೆ, ಸ್ಥಳ: ಕರ್ನಾಟಕ ಎಂಜಿನಿಯರ್ ಅಕಾಡೆಮಿ, ಪ್ರಭಾತ್ ರಂಗಮಂದಿರ, ಕಮಲಾನಗರ, ಸಂಜೆ 5.30

ಎದ್ದೇಳು ಕರ್ನಾಟಕ ಅಭಿನಂದನಾ ಸಮಾವೇಶ: ಅತಿಥಿಗಳು: ಸಿದ್ದರಾಮಯ್ಯ, ದೇವನೂರ ಮಹಾದೇವ, ವಿಜಯಾ, ಪುರುಷೋತ್ತಮ ಬಿಳಿಮಲೆ, ದು.ಸರಸ್ವತಿ, ಆಯೋಜನೆ: ಎದ್ದೇಳು ಕರ್ನಾಟಕ, ಸ್ಥಳ: ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಸಭಾಂಗಣ, ಸಂಜೆ 4

ಕೆಂಗೇರಿ ಬಳಿಯ ಹೊಸಕೆರೆಗೆ ಒಳಚರಂಡಿ ನೀರು

ಕೆರೆ ಪರಿಶೀಲನೆ ನಡೆಸಿದ ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

ಕೆಂಗೇರಿ: ಒಳಚರಂಡಿ ನೀರು ನುಗ್ಗಿ ಮಲಿನಗೊಂಡಿದ್ದ ಹೊಸಕೆರೆಗೆ ಬಿಬಿಎಂಪಿ ಹಾಗೂ ಜಲಮಂಡಳಿ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕಳೆದ ನಾಲ್ಕು ದಿನಗಳಿಂದ ಸುರಿಯುತ್ತಿರುವ ಮಳೆಗೆ ಕೆಂಗೇರಿ ಬಳಿಯ ಹೊಸಕೆರೆಗೆ ಒಳಚರಂಡಿ ನೀರು ನುಗ್ಗಿ ಅವಾಂತರ ಸೃಷ್ಟಿಯಾಗಿತ್ತು.

ಕೆರೆಯ ನೀರಿನಲ್ಲಿ ನೊರೆ ಕಾಣಿಸಿಕೊಂಡು ಆತಂಕ ಮೂಡಿತ್ತು. ನಿರ್ವಹಣೆಯ ಕೊರತೆಯಿಂದ ಕೆರೆ ಅವಸಾನದ ಅಂಚಿಗೆ ತಲುಪುತ್ತಿರುವ ಬಗ್ಗೆ 'ಪ್ರಜಾವಾಣಿ'ಯಲ್ಲಿ 'ಹೊಸಕೆರೆಗೆ ಒಳಚರಂಡಿ ನೀರು' ಶೀರ್ಷಿಕೆಯಡಿ ವರದಿ ಪ್ರಕಟಿಸಲಾಗಿತ್ತು.

ಜಲ ಮಂಡಳಿ ಮುಖ್ಯ ಎಂಜಿನಿಯರ್ ದೇವರಾಜ್, ಕಾರ್ಯನಿರ್ವಾಹಕ ಎಂಜಿನಿಯರ್(ಇ.ಇ) ನವನೀತ್, ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್‌ಗಳಾದ (ಎಇಇ) ದೀಪಕ್, ಶಶಿಕುಮಾರ್, ಬಿಬಿಎಂಪಿ ಕೆರೆ ಅಭಿವೃದ್ಧಿ ಪ್ರಾಧಿಕಾರದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್(ಎಇಇ) ಮಹೇಶ್ ಮತ್ತಿತರರು ಕೆರೆ ಅಚ್ಚುಕಟ್ಟು ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಬಿಬಿಎಂಪಿ ಕೆರೆ ಅಭಿವೃದ್ಧಿ ಪ್ರಾಧಿಕಾರದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಮಹೇಶ್ ಮಾತನಾಡಿ, 'ಕೆರೆಯ ನೀರಿನ ಮಟ್ಟ ಹೆಚ್ಚಿದೆ. ನೀರನ್ನು ಮತ್ತೊಂದೆಡೆಗೆ ಪಂಪ್ ಮಾಡಿ ಇನ್ನೆರಡು ದಿನಗಳಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗುವುದು' ಎಂದು ತಿಳಿಸಿದರು.

'ಕೆರೆಯ ಭಾಗದಲ್ಲೇ ಒಳಚರಂಡಿಯ ಪೈಪ್ ಅಳವಡಿಸಲಾಗಿದ್ದು, ನೀರು ಮಲಿನವಾಗುವ ಸಾಧ್ಯತೆ ಇದೆ. ಹೀಗಾಗಿ, ಒಳಚರಂಡಿ ಪೈಪ್‌ಲೈನ್ ಸ್ಥಳಾಂತರಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು' ಎಂದು ತಿಳಿಸಿದರು.

ಸಭೆ: ಅಧಿಕಾರಿಗಳ ಸಭೆ ನಡೆಸಿದ ಸ್ಥಳೀಯ ಶಾಸಕ ಎಸ್.ಟಿ.ಸೋಮಶೇಖರ್ ಮಳೆಗಾಲ ಸಮೀಪಿಸುತ್ತಿದ್ದು, ಬಿಬಿಎಂಪಿ ಹಾಗೂ ಜಲ ಮಂಡಳಿ ಅಧಿಕಾರಿಗಳು ಯಾವುದೇ ಮಳೆಹಾನಿ ಪ್ರಕರಣ ಸಂಭವಿಸಿದಂತೆ ಮುನ್ನೆಚ್ಚರಿಕೆ ಕ್ರಮಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಒಳಚರಂಡಿ ನೀರು ಕೆರೆ ಸೇರದಂತೆ ಕ್ರಮವಹಿಸಬೇಕು. ರಸ್ತೆ, ಕೆಳಸೇತುವೆಯಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು ಮಳೆ ಹಾನಿ ತಡೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಯೋಜನೆ ಸಿದ್ಧಪಡಿಸುವಂತೆ ಹೇಳಿದರು. ವಳಗೆರೆಹಳ್ಳಿ ನಿವಾಸಿಗಳ ಒಕ್ಕೂಟದ ಅಧ್ಯಕ್ಷ ಎನ್. ಕದರಪ್ಪ ಇದ್ದರು.



ಬಿಬಿಎಂಪಿ ಹಾಗೂ ಜಲಮಂಡಳಿ ಅಧಿಕಾರಿಗಳು ಹೊಸಕೆರೆಯಲ್ಲಿನ ಸಮಸ್ಯೆ ಪರಿಶೀಲಿಸಿದರು. ಜಲ ಮಂಡಳಿ ಮುಖ್ಯ ಎಂಜಿನಿಯರ್ ದೇವರಾಜ್, ಕಾರ್ಯ ನಿರ್ವಾಹಕ ಎಂಜಿನಿಯರ್ ನವನೀತ್, ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ದೀಪಕ್, ಶಶಿಕುಮಾರ್, ಮಹೇಶ್, ವಳಗೆರೆಹಳ್ಳಿ ನಿವಾಸಿಗಳ ಒಕ್ಕೂಟದ ಅಧ್ಯಕ್ಷ ಎನ್. ಕದರಪ್ಪ ಇದ್ದರು.

ಮಧ್ಯಂತರ ಪರಿಹಾರ: ಹೋರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಾನಗರ ಪಾಲಿಕೆ ಮತ್ತು ಸ್ಥಳೀಯ ಸಂಸ್ಥೆಗಳ ನೌಕರರಿಗೆ ಶೇ 17ರಷ್ಟು ಮಧ್ಯಂತರ ಪರಿಹಾರ ಆದೇಶ ಹೊರಡಿಸದಿದ್ದರೆ ಯಾವುದೇ ಮುನ್ಸೂಚನೆ ಇಲ್ಲದೆ ಹೋರಾಟ ಆರಂಭಿಸಲಾಗುವುದು' ಎಂದು ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘ ತಿಳಿಸಿದೆ.

ರಾಜ್ಯ ಸರ್ಕಾರಿ ನೌಕರರು ನಡೆಸಿದ ಮುಷ್ಕರಕ್ಕೆ ಪಾಲಿಕೆ ನೌಕರರ ಸಂಘವೂ ಬೆಂಬಲ ನೀಡಿತ್ತು. ಆದರೆ, ಮಧ್ಯಂತರ ಪರಿಹಾರವನ್ನು ರಾಜ್ಯ ಸರ್ಕಾರಿ ನೌಕರರಿಗೆ ಮಾತ್ರ ನೀಡಲಾಗಿದ್ದು, ಎರಡು ತಿಂಗಳಿನಿಂದ ಅವರು ಈ ಸೌಲಭ್ಯ ಪಡೆಯುತ್ತಿದ್ದಾರೆ. ಆದರೆ, ಪಾಲಿಕೆ ನೌಕರರು ಇದರಿಂದ ವಂಚಿತರಾಗಿದ್ದಾರೆ ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಎ.ಅಮೃತರಾಜ್ ತಿಳಿಸಿದ್ದಾರೆ.

ಪಾಲಿಕೆ ನೌಕರರಿಗೂ ಈ ಸೌಲಭ್ಯ ವಿಸ್ತರಣೆ ಮಾಡಬೇಕು ಎಂದು ಎಚ್ಚರಿಸಿದ್ದಾರೆ.

ಇಂದಿರಾ ಕ್ಯಾಂಟೀನ್ ಸ್ಥಿತಿಗತಿ: ವರದಿ ಸಲ್ಲಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ವಲಯವಾರು ಪರಿಶೀಲನೆಯ ವರದಿಗೆ ಸೂಚನೆ
- ಚಾಲ್ತಿಯಲ್ಲಿರುವುದು 163 ಕ್ಯಾಂಟೀನ್

ಬೆಂಗಳೂರು: ವಲಯವಾರು ಇಂದಿರಾ ಕ್ಯಾಂಟೀನ್‌ಗಳ ಸ್ಥಿತಿಗತಿ ಪರಿಶೀಲಿಸಿ ವರದಿ ಸಲ್ಲಿಸುವಂತೆ ಪಾಲಿಕೆಯ ಆರೋಗ್ಯ ವಿಭಾಗದ ಅಧಿಕಾರಿಗಳಿಗೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.


ತುಷಾರ್ ಗಿರಿನಾಥ್

ಬಿಬಿಎಂಪಿ ವ್ಯಾಪ್ತಿಯಲ್ಲಿನ ಇಂದಿರಾ ಕ್ಯಾಂಟೀನ್‌ಗಳ ನಿರ್ವಹಣೆ ಬಗ್ಗೆ ಮುಖ್ಯ ಆಯುಕ್ತರೊಂದಿಗೆ ವರ್ಚುವಲ್ ಸಭೆ ನಡೆಸಿದ ಅವರು, 'ಬಿಬಿಎಂಪಿ ವ್ಯಾಪ್ತಿಯಲ್ಲಿ ಒಟ್ಟು ಅಂದಾಜು 175 ಇಂದಿರಾ ಕ್ಯಾಂಟೀನ್‌ಗಳಿದ್ದು, ಈ ಪೈಕಿ 163 ಇಂದಿರಾ ಕ್ಯಾಂಟೀನ್ ಚಾಲ್ತಿಯಲ್ಲಿವೆ. ಬಾಕಿ 12 ಕ್ಯಾಂಟೀನ್‌ಗಳು ಚಾಲ್ತಿಯಲ್ಲಿ ಇಲ್ಲ. ಯಾವ ಕಾರಣಕ್ಕೆ ಅವುಗಳು ಚಾಲ್ತಿಯಲ್ಲಿ ಇಲ್ಲ ಎಂಬ ವಿವರ ಒಳಗೊಂಡ ವರದಿ ನೀಡಬೇಕು' ಎಂದರು.

ಈಗಾಗಲೇ ಚಾಲ್ತಿಯಲ್ಲಿ ಇರುವ ಕ್ಯಾಂಟೀನ್‌ಗಳ ಸ್ಥಿತಿಗತಿ ಬಗ್ಗೆಯೂ ಪರಿಶೀಲನೆ ನಡೆಸಬೇಕು ಎಂದು ಎಲ್ಲಾ ವಲಯ ಆಯುಕ್ತರು, ಜಂಟಿ ಆಯುಕ್ತರು, ಮುಖ್ಯ ಎಂಜಿನಿಯರ್‌ಗಳು, ಆರೋಗ್ಯಾಧಿಕಾರಿಗಳು ವರದಿ ಸಲ್ಲಿಸಬೇಕು ಎಂದು ಹೇಳಿದರು.

ರಾಜ್ಯ ಸರ್ಕಾರದ ಮಹತ್ವದ ಯೋಜನೆಯಲ್ಲಿ ಒಂದಾದ ಇಂದಿರಾ ಕ್ಯಾಂಟೀನ್ ನಿರ್ವಹಣೆ ಮತ್ತು ಮರು ಸ್ಥಾಪನೆ ಅಗತ್ಯವಿದೆ. ಆಹಾರ ಗುಣಮಟ್ಟ ಮತ್ತು ರುಚಿಯಲ್ಲಿ ಯಾವುದೇ ರಾಜಿ ಮಾಡಿಕೊಳ್ಳಬಾರದು. ಇಂದಿರಾ ಕ್ಯಾಂಟೀನ್ ಸ್ಥಾಪನೆ, ಆಹಾರ ಪೂರೈಕೆ, ಸಂಚಾರಿ ಕ್ಯಾಂಟೀನ್ ತೆರೆಯುವ ಸಂಬಂಧ ಕೂಡಲೇ ಹೊಸದಾಗಿ ಪ್ರಸ್ತಾವ ಸಿದ್ಧಪಡಿಸಲು ವಿಶೇಷ ಆಯುಕ್ತ (ಆರೋಗ್ಯ) ಕೆ.ವಿ.ತ್ರಿಲೋಕಚಂದ್ರ ಅವರಿಗೆ ಸೂಚನೆ ನೀಡಿದರು.

ಆಶಾ: ಬಾಕಿ ಗೌರವಧನಕ್ಕೆ ಆಗ್ರಹ

ಬೆಂಗಳೂರು: ಆಶಾ ಕಾರ್ಯಕರ್ತೆಯರಿಗೆ ಬಾಕಿ ಉಳಿಸಿಕೊಂಡಿರುವ ಗೌರವಧನ ಹಾಗೂ ಪ್ರೋತ್ಸಾಹಧನವನ್ನು ಬಿಡುಗಡೆಗೆ ಮಾಡುವಂತೆ ರಾಜ್ಯ ಸರ್ಕಾರಕ್ಕೆ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ ಆಗ್ರಹಿಸಿದೆ.

'ರಾಜ್ಯದ ಆಶಾ ಕಾರ್ಯಕರ್ತೆಯರಿಗೆ ಕಳೆದ 3–4 ತಿಂಗಳಿಂದ ರಾಜ್ಯ ಸರ್ಕಾರದ ಗೌರವಧನ ಮತ್ತು ಕೇಂದ್ರ ಸರ್ಕಾರದ ಪ್ರೋತ್ಸಾಹಧನ ಇನ್ನೂ ನೀಡಿಲ್ಲ. ಒಂಟಿ ಮಹಿಳೆಯರು ಸೇರಿ ಬಹುತೇಕ ಆಶಾ ಕಾರ್ಯಕರ್ತೆಯರು ಈ ಕೆಲಸದಿಂದಲೇ ಕುಟುಂಬ ನಿರ್ವಹಿಸುತ್ತಿದ್ದು, ವೇತನ ಇಲ್ಲದೆ ಜೀವನ ನಡೆಸಲು ಕಷ್ಟಪಡುತ್ತಿದ್ದಾರೆ. ವೇತನ ಬಿಡುಗಡೆ ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಮಾಡಿಕೊಂಡರೂ ಪ್ರಯೋಜನವಾಗಲಿಲ್ಲ. ಸರ್ಕಾರ ಕೂಡಲೇ ಈ ಬಗ್ಗೆ ಕ್ರಮವಹಿಸಬೇಕು' ಎಂದು ಸಂಘದ ಕಾರ್ಯದರ್ಶಿ ಡಿ. ನಾಗಲಕ್ಷ್ಮಿ ಒತ್ತಾಯಿಸಿದ್ದಾರೆ.



ಕಾಮಗಾರಿ...

ಕೆ.ಆರ್.ಮಾರುಕಟ್ಟೆಯಿಂದ ಬೆಳ್ಳಂದೂರು ಕಡೆಗೆ ಸಾಗುವ ರಾಜಕಾಲುವೆ ಸ್ವಚ್ಛಗೊಳಿಸುವ ಕಾಮಗಾರಿ ಆಡುಗೋಡಿಯಲ್ಲಿ ಗುರುವಾರ ನಡೆಯಿತು –ಪ್ರಜಾವಾಣಿ ಚಿತ್ರ

ವಿಮಾನಕ್ಕೆ ಬಡಿದ ಹಕ್ಕಿ: ದುಬೈ ಪ್ರಯಾಣ ವಿಳಂಬ

ದಿನವಿಡೀ ನಿಲ್ದಾಣದಲ್ಲೇ ಕಳೆದ ಬೆಂಗಳೂರು ಪ್ರಯಾಣಿಕರು

ಪ್ರಜಾವಾಣಿ ವಾರ್ತೆ

ಮಂಗಳೂರು: ಇಲ್ಲಿಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ದುಬೈಗೆ ಹೊರಟಿದ್ದ ಇಂಡಿಗೊ ವಿಮಾನಕ್ಕೆ ರನ್ ವೇಯಲ್ಲಿ ಹಕ್ಕಿ ಬಡಿದ ಕಾರಣ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಗುರುವಾರ ಬೆಳಿಗ್ಗೆ 8.25ಕ್ಕೆ ಹೊರಡಲು ಸಜ್ಜಾಗಿದ್ದ 6E-1467 ವಿಮಾನ ರನ್ ವೇ ಪ್ರವೇಶಿಸುತ್ತಿದ್ದಂತೆ ಹಕ್ಕಿ ಬಡಿದಿದೆ. ಪೈಲಟ್ ಈ ವಿಷಯವನ್ನು ಏರ್ ಟ್ರಾಫಿಕ್ ಕಂಟ್ರೋಲ್ (ಎಟಿಸಿ)ಗೆ ತಿಳಿಸಿದರು. 160 ಪ್ರಯಾಣಿಕರನ್ನು ಕೆಳಗಿಳಿಸಿದ ನಂತರ ತಾಂತ್ರಿಕ ತಪಾಸಣೆಗೆ ಒಳಪಡಿಸಲಾಯಿತು ಎಂದು ವಿಮಾನ ನಿಲ್ದಾಣದ ವಕ್ತಾರರು ತಿಳಿಸಿದ್ದಾರೆ.

ಬೆಂಗಳೂರಿನಿಂದ ಬಂದ ಇನ್ನೊಂದು ಇಂಡಿಗೊ ವಿಮಾನಕ್ಕೆ ಪ್ರಯಾಣಿಕರನ್ನು ಹತ್ತಿಸಲಾಯಿತು. ಈ ವಿಮಾನ 11.05ಕ್ಕೆ ದುಬೈಗೆ ಪ್ರಯಾಣ ಬೆಳೆಸಿತು. ಬೆಂಗಳೂರಿಗೆ ಹೋಗಬೇಕಾಗಿದ್ದ 165 ಪ್ರಯಾಣಿಕರನ್ನು 6E- 5346 ವಿಮಾನದಲ್ಲಿ ಕಳುಹಿಸಲಾಯಿತು ಎಂದು ಅವರು ತಿಳಿಸಿದ್ದಾರೆ.

ಹಿರಿಯರಿಗೆ ತೊಂದರೆ: ಹಿರಿಯ ನಾಗರಿಕರು ಅನುಭವಿಸಿದ ಸಮಸ್ಯೆ ಬಗ್ಗೆ ಟ್ವೀಟ್ ಮಾಡಿರುವ ಸಂಜಲ್ ಶಾಸ್ತ್ರಿ ಎನ್ನುವವರು, 'ಬೆಂಗಳೂರಿನಿಂದ ಬಂದ ವಿಮಾನ ದುಬೈಗೆ ಹೊರಟಿದ್ದರಿಂದಾಗಿ ಬೆಂಗಳೂರಿಗೆ ಪ್ರಯಾಣಿಸಬೇಕಿದ್ದ ಹಿರಿಯ ನಾಗರಿಕರು ತೊಂದರೆ ಅನುಭವಿಸಬೇಕಾಯಿತು. ಸೆಕ್ಯುರಿಟಿ ಚೆಕ್ ಆಗಿದ್ದ ನನ್ನ ಅಜ್ಜ–ಅಜ್ಜಿ ವಿಮಾನ ನಿಲ್ದಾಣದ ಒಳಗೆ ಸಿಲುಕಿಕೊಂಡು, ಕಷ್ಟಪಟ್ಟರು. ಅಂತರರಾಷ್ಟ್ರೀಯ ಪ್ರಯಾಣಕ್ಕೆ ಹೋಲಿಸಿದರೆ ದೇಶೀಯ ಪ್ರಯಾಣಿಕರು ಮೌಲ್ಯ ಕಡಿಮೆ ಎಂದಾಯಿತೇ? ನನ್ನ ಅಜ್ಜ–ಅಜ್ಜಿ ಅನುಭವಿಸಿದ ನೋವಿಗೆ ಯಾರು ಪರಿಹಾರ ನೀಡುತ್ತಾರೆ' ಎಂದಿದ್ದಾರೆ.

'ಬೆಳಿಗ್ಗೆ 9 ಗಂಟೆಗೆ ವಿಮಾನ ನಿಲ್ದಾಣಕ್ಕೆ ಹೋದವರು ರಾತ್ರಿವರೆಗೂ ಅಲ್ಲಿಯೇ ಉಳಿಯುವ ಹಾಗಾಯಿತು. ಬಲಾಢ್ಯರಿಗೆ ಸಂಜೆ 7.20ರ ವಿಮಾನದಲ್ಲಿ ವ್ಯವಸ್ಥೆಯಾಯಿತು. ಉಳಿದವರು ರಾತ್ರಿ 9.45ರ ವಿಮಾನಕ್ಕೆ ಕಾಯಬೇಕಾಯಿತು' ಎಂದಿದ್ದಾರೆ.

'ಬೆಂಗಳೂರಿಗೆ ಪ್ರಯಾಣಿಸಬೇಕಾಗಿದ್ದ 100ಕ್ಕೂ ಹೆಚ್ಚು ಪ್ರಯಾಣಿಕರು ತೊಂದರೆ ಅನುಭವಿಸಿದರು. ಅದರಲ್ಲೂ ಹಿರಿಯ ನಾಗರಿಕರು ಸೇರಿ ಅನೇಕರಿಗೆ ತೀರಾ ಅನಾನುಕೂಲವಾಯಿತು. ಕೇಂದ್ರ ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಮತ್ತು ನಾಗರಿಕ ವಿಮಾನಯಾನ ಮಹಾನಿರ್ದೇಶಕರು ಈ ಬಗ್ಗೆ ತನಿಖೆ ನಡೆಸಬೇಕು' ಎಂದು ರಾಜಕೀಯ ವಿಶ್ಲೇಷಕ ಸಂದೀಪ್ ಶಾಸ್ತ್ರಿ ಅವರು ಸಹ ಟ್ವೀಟ್ ಮಾಡಿದ್ದಾರೆ.


'ಬೆಂಗಳೂರು ದಸ್ತಕರ್ ಬಜಾರ್' ಮೇಳದಲ್ಲಿ ಆಶಾ ಪಾಟೀಲ ಅವರು ಬಟ್ಟೆಗಳನ್ನು ವೀಕ್ಷಿಸಿದರು

'ಬಂಜಾರ ಸಮುದಾಯದ ವಸ್ತ್ರ ವಿನ್ಯಾಸಕ್ಕೆ ಆಧುನಿಕ ಸ್ಪರ್ಶ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಜಯಮಹಲ್ ಪ್ಯಾಲೇಸ್‌ನಲ್ಲಿ ನಡೆಯುತ್ತಿರುವ 'ಬೆಂಗಳೂರು ದಸ್ತಕರ್ ಬಜಾರ್' ಮೇಳದಲ್ಲಿ ಬಂಜಾರ ಕಸೂತಿ ವಿಭಾಗದ ವಸ್ತ್ರ ವೈಭವ ಗಮನ ಸೆಳೆಯುತ್ತಿವೆ.

ನಶಿಸುತ್ತಿರುವ ಬಂಜಾರ ಸಮುದಾಯದ ಶ್ರೀಮಂತ ಸಂಸ್ಕೃತಿ, ಉಡುಗೆ ತೊಡುಗೆಗಳನ್ನು ಉಳಿಸಿ ಬೆಳೆಸುವ ಮತ್ತು ಬಂಜಾರ ಜನಾಂಗದ ಜೀವನೋಪಾಯದ ಉದ್ದೇಶದಿಂದ ಸಚಿವ ಎಂ.ಬಿ. ಪಾಟೀಲ ಅವರ ಪತ್ನಿ ಆಶಾ ಪಾಟೀಲ ಬಂಜಾರ ಕಸೂತಿ ಸ್ವಯಂ ಸೇವಾ ಸಂಘ ಸ್ಥಾಪಿಸಿದ್ದಾರೆ. ದಶಕಗಳಿಂದ ಈ ಸಮುದಾಯದ ಶ್ರೇಯೋಭಿವೃದ್ಧಿಗಾಗಿ ಆಶಾ ಪಾಟೀಲ್ ಕಾರ್ಯನಿರ್ವಹಿಸುತ್ತಿದ್ದಾರೆ. ಬಂಜಾರ ಕಲೆಗೆ ಆಧುನಿಕ ಸ್ಪರ್ಶ ನೀಡುವ ನಿಟ್ಟಿನಲ್ಲಿ ಇವರು ಕಾರ್ಯ ಪ್ರವೃತ್ತರಾಗಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಆಶಾ ಪಾಟೀಲ, 'ಬಂಜಾರ ಸಮುದಾಯದ ಗಾಗ್ರಾಚೋಲಿ ಮತ್ತಿತರ ವಸ್ತ್ರಗಳನ್ನು ದಿನನಿತ್ಯ ತೊಡಲು ಸಾಧ್ಯವಿಲ್ಲ. ಹೀಗಾಗಿ ಖಾದಿ ವಸ್ತ್ರಕ್ಕೆ ಬಂಜಾರ ಉಡುಪಿನ ಸ್ಪರ್ಶ ನೀಡಲಾಗಿದೆ. ಲಂಬಾಣಿ ಜನಾಂಗದ ಕಸೂತಿ ದೇಶ ವಿದೇಶಗಳಲ್ಲಿ ಖ್ಯಾತಿ ಪಡೆದಿದೆ. ಉಡುಪುಗಳಲ್ಲಿ ನಾವಿನ್ಯತೆಯ ಮೆರಗು ಇದ್ದು, ಬೆರಗುಗೊಳಿಸುವ ಆಯ್ಕೆಗಳಿಗೆ ಅವಕಾಶಗಳಿವೆ' ಎಂದರು.

ದಸ್ತಕರ್ ಬಜಾರ್ ಪ್ರದರ್ಶನ ಮತ್ತು ಮಾರಾಟ ಮೇಳ ಇದೇ 29ರವರೆಗೂ ನಡೆಯಲಿದೆ. 25 ರಾಜ್ಯಗಳ 150ಕ್ಕೂ ಹೆಚ್ಚು ಕುಶಲಕರ್ಮಿಗಳು ಈ ಮೇಳದಲ್ಲಿ ಭಾಗವಹಿಸಿದ್ದಾರೆ.

ನ್ಯಾಯಾಂಗದ ಸ್ವಾತಂತ್ರ್ಯ ಪೂರ್ಣವಾಗಿಲ್ಲ: ಶ್ಯಾಮ್ ದಿವಾನ್ ಅಭಿಪ್ರಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನ್ಯಾಯಮೂರ್ತಿಗಳಿಗೆ ನಿವೃತ್ತಿ ನಂತರ ನೀಡಲಾಗುವ ಹುದ್ದೆಗಳು ಹಾಗೂ ನ್ಯಾಯಮಂಡಳಿಗಳಿಂದಾಗಿ ನ್ಯಾಯಾಂಗದ ಸ್ವಾತಂತ್ರ್ಯ ಪರಿಪೂರ್ಣ ಎನಿಸುತ್ತಿಲ್ಲ' ಎಂದು ಸುಪ್ರೀಂ ಕೋರ್ಟ್ ಹಿರಿಯ ವಕೀಲರು ಹಾಗೂ 'ಲಾ ಏಷ್ಯಾ ಸಂಸ್ಥೆ' ಅಧ್ಯಕ್ಷರೂ ಆದ ಶ್ಯಾಮ್ ದಿವಾನ್ ಅಭಿಪ್ರಾಯಪಟ್ಟರು.

ಬೆಂಗಳೂರು ವಕೀಲರ ಸಂಘದಿಂದ ಆಯೋಜಿಸಲಾಗಿದ್ದ, 'ನ್ಯಾಯಾಂಗದ ಸ್ವಾತಂತ್ರ್ಯವನ್ನು ಎತ್ತಿಹಿಡಿಯುವಲ್ಲಿ ವಕೀಲರ ಪಾತ್ರ' ಎಂಬ ವಿಷಯದ ಕುರಿತು ಗುರುವಾರ ಉಪನ್ಯಾಸ ನೀಡಿದ ಅವರು, 'ನ್ಯಾಯಾಂಗದ ಸ್ವಾತಂತ್ರ್ಯ ಕಾಪಾಡುವ ದಿಸೆಯಲ್ಲಿ ಮತ್ತು ನಿವೃತ್ತಿ ನಂತರ ನ್ಯಾಯಮೂರ್ತಿಗಳನ್ನು ವಿವಿಧ ನ್ಯಾಯಮಂಡಳಿಗಳಿಗೆ ನೇಮಕ ಮಾಡುವಲ್ಲಿ ನ್ಯಾಯಮಂಡಳಿಗಳ ಅಸ್ತಿತ್ವ ಉತ್ತಮ ಬೆಳವಣಿಗೆಯಾಗಿ ಕಾಣುತ್ತಿಲ್ಲ' ಎಂದರು.

ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ ಮಾತನಾಡಿ, 'ಇಂದು ದೇಶವನ್ನು ಕಟ್ಟುವಲ್ಲಿ ನ್ಯಾಯಾಂಗ ವ್ಯವಸ್ಥೆಯ ಸ್ವಾತಂತ್ರ್ಯ ಹೆಚ್ಚಿನ ಪ್ರಾಮುಖ್ಯತೆ ವಹಿಸುತ್ತದೆ ಮತ್ತು ಅದರ ಗುಣಮಟ್ಟಕ್ಕೆ ಅಗ್ರಸ್ಥಾನ ದಕ್ಕಬೇಕಾಗಿದೆ. ಆದಾಗ್ಯೂ ಕೆಲವು ಸನ್ನಿವೇಶಗಳು ಇಂದು ನ್ಯಾಯಾಂಗದ ಸ್ವಾತಂತ್ರ್ಯಕ್ಕೆ ಹೆಚ್ಚಿನ ಅಡಚಣೆಯಾಗಿವೆ ' ಎಂದು ವಿಷಾದ ವ್ಯಕ್ತಪಡಿಸಿದರು.

'ವಕೀಲರು ಮತ್ತು ವಕೀಲರ ಸಂಘಗಳು ನಿರ್ಭಯವಾಗಿ ಮತ್ತು ಧೈರ್ಯದಿಂದ ತಮ್ಮ ವೃತ್ತಿಯ ಘನತೆ ಹಾಗೂ ಹೊಣೆಗಾರಿಕೆಯನ್ನು ಎತ್ತಿ ಹಿಡಿಯುಂತಾಗಬೇಕು. ನ್ಯಾಯಾಂಗದ ಸ್ವಾತಂತ್ರ್ಯ ಎಂದರೆ ಕೇವಲ ಆಡಳಿತ ವರ್ಗದಿಂದ ಸ್ವಾಯತ್ತತೆ ಕಾಪಾಡುವುದಲ್ಲ' ಎಂದರು.



ಹೈಕೋರ್ಟ್‌ನಲ್ಲಿ ಗುರುವಾರ ಆಯೋಜಿಸಲಾಗಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ನೂತನ ಅಡ್ವೊಕೇಟ್ ಜನರಲ್ ಶಶಿಕಿರಣ ಶೆಟ್ಟಿ ಅವರನ್ನು ಸಂಘದ ವತಿಯಿಂದ ಸನ್ಮಾನಿಸಲಾಯಿತು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಎಸ್‌ರಾಜು, (ಎಡದಿಂದ ಬಲಕ್ಕೆ), ಪ್ರಧಾನ ಕಾರ್ಯದರ್ಶಿ ಟಿ.ಜಿ.ರವಿ, ಸುಪ್ರೀಂ ಕೋರ್ಟ್ ಹಿರಿಯ ವಕೀಲ ಶ್ಯಾಮ್ ದಿವಾನ್ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಹಿರಿಯ ವಕೀಲರಾದ ಎಸ್‌ಎಸ್‌ನಾಗಾನಂದ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯ ಎ.ಎಸ್‌ ಹರೀಶ ಇದ್ದರು.

ಸೋಮಶೇಖರಗೆ ಕಸಾಪ ದತ್ತಿ ಪ್ರಶಸ್ತಿ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಲಿಂಗಮ್ಮ ಮತ್ತು ಡಾ. ಚಿಕ್ಕಕೊಮಾರಿಗೌಡ ಹಾರೋಕೊಪ್ಪ ದತ್ತಿ ಪ್ರಶಸ್ತಿ'ಗೆ ಮಂಡ್ಯದ ಕೆ.ಆರ್.ಪೇಟೆ ಪ್ರಗತಿಪರ ಕೃಷಿಕ ಕೆ.ಎಸ್. ಸೋಮಶೇಖರ ಆಯ್ಕೆಯಾಗಿದ್ದಾರೆ.


ಕೆ.ಎಸ್‌. ಸೋಮಶೇಖರ

ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಕೃಷಿ ಕ್ಷೇತ್ರದಲ್ಲಿನ ಸಾಧನೆ ಪರಿಗಣಿಸಿ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಿದೆ. ಪ್ರಶಸ್ತಿ ₹ 10 ಸಾವಿರ ನಗದು ಒಳಗೊಂಡಿದೆ ಎಂದು ಕಸಾಪ ಪ್ರಕಟಣೆಯಲ್ಲಿ ತಿಳಿಸಿದೆ.

ಗೌರವ್ ಗುಪ್ತ ಕೆಪಿಸಿಎಲ್ ಎಂ.ಡಿ

ಬೆಂಗಳೂರು: ರಾಜ್ಯ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಅವರಿಗೆ ಇಂಧನ ಇಲಾಖೆಯ ಜತೆಗೆ ಮೂಲ ಸೌಕರ್ಯ ಅಭಿವೃದ್ಧಿ ಇಲಾಖೆ ಹಾಗೂ ಕರ್ನಾಟಕ ವಿದ್ಯುತ್ ನಿಗಮದ ವ್ಯವಸ್ಥಾಪಕ ನಿರ್ದೇಶಕ ಹುದ್ದೆಯ ಜವಾಬ್ದಾರಿಯನ್ನೂ ನೀಡಲಾಗಿದೆ.

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಕಾರ್ಯದರ್ಶಿ ಪಂಕಜ್‌ಕುಮಾರ್ ಪಾಂಡೆ ಅವರಿಗೆ ಪ್ರವಾಸೋದ್ಯಮ ಇಲಾಖೆಯ ಕಾರ್ಯದರ್ಶಿ ಹುದ್ದೆಯನ್ನೂ ಹೆಚ್ಚುವರಿಯಾಗಿ ನೀಡಿ ಆದೇಶ ಹೊರಡಿಸಲಾಗಿದೆ.

'ದೊಡ್ಡ ಪ್ರಮಾಣದ ಮೀಸಲಾತಿ ಸಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ರಾಜ್ಯ ಸರ್ಕಾರಗಳು ದೊಡ್ಡ ಪ್ರಮಾಣದಲ್ಲಿ ಮೀಸಲಾತಿ ನೀಡುವುದರಲ್ಲಿ ನಿರತವಾಗಬಾರದು. ಇದರಿಂದ ಮೀಸಲಾತಿಯ ಮೂಲ ಉದ್ದೇಶವೇ ವಿಫಲಗೊಳ್ಳಲಿದೆ. ಈ ನಡೆಯು ಅಸಾಂವಿಧಾನಿಕ ಎಂದು ಈಗಾಗಲೇ ಹೇಳಲಾಗಿದ್ದು, ಇದರಿಂದ ಸಂವಿಧಾನದ 14ನೇ ವಿಧಿಯ ಉಲ್ಲಂಘನೆಯೂ ಆಗಲಿದೆ' ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ಮಧ್ಯಪ್ರದೇಶ ಸರ್ಕಾರವು 2022ರ ಮೇ 12ರಂದು ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ ವೀಣಾ ವಾದಿನಿ ಶಿಕ್ಷಕರ ತರಬೇತಿ ಸಂಸ್ಥೆಯು ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು. ಇದರ ವಿರುದ್ಧ ಶಿಕ್ಷಣ ಸಂಸ್ಥೆಯು ಸುಪ್ರೀಂಗೆ ಮೇಲ್ಮನವಿ ಸಲ್ಲಿಸಿತ್ತು. 'ಒಟ್ಟು ಸೀಟುಗಳಲ್ಲಿ ಶೇ 75ರಷ್ಟು ಸೀಟುಗಳನ್ನು ಸ್ಥಳೀಯರಿಗೆ ಮೀಸಲಿಡುವುದು ಅವೈಜ್ಞಾನಿಕ. ಇದು ಅಸಾಂವಿಧಾನಿಕ ನಡೆ ಎಂದು ಪ್ರದೀಪ್ ಜೈನ್ ಪ್ರಕರಣದಲ್ಲೇ (1984) ಸ್ಪಷ್ಟಪಡಿಸಲಾಗಿದೆ' ಎಂದು ತಿಳಿಸಿತು.

ಪತ್ರಿಕೋದ್ಯಮ ಡಿಪ್ಲೊಮಾ: ಅರ್ಜಿ ಆಹ್ವಾನ

ಬೆಂಗಳೂರು: ಭಾರತೀಯ ವಿದ್ಯಾಭವನವು 2023ನೇ ಸಾಲಿನ ಸ್ನಾತಕೋತ್ತರ ಪತ್ರಿಕೋದ್ಯಮ ಡಿಪ್ಲೊಮಾಕ್ಕೆ ಅರ್ಜಿ ಆಹ್ವಾನಿಸಿದೆ.

ಮುದ್ರಣ, ದೃಶ್ಯ ಮತ್ತು ಕಾರ್ಪೊರೇಟ್ ಪತ್ರಿಕೋದ್ಯಮ 3 ವಿಭಾಗಗಳಲ್ಲಿ ವಿಶೇಷ ತರಬೇತಿ ನೀಡಲಾಗುತ್ತಿದೆ. ಯಾವುದೇ ಪದವಿ ಪಡೆದವರು ಅರ್ಜಿ ಸಲ್ಲಿಸಬಹುದಾಗಿದೆ. ಭಾರತೀಯ ವಿದ್ಯಾಭವನದ ಪತ್ರಿಕೋದ್ಯಮ ಕಾಲೇಜಿನಲ್ಲಿ ಜುಲೈ 2023ರಿಂದ ತರಗತಿಗಳನ್ನು ಆರಂಭವಾಗಲಿವೆ ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗಾಗಿ: 9538181140ಗೆ ಸಂಪರ್ಕಿಸಿ.







ನಗರ ಪೊಲೀಸ್ ಕಮಿಷನರ್ ಕಚೇರಿಗೆ ಗುರುವಾರ ಭೇಟಿ ನೀಡಿದ ಡಿಜಿ–ಐಜಿಪಿ ಅಲೋಕ್ ಮೋಹನ್ ಅವರು ಅಧಿಕಾರಿಗಳಿಗೆ ಹಸ್ತಲಾಘವ ನೀಡಿ ಕುಶಲೋಪರಿ ವಿಚಾರಿಸಿದರು – ಪ್ರಜಾವಾಣಿ ಚಿತ್ರ

‘ಎಫ್‌ಐಆರ್ ದಾಖಲು, ಠಾಣೆ ಭೇಟಿ ಕಡ್ಡಾಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೂರು ನೀಡಲು ಬರುವ ಜನರ ಸಮಸ್ಯೆಗಳನ್ನು ಆಲಿಸಬೇಕು. ದೂರು ನೀಡಿದ ಕೂಡಲೇ ಎಫ್‌ಐಆರ್ ದಾಖಲಿಸುವುದು ಕಡ್ಡಾಯ. ದೂರು ದಾಖಲಿಸಲು ನಿರಾಕರಿಸಿ ಜನರನ್ನು ವಾಪಸು ಕಳುಹಿಸಿದ್ದು ಕಂಡುಬಂದರೆ, ಅಂಥ ಅಧಿಕಾರಿ ವಿರುದ್ಧ ಕ್ರಮ ಜರುಗಿಸಲಾಗುವುದು’ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ–ಐಜಿಪಿ) ಅಲೋಕ್ ಮೋಹನ್ ಅವರು ಪೊಲೀಸರಿಗೆ ಸೂಚನೆ ನೀಡಿದರು.

ನಗರದ ಪೊಲೀಸ್ ಕಮಿಷನರ್ ಕಚೇರಿಗೆ ಗುರುವಾರ ಭೇಟಿ ನೀಡಿದ ಅಲೋಕ್ ಮೋಹನ್, ಅಧಿಕಾರಿಗಳ ಸಭೆ ನಡೆಸಿದರು. ಕಮಿಷನರ್ ಪ್ರತಾಪ್ ರೆಡ್ಡಿ ಹಾಗೂ ವಿಶೇಷ ಕಮಿಷನರ್ (ಸಂಚಾರ) ಎಂ.ಎ. ಸಲೀಂ ಸಮ್ಮುಖದಲ್ಲಿ ಹಲವು ಪ್ರಕರಣಗಳ ಪ್ರಗತಿ ಪರಿಶೀಲಿಸಿದರು.

ಸಭೆ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅಲೋಕ್ ಮೋಹನ್, ‘ಡಿಸಿಪಿ ಅವರು ದಿನಕ್ಕೆ ಒಂದು ಠಾಣೆಗೆ ಭೇಟಿ ನೀಡುವುದು ಕಡ್ಡಾಯ. ಎಸಿಪಿಗಳು ಸಹ ದಿನಕ್ಕೆ ಎರಡು ಠಾಣೆಗೆ ಭೇಟಿ ನೀಡಿ, ಅಲ್ಲಿಯ ಕೆಲಸಗಳ ಪರಿಶೀಲನೆ ನಡೆಸಬೇಕೆಂದು ಸೂಚಿಸಲಾಗಿದೆ’ ಎಂದರು.

‘ಠಾಣೆಯಲ್ಲಿ ದಾಖಲಾಗುವ ಪ್ರಕರಣ ಹಾಗೂ ತನಿಖೆ ಪ್ರಗತಿ ಬಗ್ಗೆ ಪ್ರತಿ ತಿಂಗಳು ವರದಿ ಸಿದ್ಧಪಡಿಸಬೇಕು. ಅದನ್ನು ಕಮಿಷನರ್‌ಗೆ ನೀಡಬೇಕು. ಯಾವುದಾದರೂ ತನಿಖೆ ಬಾಕಿ ಇದ್ದರೆ ಹಾಗೂ ತನಿಖೆಯಲ್ಲಿ ಲೋಪವಾಗಿದ್ದರೆ ಕಮಿಷನರ್ ಅವರು ಸೂಕ್ತ ಕ್ರಮ ಕೈಗೊಳ್ಳಲಿದ್ದಾರೆ’ ಎಂದು ಅವರು ಹೇಳಿದರು.

‘ಸೈಬರ್ ಅಪರಾಧಗಳ ನಿಯಂತ್ರಣಕ್ಕೆ ಹೆಚ್ಚಿನ ಒತ್ತು ನೀಡಬೇಕು. ಮಾದಕ ವಸ್ತು ಸಾಗಣೆ ಹಾಗೂ ಮಾರಾಟ ತಡೆಯಬೇಕೆಂದು ಅಧಿಕಾರಿಗಳಿಗೆ ನಿರ್ದೇಶಿಸಲಾಗಿದೆ’ ಎಂದು ಅಲೋಕ್ ಮೋಹನ್ ತಿಳಿಸಿದರು.

ಹಳೇ ಪ್ರಕರಣಗಳ ಮಾಹಿತಿ: ಬಿಜೆಪಿ ಅಧಿಕಾರ ಅವಧಿಯಲ್ಲಿ ನಗರದಲ್ಲಿ ದಾಖಲಾಗಿದ್ದ ಹಳೇ ಪ್ರಕರಣಗಳ ಬಗ್ಗೆ ಅಲೋಕ್ ಮೋಹನ್ ಮಾಹಿತಿ ಪಡೆದಿದ್ದಾರೆಂದು ಗೊತ್ತಾಗಿದೆ.

‘ಕಾಟನ್‌ಪೇಟೆ ಠಾಣೆಯಲ್ಲಿ ಸ್ಯಾಂಟ್ರೊ ರವಿ ದಾಖಲಿಸಿದ್ದ ಸುಳ್ಳು ಪ್ರಕರಣ, ಬಿಟ್ ಕಾಯಿನ್ ಹಾಗೂ ಇತರೆ ಪ್ರಕರಣಗಳ ಬಗ್ಗೆ ಡಿಜಿ–ಐಜಿಪಿ ಮಾಹಿತಿ ಪಡೆದಿದ್ದಾರೆ’ ಎಂದು ಮೂಲಗಳು ಹೇಳಿವೆ.

ಅಪಘಾತ: ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆಬದಿ ನಿಲ್ಲಿಸಿದ್ದ ಟಿಪ್ಪರ್ ಲಾರಿಗೆ ಟೆಂಪೊ ಟ್ರಾವೆಲರ್ ಡಿಕ್ಕಿ ಹೊಡೆದಿದ್ದು, ಸರೋಜಾ (34) ಎಂಬುವವರು ಮೃತಪಟ್ಟಿದ್ದಾರೆ. 14 ಮಂದಿ ಗಾಯಗೊಂಡಿದ್ದಾರೆ.

‘ಕೊರಟಗೆರೆ ಬಳಿಯ ಉಡಿಗೆರೆ ನಿವಾಸಿ ಸರೋಜಾ, ಗಾರ್ಮೆಂಟ್ಸ್ ಕಾರ್ಖಾನೆ ಉದ್ಯೋಗಿ. ಅವರು ಸಹೋದ್ಯೋಗಿಗಳ ಜೊತೆ ಗುರುವಾರ ಕೆಲಸಕ್ಕೆ ಹೊರಟಿದ್ದ ವೇಳೆ ಈ ಅವಘಡ ಸಂಭವಿಸಿದೆ’ ಎಂದು ಪೀಣ್ಯ ಸಂಚಾರ ಠಾಣೆ ಪೊಲೀಸರು ತಿಳಿಸಿದರು.

ಪಾರ್ಟಿಯಲ್ಲಿ ಗಲಾಟೆ: ಲಗ್ಗೆರೆ ಬಳಿಯ ಚೌಡೇಶ್ವರಿನಗರದಲ್ಲಿ ಕೃತ್ಯ

ಮನೆಯಿಂದ ಕರೆಸಿ ಕೊಲೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿಗಳು

ಬೆಂಗಳೂರು: ನಗರದ ಲಗ್ಗೆರೆ ಬಳಿಯ ಚೌಡೇಶ್ವರಿನಗರದಲ್ಲಿ ರವಿಕುಮಾರ್ ಅಲಿಯಾಸ್ ಮತ್ತಿ ರವಿ (38) ಎಂಬುವವರನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಲಾಗಿದೆ.

‘ಸ್ಥಳೀಯ ನಿವಾಸಿ ರವಿ, ಕಾಂಗ್ರೆಸ್ ಪಕ್ಷದ ಕಾರ್ಯಕರ್ತ. ಬುಧವಾರ ರಾತ್ರಿ ಮಾರಕಾಸ್ತ್ರಗಳಿಂದ ಹೊಡೆದು ರವಿ ಅವರನ್ನು ಕೊಂದು ಆರೋಪಿಗಳು ಪರಾರಿಯಾಗಿದ್ದಾರೆ. ಪತ್ನಿ ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಸ್ನೇಹಿತರೇ ಕೃತ್ಯ ಎಸಗಿರುವ ಅನುಮಾನವಿದೆ’ ಎಂದು ನಂದಿನಿ ಲೇಔಟ್ ಠಾಣೆ ಪೊಲೀಸರು ಹೇಳಿದರು.

‘ಕಾಂಗ್ರೆಸ್ ಪಕ್ಷದ ಮುಖಂಡರೂ ಆಗಿರುವ ಫೈನಾನ್ಶಿಯರ್ ಕೃಷ್ಣಮೂರ್ತಿ ಅವರ ಜನ್ಮದಿನವಿತ್ತು. ಸ್ನೇಹಿತರು ಬುಧವಾರ ರಾತ್ರಿ ಏರ್ಪಡಿಸಿದ್ದ ಪಾರ್ಟಿಯಲ್ಲಿ ರವಿ ಪಾಲ್ಗೊಂಡಿದ್ದರು. ಊಟದ ಸಮಯದಲ್ಲಿ ಎರಡು ಗುಂಪಿನ ನಡುವೆ ಗಲಾಟೆ ಆಗಿತ್ತು. ಪರಸ್ಪರ ವೈಷಮ್ಯ ಬೆಳೆದಿತ್ತು.’

‘ಊಟ ಅರ್ಧಕ್ಕೆ ಬಿಟ್ಟಿದ್ದ ರವಿ, ಮನೆಗೆ ವಾಪಸು ಹೋಗಿದ್ದರು. ಅವರಿಗೆ ಕರೆ ಮಾಡಿದ್ದ ಆರೋಪಿಗಳು, ಪುನಃ ಪಾರ್ಟಿಗೆ ಬರುವಂತೆ ಹೇಳಿದ್ದರು. ಆರೋಪಿಗಳು ಸ್ನೇಹಿತರೇ ಆಗಿದ್ದರಿಂದ ರವಿ ಮನೆಯಿಂದ ಹೊರಟಿದ್ದರು. ಮಾರ್ಗ ಮಧ್ಯೆ ಅವರಿಗೆ ಎದುರಾಗಿದ್ದ ಆರೋಪಿಗಳು, ಪುನಃ ಜಗಳ ತೆಗೆದಿದ್ದರು. ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿ ಪರಾರಿಯಾಗಿದ್ದಾರೆ’ ಎಂದು ಪೊಲೀಸರು ತಿಳಿಸಿದರು.



ರವಿ

‘ಚೌಡೇಶ್ವರಿನಗರದಲ್ಲಿ ರವಿ ಭಾವಚಿತ್ರದ ಫ್ಲೆಕ್ಸ್‌ಗಳಿದ್ದವು. ಕೊಲೆಗೂ ಮುನ್ನ ಫ್ಲೆಕ್ಸ್‌ಗಳನ್ನು ಆರೋಪಿಗಳು ಹರಿದು ಹಾಕಿದ್ದಾರೆ. ಸ್ಥಳೀಯ ನಿವಾಸಿಗಳಾದ ಮಂಜು, ಸ್ಪಾಟ್ ನಾಗ, ಗೋಪಿ, ಕಿರಣ್ ಹಾಗೂ ಮಣಿ ಎಂಬುವವರು ಕೊಲೆ ಎಸಗಿರುವ ಮಾಹಿತಿ ಇದೆ. ಅವರೆಲ್ಲರೂ ತಲೆಮರೆಸಿಕೊಂಡಿದ್ದು, ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ರವಿ, ಕುರಿ ಸಾಗಾಣಿಕೆ ಮಾಡುತ್ತಿದ್ದರು. ಅಪರಾಧ ಪ್ರಕರಣವೊಂದರಲ್ಲಿ ಭಾಗಿಯಾಗಿದ್ದ ಅವರ ವಿರುದ್ಧ ಪಶ್ಚಿಮ ವಿಭಾಗದ ವ್ಯಾಪ್ತಿಯ ಠಾಣೆಯೊಂದರಲ್ಲಿ ಎಫ್‌ಐಆರ್ ದಾಖಲಾಗಿತ್ತು. ಅದರ ಬಗ್ಗೆ ಮಾಹಿತಿ ಪಡೆಯುತ್ತಿದ್ದೇವೆ’ ಎಂದರು.

‘ರ‍್ಯಾಪಿಡೊ’ ಗ್ರಾಹಕನಿಗೆ ಆಟೊ ಗುದ್ದಿಸಿದ ಚಾಲಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರ‍್ಯಾಪಿಡೊ’ ಆ್ಯಪ್ ಮೂಲಕ ಬೈಕ್ ಬುಕ್ಕಿಂಗ್ ಮಾಡುತ್ತಿದ್ದ ಗ್ರಾಹಕರೊಬ್ಬರಿಗೆ ಆಟೊ ಗುದ್ದಿಸಲಾಗಿದ್ದು, ಈ ಸಂಬಂಧ ಮಡಿವಾಳ ಠಾಣೆಯಲ್ಲಿ ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ದಾಖಲಾಗಿದೆ.

‘ಎಚ್‌ಎಸ್‌ಆರ್ ಲೇಔಟ್ ಒಂದನೇ ಹಂತದಲ್ಲಿ ಗುರುವಾರ ಬೆಳಿಗ್ಗೆ ನಡೆದಿರುವ ಘಟನೆ ಸಂಬಂಧ ಸಾಫ್ಟ್‌ವೇರ್ ಎಂಜಿನಿಯರೊಬ್ಬರು ಟ್ವೀಟ್ ಮಾಡಿದ್ದರು. ಅವರನ್ನು ಪತ್ತೆ ಮಾಡಿ ದೂರು ಪಡೆಯಲಾಗಿದೆ. ಆಟೊ ಚಾಲಕನ ವಿರುದ್ಧ ಎನ್‌ಸಿಆರ್ ದಾಖಲಿಸಲಾಗಿದೆ. ನ್ಯಾಯಾಲಯದ ನಿರ್ದೇಶನದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕೆಲಸ ನಿಮಿತ್ತ ಎಚ್‌ಎಸ್‌ಆರ್ ಲೇಔಟ್‌ಗೆ ಬಂದಿದ್ದ ಸಾಫ್ಟ್‌ವೇರ್ ಎಂಜಿನಿಯರ್, ಕಚೇರಿಯೊಂದಕ್ಕೆ ಹೋಗಲು ಆಟೊ ಬಾಡಿಗೆ ಪಡೆಯಲು ಚಾಲಕನನ್ನು ವಿಚಾರಿಸಿದ್ದರು. ಆದರೆ, ಚಾಲಕ ದುಬಾರಿ ಪ್ರಯಾಣದ ದರ ಕೇಳಿದ್ದ. ಅದಕ್ಕೆ ಒಪ್ಪದ ಎಂಜಿನಿಯರ್, ತಮ್ಮ ಮೊಬೈಲ್‌ನಲ್ಲಿ ರ‍್ಯಾಪಿಡೊ ಆ್ಯಪ್ ಮೂಲಕ ಬೈಕ್ ಕಾಯ್ದಿರಿಸಲು ಮುಂದಾಗಿದ್ದರು. ಅದನ್ನು ನೋಡಿದ್ದ ಚಾಲಕ, ಎಂಜಿನಿಯರ್ ಅವರಿಗೆ ಆಟೊ ಗುದ್ದಿಸಿದ್ದ.’

‘ಚಾಲಕನ ಕೃತ್ಯದಿಂದ ಎಂಜಿನಿಯರ್ ರಸ್ತೆಯಲ್ಲಿ ಹಾರಿಬಿದ್ದು, ಗಾಯಗೊಂಡಿದ್ದಾರೆ. ಘಟನೆಯ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ’ ಎಂದು ಮೂಲಗಳು ತಿಳಿಸಿವೆ.

ಗೋಮಾಂಸ ಮಾರಾಟ: ಆರೋಪಿಗೆ ನಿರೀಕ್ಷಣಾ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುರಿ ಮಾಂಸದ ಅಂಗಡಿಯಲ್ಲಿ ದನದ ಮಾಂಸ ಮಾರಾಟ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಬಂಧನದ ಭೀತಿ ಎದುರಿಸುತ್ತಿದ್ದ ಅಂಗವಿಕಲ ವ್ಯಕ್ತಿಯೊಬ್ಬರಿಗೆ ಹೈಕೋರ್ಟ್ ಷರತ್ತುಬದ್ಧ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ತಾಲ್ಲೂಕಿನ ವರದಾಪುರದ ಹೈದರ್ ಅಲಿ ಅಲಿಯಾಸ್ ತಾಜು (30) ಎಂಬುವವರು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಟಿ.ಜಿ.ಶಿವಶಂಕರೇಗೌಡ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

‘ಅರ್ಜಿದಾರರು ₹ 1 ಲಕ್ಷ ಮೊತ್ತದ ವೈಯಕ್ತಿಕ ಬಾಂಡ್ ಮತ್ತು ಅಷ್ಟೇ ಮೊತ್ತಕ್ಕೆ ಒಬ್ಬರ ಭದ್ರತೆ ನೀಡಬೇಕು. ಸಾಕ್ಷಿಗಳಿಗೆ ಬೆದರಿಕೆ ಹಾಕಬಾರದು. ಸಾಕ್ಷ್ಯಗಳನ್ನು ತಿರುಚಲು ಯತ್ನಿಸಬಾರದು. ಇದೇ ಮಾದರಿಯ ಅಪರಾಧ ಕೃತ್ಯದಲ್ಲಿ ಭಾಗಿಯಾಗಬಾರದು’ ಎಂಬ ಷರತ್ತು ವಿಧಿಸಿದೆ.



‘ಬ್ಯಾಂಕ್ ಉದ್ಯೋಗಿಗಳ ಪಿಂಚಣಿ ನಿಯಮಗಳು 1995ರ ನಿಯಮ 35ರಲ್ಲಿ ಉಲ್ಲೇಖಿಸಿದಂತೆ ಪಿಂಚಣಿ ನವೀಕರಣ ಜಾರಿಗೆ ತರಬೇಕು’ ಎಂದು ಒತ್ತಾಯಿಸಿ ಅಖಿಲ ಭಾರತ ಬ್ಯಾಂಕ್ ಪಿಂಚಣಿದಾರರು ಮತ್ತು ನಿವೃತ್ತರ ಒಕ್ಕೂಟದ ಪದಾಧಿಕಾರಿಗಳು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು

ಸುದ್ದಿ 2 ನಿಮಿಷ

ಸುಳ್ಳು ಪ್ರಕರಣ ಆರೋಪ: ದಯಾಮರಣ ಕೋರಿದ ಚಾಲಕ

ಬೆಂಗಳೂರು: ‘ನನ್ನ ವಿರುದ್ಧ ಪೊಲೀಸರು ಸುಳ್ಳು ಪ್ರಕರಣ ದಾಖಲಿಸಿ, ಕಿರುಕುಳ ನೀಡಿದ್ದಾರೆ. ಇದರಿಂದ ಜೀವನದಲ್ಲಿ ಜಿಗುಪ್ಸೆಯಾಗಿದ್ದು, ದಯಾಮರಣಕ್ಕಾಗಿ ರಾಷ್ಟ್ರಪತಿಗೆ ಪತ್ರ ಬರೆಯುತ್ತೇನೆ’ ಎಂದು ನಗರದ ಆಟೊ ಚಾಲಕರೊಬ್ಬರು ಪೊಲೀಸ್ ಕಮಿಷನರ್ ಅವರಿಗೆ ಟ್ವೀಟ್ ಮಾಡಿದ್ದಾರೆ.

‘ಪತ್ನಿಗೆ ವರದಕ್ಷಿಣೆ ಕಿರುಕುಳ ನೀಡಿದ್ದ ಆರೋಪದಡಿ ನನ್ನ ಹಾಗೂ ತಾಯಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಸುಳ್ಳು ಪ್ರಕರಣವೆಂಬುದಕ್ಕೆ ಪುರಾವೆ ನೀಡಿದರೂ ಪೊಲೀಸರು ಸ್ಪಂದಿಸಿಲ್ಲ. ನಮ್ಮನ್ನು ಬಂಧಿಸಿದ್ದರು. ಬಡ್ಡಿಗೆ ಹಣ ತಂದು ಜಾಮೀನು ಪಡೆದುಕೊಂಡಿದ್ದೇವೆ’ ಎಂದೂ ಚಾಲಕ ಹೇಳಿದ್ದಾರೆ.

‘ಸುಳ್ಳು ಪ್ರಕರಣ ದಾಖಲಿಸಿ ನಮಗೆ ತೊಂದರೆ ನೀಡಿರುವ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ, ನನಗೆ ದಯಾಮರಣ ಕೊಡಿಸಬೇಕು’ ಎಂದೂ ಅವರು ಆಗ್ರಹಿಸಿದ್ದಾರೆ.



ಟ್ವೀಟ್‌ಗೆ ಪ್ರತಿಕ್ರಿಯಿಸಿರುವ ಕಮಿಷನರ್ ಕಚೇರಿ ಸಿಬ್ಬಂದಿ, ‘ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ವರ್ಗಾಯಿಸಲಾಗಿದೆ’ ಎಂದಿದ್ದಾರೆ.

ಪೊಲೀಸರ ಬೆದರಿಕೆಯಿಂದ ಸಾವು ಆರೋಪ: ಸಿಐಡಿ ತನಿಖೆ

ಬೆಂಗಳೂರು: ಬೊಮ್ಮನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಹುಸೇನ್ (31) ಎಂಬುವವರು ಮೃತಪಟ್ಟ ಪ್ರಕರಣದ ತನಿಖೆಯನ್ನು ಸಿಐಡಿ ಆರಂಭಿಸಿದೆ.

‘ಅಪರಾಧ ಪ್ರಕರಣವೊಂದರಲ್ಲಿ ಭಾಗಿಯಾದ ಆರೋಪದಡಿ ವಿಚಾರಣೆ ನಡೆಸಲೆಂದು ಪೊಲೀಸರ ತಂಡ ಬುಧವಾರ ರಾತ್ರಿ ಹುಸೇನ್ ಬಳಿ ಹೋಗಿತ್ತು. ಇದೇ ಸಂದರ್ಭದಲ್ಲಿ ತಪ್ಪಿಸಿಕೊಳ್ಳಲು ಯತ್ನಿಸಿದ್ದ ಹುಸೇನ್, ಮಹಡಿಯಿಂದ ಜಿಗಿಯುವ ವೇಳೆ ಆಯತಪ್ಪಿ ಬಿದ್ದು ಮೃತಪಟ್ಟಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಪೊಲೀಸರ ಹಲ್ಲೆ ಹಾಗೂ ಬೆದರಿಕೆಯಿಂದ ಹುಸೇನ್ ಮೃತಪಟ್ಟಿದ್ದಾರೆಂದು ಆರೋಪಿಸಿ ಸಂಬಂಧಿಕರು ಠಾಣೆ ಎದುರು ಪ್ರತಿಭಟನೆ ನಡೆಸಿದ್ದರು. ಈ ಪ್ರಕರಣದ ತನಿಖೆ ಸಿಐಡಿಗೆ ವರ್ಗಾವಣೆ ಆಗಿದೆ. ಅದಕ್ಕೆ ಬೇಕಾದ ದಾಖಲೆಗಳನ್ನು ಹಸ್ತಾಂತರಿಸಲಾಗಿದೆ’ ಎಂದು ತಿಳಿಸಿವೆ.

ಸಿಐಡಿ ಅಧಿಕಾರಿಗಳ ತಂಡ ಠಾಣೆಗೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡಿದೆ. ಘಟನಾ ಸ್ಥಳಕ್ಕೂ ಹೋಗಿ ಪರಿಶೀಲನೆ ನಡೆಸಿದೆ.

ಗುತ್ತಿಗೆದಾರನಿಗೆ ಚಾಕು ಇರಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾಲಕ್ಷ್ಮಿ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ರಾಮಚಂದ್ರ (27) ಎಂಬುವರಿಗೆ ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಿದ ಆರೋಪದಡಿ ಇಬ್ಬರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಸರಸ್ವತಿಪುರ ನಿವಾಸಿ ರಾಮಚಂದ್ರ, ತಂತಿ ಬಲೆ ಅಳವಡಿಸುವ ಕೆಲಸದ ಗುತ್ತಿಗೆದಾರ. ಇವರ ಕೊಲೆಗೆ ಯತ್ನಿಸಿದ್ದ ಸ್ನೇಹಿತರಾದ ಮಹಾಂತೇಶ್, ಹರೀಶ್ ಹಾಗೂ ಅಮ್ಜದ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಮಹಾಂತೇಶ್ ಹಾಗೂ ಹರೀಶ್‌ನನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಪೊಲೀಸರು ಹೇಳಿದರು.

ಅತ್ಯಾಚಾರವೆಸಗಿ ಬಾಲಕಿ ಹತ್ಯೆ: ಡೆಲಿವರಿ ಬಾಯ್‌ಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ



ರಾಜು

ಬೆಂಗಳೂರು: ಪ್ರೀತಿಸಿ ಮದುವೆಯಾಗುವುದಾಗಿ ಹೇಳಿ ಬಾಲಕಿ ಮೇಲೆ ಅತ್ಯಾಚಾರವೆಸಗಿ ಕೊಲೆ ಮಾಡಿದ್ದ ಅಪರಾಧಿ ಸಿ. ರಾಜು (25) ಎಂಬಾತನಿಗೆ ಜೀವಾವಧಿ ಶಿಕ್ಷೆ ವಿಧಿಸಿ ನಗರದ 1ನೇ ತ್ವರಿತ ವಿಶೇಷ ನ್ಯಾಯಾಲಯ (ಎಫ್‌ಟಿಎಸ್‌ಸಿ) ಆದೇಶ ಹೊರಡಿಸಿದೆ.

ಬಂಡೇಪಾಳ್ಯ ಠಾಣೆಯಲ್ಲಿ 2021ರಲ್ಲಿ ದಾಖಲಾಗಿದ್ದ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶರಾದ ಕೆ.ಎನ್. ರೂಪಾ ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಪಿ. ಕೃಷ್ಣವೇಣಿ ವಾದಿಸಿದ್ದರು.

ಪ್ರಕರಣದ ವಿವರ: ‘ಸೋಮಸುಂದರಪಾಳ್ಯದ ನಿವಾಸಿಯಾದ ಆರೋಪಿ ರಾಜು, ಡೆಲಿವರಿ ಬಾಯ್ ಕೆಲಸ ಮಾಡುತ್ತಿದ್ದ. 16 ವರ್ಷದ ಬಾಲಕಿಯನ್ನು ಪರಿಚಯ ಮಾಡಿಕೊಂಡು ಸ್ನೇಹ ಬೆಳೆಸಿದ್ದ. ನಂತರ, ಪ್ರೀತಿಸಿ ಮದುವೆಯಾಗುವುದಾಗಿ ಹೇಳಿ ಬಾಲಕಿ ಜೊತೆ ಸುತ್ತಾಡುತ್ತಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಯಾರೂ ಇಲ್ಲದ ವೇಳೆಯಲ್ಲಿ ಬಾಲಕಿಯ ಮನೆಗೆ ಹೋಗುತ್ತಿದ್ದ ಆರೋಪಿ, ಲೈಂಗಿಕ ದೌರ್ಜನ್ಯ ಎಸಗುತ್ತಿದ್ದ. ತನ್ನ ಬಾಡಿಗೆ ಮನೆಗೂ ಬಾಲಕಿಯನ್ನು ಕರೆಸಿಕೊಂಡು ಅತ್ಯಾಚಾರ ಎಸಗಿದ್ದ. ಈ ವಿಷಯ ಗೊತ್ತಾಗುತ್ತಿದ್ದಂತೆ ಬಾಲಕಿಯ ಪೋಷಕರು ಆರೋಪಿಗೆ ಎಚ್ಚರಿಕೆ ನೀಡಿದ್ದರು. ಮಗಳ ಭವಿಷ್ಯ ಹಾಳು ಮಾಡಬೇಡವೆಂದು ಕೋರಿದ್ದರು. ಇದಾದ ನಂತರವೂ ಆರೋಪಿ ಬಾಲಕಿಯ ಹಿಂದೆ ಬಿದ್ದಿದ್ದ’ ಎಂದು ಮೂಲಗಳು ತಿಳಿಸಿವೆ.

‘ಪೋಷಕರು ಎಚ್ಚರಿಕೆ ನೀಡಿದ್ದರಿಂದ ಬಾಲಕಿ ಆರೋಪಿಯನ್ನು ಮಾತನಾಡಿಸುವುದನ್ನು ಬಿಟ್ಟಿದ್ದರು. ಇದರಿಂದ ಸಿಟ್ಟಾಗಿದ್ದ ಆರೋಪಿ, ‘ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ’ ಎಂದು ಬೆದರಿಸಿ 2021ರ ಏಪ್ರಿಲ್ 3ರಂದು ಬಾಲಕಿಯನ್ನು ತನ್ನ ಮನೆಗೆ ಕರೆಸಿಕೊಂಡಿದ್ದ. ಅದೇ ಸಂದರ್ಭದಲ್ಲಿ ಬಾಲಕಿಯ ಕುತ್ತಿಗೆಗೆ ತಂತಿ ಬಿಗಿದು ಕೊಲೆ ಮಾಡಿದ್ದ.’

‘ಮೃತದೇಹ ಬಳಿ ಕುಳಿತು ಸ್ನೇಹಿತರಿಗೆ ಕರೆ ಮಾಡಿದ್ದ ರಾಜು, ತಾನೂ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೇಳಿದ್ದ. ಯಶವಂತಪುರ ರೈಲು ನಿಲ್ದಾಣ ಸಮೀಪದಲ್ಲಿ ಹಳಿ ಮೇಲೆ ಹೋಗಿ ಕುಳಿತಿದ್ದ. ರೈಲು ಹರಿದು ಗಾಯಗೊಂಡಿದ್ದ’ ಎಂದು ಹೇಳಿವೆ.

‘ಬಾಲಕಿ ಕೊಲೆ ಬಗ್ಗೆ ಪೋಷಕರು ದೂರು ನೀಡಿದ್ದಾರೆ. ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದ ಇನ್‌ಸ್ಪೆಕ್ಟರ್ ಎಸ್.ಟಿ. ಯೋಗೇಶ್, ರಾಜುನನ್ನು ಬಂಧಿಸಿ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಿ.ಸಿ.ಟಿ.ವಿ ಕ್ಯಾಮೆರಾ ತಪ್ಪಿಸುತ್ತಿದ್ದ: ‘ಬಾಲಕಿ ಮನೆ ಹಾಗೂ ತನ್ನ ಬಾಡಿಗೆ ಮನೆಯ ಮುಖ್ಯ ದ್ವಾರದಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಲಾಗಿತ್ತು. ಬಾಲಕಿ ಜೊತೆ ಹೋಗುವಾಗ ಆರೋಪಿ, ಕ್ಯಾಮೆರಾ ತಪ್ಪಿಸುತ್ತಿದ್ದ. ಹಿಂದಿನ ಬಾಗಿಲಿನಿಂದ ಮನೆಯೊಳಗೆ ಕರೆದೊಯ್ಯುತ್ತಿದ್ದ’ ಎಂದು ಮೂಲಗಳು ಹೇಳಿವೆ.

ಹೈಕೋರ್ಟ್ ತೀರ್ಪು: ಪರಪುರುಷನ ತೆಕ್ಕೆಯಲ್ಲಿದ್ದ ಪತ್ನಿ; ಕುಪಿತ ಪತಿಯಿಂದ ಹತ್ಯೆ

ಜೀವಾವಧಿ; 7 ವರ್ಷಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಐದು ವರ್ಷದ ಹಿಂದೆ ನಡೆದಿದ್ದ ಕೊಲೆ ಪ್ರಕರಣ
- ದೊಡ್ಡಬೆಳವೆಂಗಲ ಹೋಬಳಿಯ ಬೊಮ್ಮನಹಳ್ಳಿಯಲ್ಲಿ ನಡೆದಿದ್ದ ಪ್ರಕರಣ
- ಮಾನಸಿಕ ಸಮತೋಲನ ಕಳೆದುಕೊಂಡು ಹತ್ಯೆ ಎಂಬ ವಾದಕ್ಕೆ ಪುರಸ್ಕಾರ

ಬೆಂಗಳೂರು: ಪತ್ನಿಯನ್ನು ಕೊಲೆ ಮಾಡಿದ್ದ ಅಪರಾಧಿಯೊಬ್ಬರ ಜೀವಾವಧಿ ಶಿಕ್ಷೆಯನ್ನು ಹೈಕೋರ್ಟ್, ಏಳು ವರ್ಷಗಳ ಕಠಿಣ ಶಿಕ್ಷೆಗೆ ಮಾರ್ಪಾಡು ಮಾಡಿ ಆದೇಶಿಸಿದೆ.

ಈ ಸಂಬಂಧ ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡಬೆಳವೆಂಗಲ ಹೋಬಳಿಯ ಬೊಮ್ಮನಹಳ್ಳಿಯ ರಾಜೇಶ್ ಬಿನ್ ವೆಂಕಟರಮಣಪ್ಪ (39) ಎಂಬುವರು ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ವೀರಪ್ಪ ಹಾಗೂ ಕೆ.ಎಸ್. ಹೇಮಲೇಖಾ ಅವರಿದ್ದ ವಿಭಾಗೀಯ ನ್ಯಾಯಪೀಠ, ಆರೋಪಿಗೆ ವಿಧಿಸಲಾಗಿದ್ದ ಜೀವಾವಧಿ ಶಿಕ್ಷೆಯನ್ನು ಏಳು ವರ್ಷಗಳ ಕಠಿಣ ಶಿಕ್ಷೆಗೆ ಮಾರ್ಪಡಿಸಿದ್ದು, ‘ಆರೋಪಿಯು ತನ್ನ ಇಬ್ಬರು ಹೆಣ್ಣು ಮಕ್ಕಳ (ಇಬ್ಬರೂ ಪತ್ನಿಯರ ಒಬ್ಬೊಬ್ಬ ಮಗಳು) ಹೆಸರಿಗೆ ಒಟ್ಟು ₹ 3 ಲಕ್ಷ ಮೊತ್ತವನ್ನು ಠೇವಣಿಯಾಗಿ ಇರಿಸಬೇಕು’ ಎಂದು ನಿರ್ದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಾದ ಮಂಡಿಸಿದ್ದ ವಕೀಲ ಸಿ.ಎಚ್. ಹನುಮಂತರಾಯ, ‘ಆರೋಪಿಯು ತನ್ನ ಹೆಂಡತಿಯನ್ನು ಬೆಳಗಿನ ಜಾವದ 4 ಗಂಟೆಯಲ್ಲಿ, ಗ್ರಾಮದ ಹೊರವಲಯದ ಹೊಲದಲ್ಲಿ ಪರಪುರುಷನ ಜೊತೆ ಇದ್ದುದ್ದನ್ನು ನೋಡಿದ್ದ. ಈ ವೇಳೆ ಉಂಟಾದ ಗಂಭೀರ ಮತ್ತು ಹಠಾತ್ ಪ್ರಚೋದನೆಯಿಂದ ಸ್ವಯಂ ನಿಯಂತ್ರಣ ಹಾಗೂ ಮಾನಸಿಕ ಸಮತೋಲನ ಕಳೆದುಕೊಂಡು ಈ ಹತ್ಯೆ ನಡೆಸಿದ್ದಾನೆ. ಅಂತೆಯೇ, ಆತ ಘಟನಾ ಸ್ಥಳಕ್ಕೆ ನಿರಾಯುಧನಾಗಿ ಹೋಗಿದ್ದ. ಹೆಂಡತಿಯನ್ನು ಕೊಲೆ ಮಾಡುವ ಯಾವುದೇ ಉದ್ದೇಶ ಹೊಂದಿರಲಿಲ್ಲ. ಹೀಗಾಗಿ, ಇದನ್ನು ಕೊಲೆಯೆಂದು ಪರಿಗಣಿಸಲು ಸಾಧ್ಯವಿಲ್ಲ’ ಎಂದು ಪ್ರತಿಪಾದಿಸಿದ್ದರು. ಈ ವಾದಾಂಶವನ್ನು ಮಾನ್ಯ ಮಾಡಿರುವ ನ್ಯಾಯಪೀಠ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿದೆ.



ಪ್ರಕರಣವೇನು?: ದೊಡ್ಡಬೆಳವೆಂಗಲ ಹೋಬಳಿಯ ಬೊಮ್ಮನಹಳ್ಳಿ ನಿವಾಸಿ ರಾಜೇಶ್ ವಿವಾಹ ತಪಸೀಹಳ್ಳಿಯ ಲಕ್ಷ್ಮಿ ಎನ್ನುವವರ ಜೊತೆ 2010ರ ಫೆಬ್ರುವರಿಯಲ್ಲಿ ನೆರವೇರಿತ್ತು. ‘ತನಗೆ ಈ ವಿವಾಹ ಇಷ್ಟವಿಲ್ಲವೆಂದು, ತಾನು ರಾಜೇಶನ ಜೊತೆ ಬಾಳ್ವೆ ಮಾಡುವುದಿಲ್ಲ’ ಎಂದು ಲಕ್ಷ್ಮಿ 2010ರ ಸೆಪ್ಟೆಂಬರ್‌ನಲ್ಲಿ ಹಿರಿಯರ ಸಮ್ಮುಖದಲ್ಲಿ ನಡೆದಿದ್ದ ಪಂಚಾಯಿತಿಯಲ್ಲಿ ತಿಳಿಸಿದ್ದರು.

ಈ ಸಮಯದಲ್ಲಿ ಆಕೆ, ’ರಾಜೇಶ್ ಎರಡನೆ ಮದುವೆಯಾಗಲು ನನಗೆ ಯಾವುದೇ ಅಭ್ಯಂತರವಿಲ್ಲ’ ಎಂದು ಒಪ್ಪಿಗೆ ಪತ್ರ ಬರೆದುಕೊಟ್ಟಿದ್ದರು. ಅದರಂತೆ ರಾಜೇಶ್ ಎರಡನೆ ಮದುವೆಯಾಗಿದ್ದರು. ಲಕ್ಷ್ಮಿಗೆ ಒಂದು ಹೆಣ್ಣು ಮಗು ಜನಿಸಿತ್ತು. ನಂತರ ಉಂಟಾದ ಕೌಟುಂಬಿಕ ವ್ಯಾಜ್ಯದಲ್ಲಿ ರಾಜೇಶ್ ಹಾಗೂ ಅವರ ಕುಟುಂಬದ ಸದಸ್ಯರ ವಿರುದ್ಧ ಭಾರತೀಯ ದಂಡ ಸಂಹಿತೆ-1860ರ (ಐಪಿಸಿ) ಕಲಂ 498ಎ ಅನುಸಾರ 2015ರಲ್ಲಿ ಲಕ್ಷ್ಮಿ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರು. ಜೀವನ ನಿರ್ವಹಣೆಗಾಗಿ ಲಕ್ಷ್ಮಿ ಸಲ್ಲಿಸಿದ್ದ ಅರ್ಜಿಗೆ ಅನುಗುಣವಾಗಿ ನ್ಯಾಯಾಲಯ ಪ್ರತಿ ತಿಂಗಳೂ ₹ 2 ಸಾವಿರ ನೀಡುವಂತೆ ಆದೇಶಿಸಿತ್ತು.

ಏತನ್ಮಧ್ಯೆ ಗ್ರಾಮದ ಹಿರಿಯರು ಹಾಗೂ ಲಕ್ಷ್ಮಿ ಮನೆಯವರು ನಡೆಸಿದ್ದ ರಾಜಿ ಪಂಚಾಯಿತಿಯಲ್ಲಿ ಲಕ್ಷ್ಮಿಗೆ ಬೇರೆ ಮನೆ ಕಟ್ಟಿಸಿಕೊಡುವಂತೆ ಹೇಳಿದ್ದನ್ನು ರಾಜೇಶ ಒಪ್ಪಿದ್ದರು. ಇದಕ್ಕನುಗುಣವಾಗಿ ಲಕ್ಷ್ಮಿಗೆ ಹೊಸ ಮನೆ ಕಟ್ಟಿಸಿಕೊಟ್ಟಿದ್ದಲ್ಲದೆ, ಇಬ್ಬರ ಜೊತೆಗೂ ಸಂಸಾರ ನಡೆಸುತ್ತಿದ್ದರು. ಲಕ್ಷ್ಮಿ 2018ರ ಫೆಬ್ರುವರಿ 8ರಂದು ತವರು ಮನೆಯಿಂದ ರಾಜೇಶ್ ಮನೆಗೆ ಬಂದಿದ್ದರು. ಅಂದು ಬೆಳಗಿನ ಜಾವ 4 ಗಂಟೆಯಲ್ಲಿ ಲಕ್ಷ್ಮಿ ತನ್ನ ಪಕ್ಕದಲ್ಲಿ ಇಲ್ಲದೇ ಇದ್ದುದನ್ನು ಗಮನಿಸಿದ್ದ ರಾಜೇಶ್ ಹೆಂಡತಿಯನ್ನು ಹುಡುಕಿಕೊಂಡು ಹೋಗಿದ್ದರು. ಈ ವೇಳೆ ವಾಣಿಗರಹಳ್ಳಿ ಬಳಿ ಹೊಲದಲ್ಲಿ ಯಾರೋ ಮಾತನಾಡುವುದು ಕೇಳಿಸಿ, ಒಳ ಹೋಗಿ ನೋಡಿದಾಗ, ಲಕ್ಷ್ಮಿ ಪರಪುರುಷನ ಜೊತೆಯಲ್ಲಿ ಇರುವುದನ್ನು ಕಂಡು ಕುಪಿತರಾಗಿದ್ದರು. ಅವಳು ತೊಟ್ಟಿದ್ದ ವೇಲ್‌ನಿಂದಲೇ ಅವಳ ಕುತ್ತಿಗೆಯನ್ನು ಬಿಗಿದು ಅವಳನ್ನು ಸಾಯಿಸಿದ್ದರು. ಈ ವೇಳೆ ಆಕೆಯ ಜೊತೆಗಿದ್ದ ಪರಪುರುಷ ಸ್ಥಳದಿಂದ ಓಡಿ ಹೋಗಿದ್ದ.

ಮೃತ ಲಕ್ಷ್ಮಿಯ ದೇಹವನ್ನು ರಾಜೇಶ್ ಅಲ್ಲೇ ಮರದ ಬುಡದಲ್ಲಿ ಎಲೆಗಳನ್ನು ಮುಚ್ಚಿ ಮನೆಗೆ ಬಂದಿದ್ದರು. ಮರುದಿನ ಬೆಳಿಗ್ಗೆ ತನ್ನ ಬಾಲ್ಯದ ಗೆಳೆಯನ ಬಳಿ ಹೋಗಿ, ’ನನ್ನ ಹೆಂಡತಿ ಕಾಣಿಸುತ್ತಿಲ್ಲ‘ ಎಂದು ಹೇಳಿ, ಹೆಂಡತಿ ಕಾಣೆಯಾಗಿರುವ ಬಗ್ಗೆ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದರು. ವಿಷಯ ತಿಳಿದ ಲಕ್ಷ್ಮಿಯ ಮನೆಯವರು ಆಕೆಗಾಗಿ ಹುಡುಕಾಡುತ್ತಾ, ’ಅವಳಿಗೇನಾದರೂ ಆಗಿದ್ದರೆ ನಿನ್ನನ್ನು ಕತ್ತರಿಸಿಬಿಡುತ್ತೇವೆ’ ಎಂದು ಆರೋಪಿ ರಾಜೇಶ್‌ನನ್ನು ಎಚ್ಚರಿಸಿದ್ದರು.

ಇದರಿಂದ ಭಯಗೊಂಡ ರಾಜೇಶ್, ’ಹೆಣ ಏನಾದರೂ ಇವರಿಗೆ ದೊರೆತರೆ, ನನ್ನನ್ನು ಸುಮ್ಮನೆ ಬಿಡುವುದಿಲ್ಲ‘ ಎಂದು ಹೆಣವನ್ನು ಬಚ್ಚಿಟ್ಟಿದ್ದ ಸ್ಥಳಕ್ಕೆ ಹೋಗಿ, ಅಡಿಕೆ ಸುಲಿಯುವ ಕತ್ತಿಯಿಂದ ಹೆಣವನ್ನು ನಾಲ್ಕು ಭಾಗಗಳಾಗಿ ತುಂಡರಿಸಿದ್ದರು. ನಂತರ ಅಲ್ಲೇ ಇದ್ದ ಗುಂಡಸಂದ್ರ ಕೆರೆ ಪೈಪ್‌ಲೈನ್ ಜಾಗದಲ್ಲಿ ನೆಲ ಅಗೆದು ಮಣ್ಣಿನಲ್ಲಿ ಆ ತುಂಡುಗಳನ್ನು ನಾಲ್ಕು ಜಾಗಗಳಲ್ಲಿ ಹೂತು ಹಾಕಿದ್ದರು.

ಆದರೆ, ತಾನು ಮಾಡಿದ ಅಪರಾಧವನ್ನು ಮುಚ್ಚಿಡಲು ಮನಸಿಲ್ಲದೆ, ತನ್ನ ಗೆಳೆಯ ರಾಜಣ್ಣನ ಬಳಿ ಹೋಗಿ ನಡೆದ ಸಂಗತಿಯನ್ನೆಲ್ಲ ವಿವರಿಸಿ, ಇದನ್ನು ಪೊಲೀಸರಿಗೆ ತಿಳಿಸುವಂತೆ ಹೇಳಿದ್ದರು. ರಾಜಣ್ಣ ದಾಖಲಿಸಿದ ದೂರಿನ ಮೇರೆಗೆ ದೊಡ್ಡಬೆಳವೆಂಗಲ ಪೊಲೀಸರು ಕೊಲೆ ಪ್ರಕರಣವನ್ನು ದಾಖಲಿಸಿ, ಆರೋಪಿ ರಾಜೇಶನನ್ನು ದಸ್ತಗಿರಿ ಮಾಡಿದ್ದರು.

ನಂತರ ಮ್ಯಾಜಿಸ್ಟ್ರೇಟ್ ಸಮಕ್ಷಮದಲ್ಲಿ ಆರೋಪಿ ತುಂಡರಿಸಿ ಹೂತು ಹಾಕಿದ್ದ ದೇಹದ ಭಾಗಗಳನ್ನು ಹೊರ ತೆಗೆದು ತನಿಖೆ ಕೈಗೊಳ್ಳಲಾಗಿತ್ತು. ತನಿಖೆ ಪೂರ್ಣಗೊಂಡ ನಂತರ ಆರೋಪಿಯ ವಿರುದ್ಧ ಐಪಿಸಿ ಕಲಂ 302, 201 ಮತ್ತು 203ರ ಅಡಿಯಲ್ಲಿ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಲಾಗಿತ್ತು.

ವಿಚಾರಣೆ ನಡೆಸಿದ್ದ ದೊಡ್ಡಬಳ್ಳಾಪುರ 4ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ರಮೇಶ ದುರುಗಪ್ಪ ಏಕಬೋಟೆ, ಆರೋಪಿಯ ಕೃತ್ಯವನ್ನು ಪರಿಗಣಿಸಿ ಐಪಿಸಿ ಕಲಂ 302, 201 ಹಾಗೂ 203 ಅಡಿಯಲ್ಲಿ ಜೀವಾವಧಿ ಶಿಕ್ಷೆ ಹಾಗೂ ₹ 45 ಸಾವಿರ ದಂಡ ವಿಧಿಸಿ ಆದೇಶಿಸಿದ್ದರು. ಈ ಆದೇಶ ಪ್ರಶ್ನಿಸಿ ರಾಜೇಶ್ ಮೇಲ್ಮನವಿ ಸಲ್ಲಿಸಿದ್ದರು.

ಶುಶ್ರೂಷಕರಿಂದಲೇ ರೋಗಿಗಳಿಗೆ ವಿವಿಧ ಚಿಕಿತ್ಸೆ • ಪ್ರಾರಂಭವಾಗದ ಯೋಗಾಭ್ಯಾಸ

ವೈದ್ಯರೂ ಇಲ್ಲ, ರೋಗಿಗಳೂ ಇಲ್ಲ!

ಸಾಕ್ಷಾತ್ ನೋಟ



ಬನಶಂಕರಿಯ ಕಾಮಾಕ್ಯದಲ್ಲಿರುವ ನಮ್ಮ ಕ್ಲಿನಿಕ್‌ನಲ್ಲಿ ವೈದ್ಯಾಧಿಕಾರಿ ರಜೆಯ ಮೇಲೆ ತೆರಳಿರುವುದು

• ವರುಣ ಹೆಗಡೆ

ಬೆಂಗಳೂರು: ಜನರ ಸಮಗ್ರ ಆರೋಗ್ಯ ವೃದ್ಧಿಗೆ ವಾರ್ಡ್ ಮಟ್ಟದಲ್ಲಿ ಪ್ರಾರಂಭಿಸಲಾದ ನಮ್ಮ ಕ್ಲಿನಿಕ್‌ಗಳಲ್ಲಿ ವೈದ್ಯರ ಅನುಪಸ್ಥಿತಿ ಕಾಡುತ್ತಿದ್ದು, ಶುಶ್ರೂಷಕರೇ ಚಿಕಿತ್ಸೆ ನೀಡುತ್ತಿದ್ದಾರೆ. ಇದು ಗುಣಮಟ್ಟದ ವೈದ್ಯಕೀಯ ಸೇವೆಗೆ ತೊಡಕಾಗಿದೆ.

ನಗರದಲ್ಲಿ ಸದ್ಯ 224 ನಮ್ಮ ಕ್ಲಿನಿಕ್‌ಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ 108 ಕ್ಲಿನಿಕ್‌ಗಳಿಗೆ ಮೊದಲ ಹಂತದಲ್ಲಿ ಕಳೆದ ಫೆಬ್ರವರಿ ತಿಂಗಳಲ್ಲಿ ಚಾಲನೆ ನೀಡಲಾಗಿತ್ತು. ಇನ್ನುಳಿದ ಕ್ಲಿನಿಕ್‌ಗಳು ತದನಂತರ ಕಾರ್ಯಾರಂಭಿಸಿದ್ದವು. 'ಚುನಾವಣೆ ಕಾರಣ ಆತುರದಲ್ಲಿ ಈ ಕ್ಲಿನಿಕ್‌ಗಳಿಗೆ ಸರ್ಕಾರ ಚಾಲನೆ ನೀಡಿದೆ' ಎಂದು ಪ್ರತಿಪಕ್ಷಗಳು ಆ ವೇಳೆ ಆರೋಪಿಸಿದ್ದವು. ಈ ಕ್ಲಿನಿಕ್‌ಗಳು ಬೆಳಿಗ್ಗೆ 9.30ರಿಂದ ಸಂಜೆ 4.30ರವರೆಗೆ ಕಾರ್ಯನಿರ್ವಹಿಸುತ್ತಿವೆ. ಜ್ವರದಂತಹ ಸಾಮಾನ್ಯ ಅನಾರೋಗ್ಯ ಸಮಸ್ಯೆಗಳಿಗೆ ಚಿಕಿತ್ಸೆ ಒದಗಿಸುವ ಜತೆಗೆ ರಕ್ತ ಸೇರಿ ವಿವಿಧ ಪರೀಕ್ಷೆಗಳನ್ನೂ ಇಲ್ಲಿ ನಡೆಸಲಾಗುತ್ತಿದೆ. ಆದರೆ, ಬಹುತೇಕ ಕ್ಲಿನಿಕ್‌ಗಳಲ್ಲಿ ಪ್ರತಿನಿತ್ಯ ಭೇಟಿ ನೀಡುವ ರೋಗಿಗಳ ಸಂಖ್ಯೆ ಎರಡಂಕಿ ತಲುಪುತ್ತಿಲ್ಲ.

ಪ್ರತಿ ವಾರ್ಡ್‌ಗೆ ಒಂದರಂತೆ ಒಟ್ಟು 243 ನಮ್ಮ ಕ್ಲಿನಿಕ್‌ಗಳನ್ನು ಸ್ಥಾಪಿಸಲು ಬಿಬಿಎಂಪಿ ಕಾರ್ಯಯೋಜನೆ ರೂಪಿಸಿತ್ತು. ನಗರದ ಎಲ್ಲಾ ವಿಧಾನಸಭೆ ಕ್ಷೇತ್ರದಲ್ಲಿ ಈ ಕ್ಲಿನಿಕ್‌ಗಳನ್ನು ಸ್ಥಾಪಿಸಲಾಗಿದೆ. ಚಾಮರಾಜಪೇಟೆ, ಪದ್ಮನಾಭನಗರ, ಬಸವನಗುಡಿ, ಶಿವಾಜಿನಗರ, ಚಿಕ್ಕಪೇಟೆ, ಜಯನಗರ, ಮಹದೇವಪುರ, ಯಲಹಂಕ ಸೇರಿ ಬಹುತೇಕ ಕಡೆ ಮುಖ್ಯ ರಸ್ತೆಗಳ ಅಕ್ಕಪಕ್ಕದಲ್ಲಿ ಈ ಕ್ಲಿನಿಕ್‌ಗಳಿಲ್ಲ. ಸಂದಿ ಮೂಲೆಗಳಲ್ಲಿ ಬಿಬಿಎಂಪಿ ಕಟ್ಟಡದಲ್ಲಿ ಸ್ಥಳಾವಕಾಶ ನೀಡಲಾಗಿದೆ. ಇದರಿಂದಾಗಿ ಸ್ಥಳೀಯ ನಿವಾಸಿಗಳಿಗೇ ಕ್ಲಿನಿಕ್ ಇರುವ ಬಗ್ಗೆ ಮಾಹಿತಿ ಇಲ್ಲವಾಗಿದೆ.

ಗಾಂಧಿಬಜಾರ್‌ನಲ್ಲಿ ನಮ್ಮ ಕ್ಲಿನಿಕ್ ನಡೆಯುತ್ತಿರುವ ಕಟ್ಟಡ 48 ವರ್ಷಗಳ ಹಿಂದಿನದಾಗಿದೆ. ಸುತ್ತಮುತ್ತಲೂ ಕಟ್ಟಡ ಆವರಿಸಿಕೊಂಡಿರುವುದರಿಂದ ಕ್ಲಿನಿಕ್ ಮರೆಯಾಗಿದೆ. ಇದರಿಂದಾಗಿ ಅಲ್ಲಿಗೆ ಜನ ಬರುತ್ತಿಲ್ಲ. ಚಲವಾದಿಪಾಳ್ಯದಲ್ಲಿ ಕ್ಲಿನಿಕ್ ಮುಂದೆಯೇ ಕಸದ ರಾಶಿ ಹಾಕಲಾಗಿದೆ. ಇದರಿಂದಾಗಿ ಚಿಕಿತ್ಸಾ ಕೇಂದ್ರದ ಹೊರಗಡೆಯೇ ಜನರು ಮೂಗು ಮುಚ್ಚಿಕೊಂಡು ಸಾಗಬೇಕಾದ ಪರಿಸ್ಥಿತಿ ಇದೆ. ಹೆಚ್ಚಿನ ಕ್ಲಿನಿಕ್‌ಗಳ ಒಳಗಡೆ ಸ್ವಚ್ಛತೆಗೆ ಆದ್ಯತೆ ನೀಡಲಾಗಿದ್ದು, ಆಸನ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ.


ನಮ್ಮ ಕ್ಲಿನಿಕ್‌ಗಳಲ್ಲಿ ತಲಾ ಒಬ್ಬರು ವೈದ್ಯಾಧಿಕಾರಿ, ಶುಶ್ರೂಷಕರು, ಪ್ರಯೋಗಶಾಲಾ ತಂತ್ರಜ್ಞರು, ಡಿ-ದರ್ಜೆ ನೌಕರರು ಕಾರ್ಯನಿರ್ವಹಿಸಬೇಕಿದೆ. ಆದರೆ, ಕೆಲವೆಡೆ ಶುಶ್ರೂಷಕರೊಬ್ಬರೇ ಎಲ್ಲಾ ಕೆಲಸಗಳನ್ನು ಮಾಡಬೇಕಾದ ಸ್ಥಿತಿ ನಿರ್ಮಾಣವಾಗಿದೆ.

ಶೌಚಾಲಯ ಸಮಸ್ಯೆ: ನಮ್ಮ ಕ್ಲಿನಿಕ್‌ಗಳು ಸೋಮವಾರದಿಂದ ಶನಿವಾರದವರೆಗೆ ಕಾರ್ಯನಿರ್ವಹಿಸುತ್ತಿವೆ. ಸಾವಿರ ಚದರ ಅಡಿ ವಿಸ್ತೀರ್ಣದಲ್ಲಿ ನಿರೀಕ್ಷಣಾ ಸ್ಥಳ, ಹೊರ ರೋಗಿಗಳ ತಪಾಸಣೆ ಕೊಠಡಿ, ಚುಚ್ಚುಮದ್ದು ನೀಡುವ ಕೊಠಡಿ, ಪ್ರಯೋಗಶಾಲೆ, ಯೋಗ, ಔಷಧ ದಾಸ್ತಾನು ಮತ್ತು ವಿತರಣಾ ಕೊಠಡಿ, ಆಡಳಿತ ಕಚೇರಿ ಸೇರಿ ವಿವಿಧ ಕೊಠಡಿಗಳು ಇರಬೇಕಿದೆ. ಆದರೆ, ಹಲವೆಡೆ ಯೋಗ ಸ್ಥಳ ಸೇರಿ ವಿವಿಧ ಕೊಠಡಿಗಳಿಲ್ಲ. ಆಸ್ಪತ್ರೆ ಸಿಬ್ಬಂದಿ, ಮಹಿಳಾ ಮತ್ತು ಪುರುಷ ರೋಗಿಗಳಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆಯನ್ನೂ ಕಲ್ಪಿಸಿಲ್ಲ.

'ರೋಗಿಗಳಿಗೆ ಚಿಕಿತ್ಸೆಯ ಜತೆಗೆ ಉಚಿತವಾಗಿ ಔಷಧವನ್ನೂ ಒದಗಿಸಲಾಗುತ್ತದೆ. ಮಧುಮೇಹದಂತಹ ದೀರ್ಘಾವಧಿ ಸಮಸ್ಯೆಗಳಿಗೂ ಮಾತ್ರೆಗಳನ್ನು ನೀಡಲಾಗುತ್ತದೆ. 'ನಮ್ಮ ಕ್ಲಿನಿಕ್'ಗಳನ್ನು ಆರಂಭಿಸಿರುವ ಕುರಿತು ಮಾಹಿತಿ ಕೊರತೆಯಿಂದ ರೋಗಿಗಳು ಕ್ಲಿನಿಕ್‌ಗಳಿಗೆ ಬರುತ್ತಿಲ್ಲ. ರೋಗಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದಲ್ಲಿ ಇನ್ನಷ್ಟು ಸೌಲಭ್ಯ ಹಾಗೂ ಸ್ಥಳಾವಕಾಶ ಕೇಳಬಹುದು' ಎಂದು ಬೆಂಗಳೂರು ದಕ್ಷಿಣದಲ್ಲಿರುವ ನಮ್ಮ ಕ್ಲಿನಿಕ್‌ನ ವೈದ್ಯರೊಬ್ಬರು ಬೇಸರ ವ್ಯಕ್ತಪಡಿಸಿದರು.

'ನಮ್ಮ ಕ್ಲಿನಿಕ್‌ಗಳ ಪರಿಕಲ್ಪನೆ ಉತ್ತಮವಾಗಿದ್ದರೂ ಜನರನ್ನು ತಲುಪಲು ಸಾಧ್ಯವಾಗುತ್ತಿಲ್ಲ. ಮುಖ್ಯ ರಸ್ತೆಗಳು, ಉದ್ಯಾನಗಳ ಅಕ್ಕಪಕ್ಕ ಸ್ಥಾಪಿಸಿದಲ್ಲಿ ಜನರು ಬರುತ್ತಿದ್ದರು. ವೃದ್ಧರು ಮಾತ್ರ ವಿವಿಧ ಮಾತ್ರೆಗಳಿಗೆ ಭೇಟಿ ನೀಡುತ್ತಿದ್ದಾರೆ' ಎಂದು ಚಾಮರಾಜಪೇಟೆಯ ನಮ್ಮ ಕ್ಲಿನಿಕ್‌ನ ಶುಶ್ರೂಷಕರೊಬ್ಬರು ತಿಳಿಸಿದರು.

'ನಮ್ಮ ಕ್ಲಿನಿಕ್‌ಗಳಲ್ಲಿ ಮಧುಮೇಹ ಸೇರಿ ವಿವಿಧ ಸಮಸ್ಯೆಗಳಿಗೆ ಮಾತ್ರೆಗಳು ನಿಯಮಿತವಾಗಿ ದೊರೆಯುತ್ತಿಲ್ಲ. ವೈದ್ಯರು ಕೂಡ ವಾರದ ಬಹುತೇಕ ದಿನ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿಲ್ಲ' ಎಂದು ವಿಜಯನಗರದ ಸಂಗಮೇಶ್ ಬೇಸರ ವ್ಯಕ್ತಪಡಿಸಿದರು.



ಹೊರವರ್ತುಲ ರಸ್ತೆಯ ಹೊಸಕೆರೆಹಳ್ಳಿಯಲ್ಲಿ ಇರುವ ನಮ್ಮ ಕ್ಲಿನಿಕ್‌ನಲ್ಲಿ ವೈದ್ಯರು ಹಾಗೂ ಸಿಬ್ಬಂದಿ ರೋಗಿಗಳ ನಿರೀಕ್ಷೆಯಲ್ಲಿ ಕುಳಿತಿರುವುದು. —ಪ್ರಜಾವಾಣಿ ಚಿತ್ರಗಳು/ ಪ್ರಶಾಂತ್ ಎಚ್‌.ಜಿ.

ಶುಶ್ರೂಷಕರ ಅಸಮಾಧಾನ

ನಮ್ಮ ಕ್ಲಿನಿಕ್‌ಗಳಲ್ಲಿ ಶುಶ್ರೂಷಕ ಹುದ್ದೆಗೆ ಬಿಎಸ್‌ಸಿ, ನರ್ಸಿಂಗ್‌ನಲ್ಲಿ ಡಿಪ್ಲೊಮಾ ಮಾಡಿದವರನ್ನು ನೇಮಿಸಿಕೊಳ್ಳಲಾಗಿದೆ. ವೈದ್ಯರ ಗೈರು ಹಾಜರಿಯಲ್ಲಿ ಶುಶ್ರೂಷಕರೇ ತಪಾಸಣೆ ನಡೆಸುತ್ತಿದ್ದಾರೆ. ಗರ್ಭಿಣಿಯರಿಗೆ ಸೂಕ್ತ ಆರೈಕೆ ಮಾಡಿ, ಮಾರ್ಗದರ್ಶನ ಮಾಡುತ್ತಿದ್ದಾರೆ. ಅವರಿಗೆ ₹ 15,750 ನಿಗದಿಪಡಿಸಲಾಗಿದೆ. ವೇತನದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿರುವ ಶುಶ್ರೂಷಕರು, 'ಅನಿವಾರ್ಯ ಕಾರಣಗಳಿಂದ ಈ ಉದ್ಯೋಗವನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಇಷ್ಟು ವೇತನದಲ್ಲಿ ಜೀವನ ನಿರ್ವಹಣೆ ಕಷ್ಟವಾಗಿದೆ. ಮಾತ್ರೆಗಳು ಇಲ್ಲದಿದ್ದಲ್ಲಿ ರೋಗಿಗಳು ನಮ್ಮ ಮೇಲೆ ಆಕ್ರೋಶ ವ್ಯಕ್ತಪಡಿಸುತ್ತಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಮ್ಮ ಕ್ಲಿನಿಕ್ 19 ಕಡೆ ಬಾಕಿ



ನಗರದಲ್ಲಿ 224 ನಮ್ಮ ಕ್ಲಿನಿಕ್‌ಗಳಿದ್ದು ಇನ್ನೂ 19 ಕ್ಲಿನಿಕ್‌ಗಳು ಆರಂಭವಾಗಬೇಕಿದೆ. ವೆಬ್‌ಸೈಟ್‌ನಲ್ಲಿ 109 ಕ್ಲಿನಿಕ್‌ಗಳ ಮಾಹಿತಿಯನ್ನು ಅಪ್‌ಡೇಟ್ ಮಾಡಲಾಗಿದ್ದು, ಬಾಕಿ ಕ್ಲಿನಿಕ್‌ಗಳ ಪಟ್ಟಿಯನ್ನು ಕೂಡಲೇ ಅಪ್‌ಡೇಟ್ ಮಾಡಲಾಗುವುದು. ಇನ್ನುಳಿದ ಕ್ಲಿನಿಕ್‌ಗಳನ್ನು ತೆರೆಯಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಔಷಧ ಕೊರತೆ ರೀತಿಯ ದೂರುಗಳಿಲ್ಲ. ಎಲ್ಲಾ ಕ್ಲಿನಿಕ್‌ಗಳಿಗೂ ಔಷಧ ಪೂರೈಕೆಯಾಗಿದೆ. ಸ್ನಾತಕೋತ್ತರ ಅಭ್ಯಾಸ ಮಾಡುತ್ತಿರುವ ವೈದ್ಯಕೀಯ ವಿದ್ಯಾರ್ಥಿಗಳನ್ನು ಪಾಳಿ ಆಧಾರದಲ್ಲಿ ನೇಮಕ ಮಾಡಿಕೊಳ್ಳಲಾಗುತ್ತಿದೆ. ವೈದ್ಯರು ಸೇರಿ ಸಿಬ್ಬಂದಿ ಕೊರತೆ ಇಲ್ಲ.

ಡಾ.ಕೆ.ವಿ. ತ್ರಿಲೋಕಚಂದ್ರ
ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ)



ತಜ್ಞ ವೈದ್ಯರ ಕೊರತೆಯಿಂದ ನಮ್ಮ ಕ್ಲಿನಿಕ್‌ಗಳಲ್ಲಿ ಗುಣಮಟ್ಟದ ವೈದ್ಯಕೀಯ ಸೌಲಭ್ಯ ದೊರೆಯುತ್ತಿಲ್ಲ. ಈ ಕ್ಲಿನಿಕ್‌ಗಳ ಬಲವರ್ಧನೆಗೆ ಬಿಬಿಎಂಪಿ ಆದ್ಯತೆ ನೀಡಬೇಕು.
ಕಾರುಣ್ಯಾ ಸುರೇಶ್, ಹೆಬ್ಬಾಳ



ನಮ್ಮ ಕ್ಲಿನಿಕ್‌ಗಳಿಗೆ ಮೂಲಸೌಕರ್ಯ ಒದಗಿಸಬೇಕು. ವೈದ್ಯರ ಗೈರು ಹಾಜರಿಯಲ್ಲಿ ಇನ್ನೊಬ್ಬರು ವೈದ್ಯರು ಇರಬೇಕು. ಯೋಗಾಭ್ಯಾಸ ಪ್ರಾರಂಭಿಸಬೇಕು.
ಗೋವಿಂದರಾವ್ ಸೂರ್ಯವಂಶಿ, ವಿಕಾಸನಗರ



ನಮ್ಮ ಕ್ಲಿನಿಕ್‌ಗಳಲ್ಲಿ ಮಧುಮೇಹ ಸೇರಿ ವಿವಿಧ ಸಮಸ್ಯೆಗಳಿಗೆ ಮಾತ್ರೆಗಳು ಸರಿಯಾಗಿ ಸಿಗುತ್ತಿಲ್ಲ. ಈ ಬಗ್ಗೆ ಕ್ರಮವಹಿಸಿ, ಬಡ–ಮಧ್ಯಮ ವರ್ಗದವರಿಗೆ ಚಿಕಿತ್ಸೆ ಒದಗಿಸಬೇಕು.
ಪಾರ್ವತಮ್ಮ ಎಚ್., ವಿನಾಯಕನಗರ

ರಜೆ ಮೇಲೆ ತೆರಳುತ್ತಿರುವ ವೈದ್ಯರು

ನಮ್ಮ ಕ್ಲಿನಿಕ್‌ಗಳಿಗೆ ತಲಾ ಒಬ್ಬರು ವೈದ್ಯರನ್ನು ಒಂದು ವರ್ಷಕ್ಕೆ ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲಾಗಿದೆ. ಈ ಕ್ಲಿನಿಕ್‌ಗಳಲ್ಲಿನ ವೈದ್ಯರು ವಿವಿಧ ಕಾರಣಗಳಿಗೆ ರಜೆ ಹಾಕಿದರೆ, ಶುಶ್ರೂಷಕರೇ ವೈದ್ಯಕೀಯ ಸೇವೆ ಒದಗಿಸಬೇಕಾಗ ಪರಿಸ್ಥಿತಿ ನಿರ್ಮಾಣವಾಗಿದೆ. ಎಂಬಿಬಿಎಸ್ ಮುಗಿಸಿದ ವೈದ್ಯಾಧಿಕಾರಿಗೆ ₹ 47,250 ವೇತನ ನಿಗದಿಪಡಿಸಲಾಗಿದೆ. ಎಂಬಿಬಿಎಸ್ ಮುಗಿಸಿದವರು ಸ್ನಾತಕೋತ್ತರ ಪದವಿ, ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗಾಗಿ ರಜೆ ಪಡೆದುಕೊಳ್ಳುತ್ತಿದ್ದಾರೆ. ಅವರು ಕರ್ತವ್ಯಕ್ಕೆ ಬಾರದ ದಿನಗಳಲ್ಲಿ ಶುಶ್ರೂಷಕರು ಪರೀಕ್ಷೆ ನಡೆಸಿ, ಮಾತ್ರೆಗಳನ್ನು ನೀಡುತ್ತಿದ್ದಾರೆ.

'ಯುಪಿಎಸ್‌ಸಿ ಪರೀಕ್ಷೆಗೆ ವೈದ್ಯರು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಅವರು ರಜೆ ಹಾಕಿದ್ದಾರೆ. ಕ್ಲಿನಿಕ್‌ಗೆ ಬಂದವರಿಗೆ ನಾವೇ ಪರೀಕ್ಷೆ ಮಾಡಿ, ಮಾತ್ರೆ ವಿತರಿಸುತ್ತೇವೆ. ಪ್ರಯೋಗಾಲಯದ ಸಿಬ್ಬಂದಿ ದ್ವಿಚಕ್ರ ವಾಹನದಿಂದ ಬಿದ್ದು, ಗಾಯಗೊಂಡಿದ್ದಾರೆ. ಎರಡು ತಿಂಗಳಿಂದ ಅವರು ರಜೆಯಲ್ಲಿದ್ದು, ನಾವೇ ರಕ್ತ ಸೇರಿ ವಿವಿಧ ಪರೀಕ್ಷೆ ಮಾಡುತ್ತೇವೆ' ಎಂದು ಚಿಕ್ಕಪೇಟೆ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿರುವ ನಮ್ಮ ಕ್ಲಿನಿಕ್‌ನ ಶುಶ್ರೂಷಕರೊಬ್ಬರು ತಿಳಿಸಿದರು.

12 ಆರೋಗ್ಯ ಸೇವೆಗಳ ಪ್ಯಾಕೇಜ್

ನಮ್ಮ ಕ್ಲಿನಿಕ್‌ಗಳಲ್ಲಿ ಒಟ್ಟು 12 ಆರೋಗ್ಯ ಸೇವೆಗಳ ಪ್ಯಾಕೇಜ್ ಇಲ್ಲಿ ಲಭ್ಯವಿದ್ದು, ಗರ್ಭಿಣಿ ಮತ್ತು ಜನನ ಸಮಯದ ಆರೈಕೆ, ನವಜಾತ ಮತ್ತು ಶಿಶುವಿನ ಸಮಗ್ರ ಆರೋಗ್ಯ ರಕ್ಷಣೆ, ಬಾಲ್ಯ ಮತ್ತು ಹದಿಹರೆಯದವರ ಸಮಗ್ರ ಆರೋಗ್ಯ ಸೇವೆಗಳು, ಸಾರ್ವತ್ರಿಕ ಲಸಿಕಾಕರಣ ಸೇವೆಗಳು, ಕುಟುಂಬ ಕಲ್ಯಾಣ, ಗರ್ಭನಿರೋಧಕ ಸೇವೆಗಳು ಮತ್ತು ಇತರ ಸಂತಾನೋತ್ಪತ್ತಿ ಆರೋಗ್ಯ ಸೇವೆಗಳು ಇಲ್ಲಿ ಒದಗಿಸುವುದಾಗಿ ಸರ್ಕಾರ ಆದೇಶ ಹೊರಡಿಸಿತ್ತು.

ಸಾಂಕ್ರಾಮಿಕ ರೋಗಗಳ ನಿರ್ವಹಣೆ, ಸಾಮಾನ್ಯ ಮತ್ತು ಸಣ್ಣ ಪ್ರಮಾಣದ ಕಾಯಿಲೆಗಳಿಗೆ ಹೊರ ರೋಗಿ ಸೇವೆ, ಸಾಂಕ್ರಾಮಿಕ ಮತ್ತು ಸಾಂಕ್ರಾಮಿಕವಲ್ಲದ ರೋಗಗಳ ತಪಾಸಣೆ, ಬಾಯಿ ಆರೋಗ್ಯ ಸೇವೆಗಳು, ನೇತ್ರ ಹಾಗೂ ಕಿವಿ, ಮೂಗು, ಗಂಟಲು ಆರೋಗ್ಯ ಆರೈಕೆ, ಮಾನಸಿಕ ಆರೋಗ್ಯ ಸೇವೆ, ವೃದ್ಧಾಪ್ಯ ಆರೈಕೆ, ತುರ್ತು ವೈದ್ಯಕೀಯ ಸೇವೆ, ಪ್ರಯೋಗ ಶಾಲಾ ಸೇವೆ, ಟೆಲಿ ಸಮಾಲೋಚನೆ ಸೇವೆ, ಕ್ಷೇಮ ಚಟುವಟಿಕೆ ಹಾಗೂ ಉಚಿತ ರೆಫರಲ್ ಸೇವೆಗಳನ್ನೂ ಒದಗಿಸಲಾಗುತ್ತದೆ ಎಂದು ತಿಳಿಸಲಾಗಿತ್ತು.



ಚಲವಾದಿಪಾಳ್ಯದಲ್ಲಿ ನಮ್ಮ ಕ್ಲಿನಿಕ್ ಎದುರು ಕಸದ ರಾಶಿ ಹಾಕಿರುವುದು.

ಪ್ರಾರಂಭ ಆಗದ ಯೋಗ

ನಮ್ಮ ಕ್ಲಿನಿಕ್‌ಗಳು ಪ್ರಾರಂಭವಾಗಿ ಕೆಲ ತಿಂಗಳು ಕಳೆದರೂ ಯೋಗಾಭ್ಯಾಸ ಪ್ರಾರಂಭವಾಗಿಲ್ಲ. ಕೆಲ ನಮ್ಮ ಕ್ಲಿನಿಕ್‌ಗಳಲ್ಲಿ ಯೋಗ ಕೊಠಡಿಗೆ ಬೀಗ ಹಾಕಲಾಗಿದೆ. ಇನ್ನೂ ಕೆಲವೆಡೆ ಸ್ಥಳಾವಕಾಶವನ್ನೇ ಗುರುತಿಸಿಲ್ಲ. ಇದರಿಂದಾಗಿ ಯೋಗಾಭ್ಯಾಸ ಪ್ರಾರಂಭಿಸುವ ಬಗ್ಗೆ ಕ್ಲಿನಿಕ್‌ಗಳ ವೈದ್ಯರಿಗೇ ಖಚಿತತೆ ಇಲ್ಲವಾಗಿದೆ. ಯೋಗ ಶಿಕ್ಷಕರ ನೇಮಕಾತಿಯೂ ನಡೆದಿಲ್ಲ.

ಸಿನಿಮಾ ಪುರವಣಿ



ಛಾಯಾ ಸಿಂಗ್

ಹಿರಿತೆರೆಯಿಂದ ಕಿರುತೆರೆಗೆ ಛಾಯಾಸಿಂಗ್

ಕಿರುತೆರೆಯಿಂದ ನಟನೆಗೆ ಕಾಲಿಟ್ಟು, 'ಮುನ್ನುಡಿ' ಚಿತ್ರದಿಂದ ಹಿರಿತೆರೆ ಪಯಣ ಆರಂಭಿಸಿ, 'ಚಿಟ್ಟೆ', 'ತುಂಟಾಟ' ಚಿತ್ರದ ಯಶಸ್ಸಿನಿಂದ ತಮಿಳು, ತೆಲುಗು, ಮಲಯಾಳಂಗಳಿಗೆ ಹಾರಿದ ನಟಿ ಛಾಯಾಸಿಂಗ್, ಇದೀಗ ಕನ್ನಡ ಕಿರುತೆರೆ ಜಗತ್ತಿಗೆ ಮತ್ತೆ ಮರಳಿದ್ದಾರೆ. 'ಅಮೃತಧಾರೆ' ಧಾರಾವಾಹಿ ಮೂಲಕ ಮನೆ ಮಗಳಾಗಲು ಹೊರಟಿರುವ ಅವರು ತಮ್ಮ ಚಿತ್ರರಂಗದಲ್ಲಿನ ಪಯಣದ ಕುರಿತು ಒಂದಷ್ಟು ಮಾಹಿತಿ ಹಂಚಿಕೊಂಡಿದ್ದಾರೆ...

ವಿನಾಯಕ ಕೆ.ಎಸ್.

● ಹಿರಿತೆರೆಯಿಂದ ಕಿರುತೆರೆಗೆ ಬಂದಿದ್ದೀರಿ. ಈ ಹೊಸ ಅನುಭವ ಹೇಗಿದೆ?

ಒಂದು ದಿನವೂ ಪುರುಸೊತ್ತಿಲ್ಲದಂತೆ ಚಿತ್ರೀಕರಣ ನಡೆಯುತ್ತಿದೆ. ಒಳ್ಳೆ ತಂಡ ಸಿಕ್ಕಿದೆ. ಆದರೆ ಒಂದು ಸಣ್ಣ ವಿರಾಮದ ಬಳಿಕ ಕನ್ನಡದಲ್ಲಿ ನಟನೆ ಮಾಡುತ್ತಿದ್ದೇನೆ. ಹೀಗಾಗಿ ಸ್ವಲ್ಪ ಅಳುಕಿದೆ. ಬೆಂಗಳೂರಿನಲ್ಲಿಯೇ ಹುಟ್ಟಿ ಬೆಳೆದು, ಕನ್ನಡ ಧಾರಾವಾಹಿ ಜಗತ್ತಿನಿಂದಲೇ ನಟನೆಗೆ ಕಾಲಿಟ್ಟಿದ್ದು. ಚೆನ್ನೈಗೆ ಹೋಗಿ ಸೆಟಲ್ ಆಗಿ ಬಹಳ ವರ್ಷವಾಯ್ತು. ಹೀಗಾಗಿ ಕನ್ನಡ ಭಾಷೆ ಬಳಕೆ ಬಗ್ಗೆ ಸ್ವಲ್ಪ ಭಯವಿದೆ.

● ಸಿನಿಮಾದಿಂದ ಮತ್ತೆ ಧಾರಾವಾಹಿ ಆಯ್ಕೆ ಏಕೆ?

ಕಥೆ ಇಷ್ಟವಾಯ್ತು. ನಿರ್ದೇಶಕರು ಬಂದು ಈ ಧಾರಾವಾಹಿ ಕಥೆ ಹೇಳಿದಾಗ ಪಾತ್ರಕ್ಕೆ ಗಟ್ಟಿತನವಿದೆ ಎನ್ನಿಸಿತು. ಇವತ್ತಿನ ದಿನ ಸಿನಿಮಾ, ಧಾರಾವಾಹಿ, ವೆಬ್ ಸಿರೀಸ್ ಎಂಬ ತಾರತಮ್ಯವೇನಿಲ್ಲ. ಯಾವ ಮಾಧ್ಯಮವೇ ಆಗಲಿ, ಅಂತಿಮವಾಗಿ ಪ್ರೇಕ್ಷಕರನ್ನು ತಲುಪುವುದು ಮುಖ್ಯ. ಪೂರ್ತಿಯಾಗಿ ಸಿನಿಮಾವನ್ನು ಬಿಟ್ಟಿಲ್ಲ. 'ರಾಯಲ್' ಚಿತ್ರದಲ್ಲಿ ನಟಿಸುತ್ತಿರುವೆ. ಮುಂಬರುವ 'ಭೈರತಿ ರಣಗಲ್' ಚಿತ್ರದಲ್ಲಿ ಶಿವರಾಜ್‌ಕುಮಾರ್ ಅವರ ತಂಗಿ ಪಾತ್ರ ಮಾಡುತ್ತಿರುವೆ. ತಮಿಳಿನಲ್ಲಿ ಒಂದು ಸಿನಿಮಾ ನಡೆಯುತ್ತಿದೆ.

● ಹೆಚ್ಚಿನ ಕಿರುತೆರೆ ನಟಿಯರು ಹಿರಿತೆರೆ ಪ್ರವೇಶಿಸಲು ಯತ್ನಿಸುತ್ತಾರಲ್ಲ?

ಧಾರಾವಾಹಿಯಲ್ಲಿ ಮನೆ ಮಗಳಾಗಬಹುದು. ಸೊಸೆಯಾಗಬಹುದು. ಆದರೆ ಸಿನಿಮಾ ಹಾಗಲ್ಲ. ಅಲ್ಲೊಂದು ಸ್ಟಾರ್ ಪಟ್ಟ ಸಿಗುತ್ತದೆ. ಸಿನಿಮಾ ಚಿತ್ರೀಕರಣದ ತಂತ್ರಜ್ಞಾನ, ಪಾತ್ರ ಪೋಷಣೆ, ಕಥೆಯ ವ್ಯಾಪ್ತಿ ಎಲ್ಲವೂ ದೊಡ್ಡದು. ಜೊತೆಗೆ ದೊಡ್ಡ ಪರದೆ ಮೇಲೆ ಕಾಣಿಸಿಕೊಳ್ಳುವ ಅನುಭವವೇ ಬೇರೆ. ಹಾಗಾಗಿಯೇ ಅದು ಹಿರಿತೆರೆ. ಚಿಕ್ಕಪರದೆಯಿಂದ ದೊಡ್ಡ ಪರದೆಗೆ ಹೋಗುವುದನ್ನು ಬೆಳವಣಿಗೆ ಎಂದು ಕರೆಯುತ್ತೇನೆ. ಹೀಗಾಗಿ ಆ ಆಸೆ ತಪ್ಪಲ್ಲ. ಆದರೆ ಕೆಲಸ ಎರಡೂ ಕಡೆ ಒಂದೇ. ಅದರಲ್ಲಿ ದೊಡ್ಡದು, ಚಿಕ್ಕದು ಎಂದಿಲ್ಲ. ಯಾವ ಕೆಲಸವಾದರೂ ಖುಷಿಪಟ್ಟು, ಆಸಕ್ತಿಯಿಂದ ಮಾಡಬೇಕಷ್ಟೆ. ಅದಕ್ಕೆ ಸಿಗಬೇಕಾದ ಫಲ ಸಿಗುತ್ತದೆ. ಅದಕ್ಕಿಂತ ಹೆಚ್ಚಾಗಿ ಎರಡೂ ಮಾಧ್ಯಮ ನೋಡಿರುವೆ. ಸಕ್ರಿಯವಾಗಿರುವೆ. ಹೀಗಾಗಿ ನನಗೆ ವೈಯಕ್ತಿಕವಾಗಿ ಈ ಬಗ್ಗೆ ಅಷ್ಟೇನೂ ಯೋಚನೆಯಿಲ್ಲ.

● ಈವರೆಗಿನ ನಿಮ್ಮ ಸಿನಿ ಪಯಣ ಹೇಗಿತ್ತು?

ಒಂದು ರೀತಿಯಲ್ಲಿ ನನಗೆ ದೇವರ ಕೃಪೆ ಎನ್ನಬೇಕು. ಕನ್ನಡದಲ್ಲಿ ಗುರುತಿಸಿ ಬೆಳೆಸಿದ್ರು. ಧಾರಾವಾಹಿಯ ಪುಟ್ಟ ಪಾತ್ರಗಳಿಂದ ನಟನೆ ಪ್ರಾರಂಭವಾಯಿತು. ಕಾಸರವಳ್ಳಿಯವರ 'ಮುನ್ನುಡಿ' ಸಿನಿಮಾದಲ್ಲಿ ಒಂದು ಪಾತ್ರ ಮಾಡಿದೆ. ಅದರಿಂದಾಗಿ ಸಿಕ್ಕ 'ಚಿಟ್ಟೆ' ಸಿನಿಮಾ ವೃತ್ತಿಗೆ ಒಂದು ಉತ್ತಮ ಬ್ರೇಕ್ ನೀಡಿತು. 'ತುಂಟಾಟ', 'ಮಫ್ತಿ' ಸಿನಿಮಾಗಳಲ್ಲಿ ಜನ ಇನ್ನಷ್ಟು ಗುರುತಿಸಿದರು. ಬೇರೆ ಭಾಷೆಯ ಚಿತ್ರರಂಗದಲ್ಲಿಯೂ ಮಗಳಾಗಿ ಸ್ವೀಕರಿಸಿದರು. ಒಳ್ಳೊಳ್ಳೆ ನಿರ್ದೇಶಕರ ಜೊತೆ ಕೆಲಸ ಮಾಡಿದೆ. ಪಯಣ ಮುಂದುವರಿದಿದೆ. ಇನ್ನಷ್ಟು ಅವಕಾಶಗಳು ಸಿಕ್ಕಿವೆ. ಖುಷಿಯಾಗುತ್ತಿದೆ. ಮೂರು ಸಿನಿಮಾ ಕೈಯಲ್ಲಿವೆ. ತೆಲುಗಿನಲ್ಲಿ ಒಂದು ಧಾರಾವಾಹಿ ನಡೆಯುತ್ತಿದೆ. ಜೊತೆಗೆ 'ಅಮೃತಧಾರೆ' ಆರಂಭವಾಗುತ್ತಿದೆ.

● ಒಂದು ಕಾಲಕ್ಕೆ ಮಿಂಚಿ, ಮತ್ತೆ ನಟನೆಯಿಂದ ಒಂದು ಸಣ್ಣ ವಿರಾಮ ತೆಗೆದುಕೊಂಡ್ರಾ?

ಹಾಗೇನಿಲ್ಲ. ನಿರಂತರವಾಗಿ ಸಿನಿಮಾ, ಧಾರಾವಾಹಿ ಮಾಡುತ್ತಿದ್ದೇನೆ. ಆದರೆ ಕೆಲವು ಸಿನಿಮಾಗಳು ಸದ್ದು ಮಾಡಲಿಲ್ಲ. ಜೊತೆಗೆ ಬೇರೆ ಭಾಷೆಗಳಲ್ಲಿ ಹೆಚ್ಚು ಸಕ್ರಿಯವಾಗಿದ್ದೆ. ಚೆನ್ನೈನಲ್ಲಿದ್ದರಿಂದ ತಮಿಳು, ತೆಲುಗು ಹೆಚ್ಚು ಫೋಕಸ್ ಮಾಡಿದ್ದೆ. ಕನ್ನಡದಲ್ಲಿಯೂ ಅವಕಾಶ ಸಿಕ್ಕಾಗ ನಟಿಸಿದೆ. 'ಖಾಕಿ' ಎಂಬ ಸಿನಿಮಾದಲ್ಲಿ ನಟಿಸಿದೆ. ಆದರೆ ಸಿನಿಮಾ ತಲುಪಲಿಲ್ಲ. ಹೀಗಾಗಿ ಒಂದು ವಿರಾಮ ತೆಗೆದುಕೊಂಡೆ ಎಂಬಂತೆ ಭಾಸವಾಗುತ್ತಿದೆ.

● ನಿಮ್ಮ ಭವಿಷ್ಯದ ಯೋಜನೆಗಳು?

ಭವಿಷ್ಯದ ಬಗ್ಗೆ ಹೆಚ್ಚು ಯೋಚಿಸುವುದಿಲ್ಲ. ಈಗಿನ ಬದುಕನ್ನು ಬದುಕುತ್ತ ಹೋಗಬೇಕೆಂಬ ತತ್ವದವಳು. ಹೀಗಾಗಿ ನಾಳೆಯ ಬಗೆಗಿನ ಚಿಂತೆ ಜಾಸ್ತಿಯಿಲ್ಲ. ಸದ್ಯಕ್ಕೆ ಇರುವ ಯೋಜನೆಗಳನ್ನು ಮುಗಿಸಬೇಕು. ನಂತರದ್ದು ಆಮೇಲೆ. ❖

ಪ್ರಜಾವಾಣಿ ನೋಡಿಯೊ

ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ



ಧನ್ಯಾ ಪಾಟೀಲ್

ವಾಮಾಚಾರದ ವಿರುದ್ಧ 'ಗದಾಯುದ್ಧ'

ವಾಮಾಚಾರ, ಮಾಟ ಮಂತ್ರದ ಕುರಿತಾದ ಕಥೆಯನ್ನು ಹೊಂದಿರುವ 'ಗದಾಯುದ್ಧ' ಚಿತ್ರ ಜೂನ್ 9 ರಂದು ರಾಜ್ಯದಾದ್ಯಂತ ತೆರೆಕಾಣುತ್ತಿದ್ದು, ಇತ್ತೀಚೆಗಷ್ಟೆ ಚಿತ್ರದ ಟ್ರೈಲರ್ ಬಿಡುಗಡೆಗೊಂಡಿದೆ. ಶ್ರೀವತ್ಸ ರಾವ್ ಚಿತ್ರದ ನಿರ್ದೇಶಕರಾಗಿದ್ದು, ಮುಂಬೈನ ನಿತಿನ್ ಶಿರಗೂರ್, ತಮ್ಮ ಪುತ್ರ ಸುಮಿತ್‌ಗಾಗಿ ಈ ಚಿತ್ರ ನಿರ್ಮಿಸಿದ್ದಾರೆ.


'ನಾಲ್ಕು ವರ್ಷದ ಹಿಂದೆ ನಿರ್ದೇಶಕರು ಹೇಳಿದ ಈ ಕಥೆ ನನಗೆ ಇಷ್ಟವಾಯಿತು. ಬಾನಾಮತಿ ಅಥವಾ ಬ್ಲಾಕ್ ಮ್ಯಾಜಿಕ್ ಮಹಾರಾಷ್ಟ್ರದಲ್ಲಿಯೂ ಇದೆ. ನಾನು ಅನೇಕ ಮಂದಿಯನ್ನು ಭೇಟಿ ಮಾಡಿ ಈ ಬ್ಲಾಕ್ ಮ್ಯಾಜಿಕ್ ಬಗ್ಗೆ ವಿಚಾರಿಸಿದ್ದೆ' ಎಂದು ನಿರ್ಮಾಪಕ ನಿತಿನ್ ಶಿರಗೂರ್ ಹೇಳಿದರು.

ಕನ್ನಡ, ಹಿಂದಿ ಸೇರಿದಂತೆ ಐದು ಭಾಷೆಯಲ್ಲಿ 'ಗದಾಯುದ್ಧ' ತೆರೆಗೆ ಬರಲಿದೆ. 'ಚಿತ್ರದ ಕಥೆಗಾಗಿ ಎರಡು ವರ್ಷ ಸಿದ್ಧತೆ ಮಾಡಿಕೊಂಡು ಶೂಟಿಂಗ್ ನಡೆಸಿದ್ದೇವೆ. ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ ವಾಮಾಚಾರ ನಡೆಯುತ್ತಿರುವ ಕುರಿತು ಮಾಹಿತಿ ಸಂಗ್ರಹಿಸಿ ಚಿತ್ರದಲ್ಲಿ ಅಳವಡಿಸಿಕೊಳ್ಳಲಾಗಿದೆ. ಕೆಲವು ನೈಜ ಘಟನೆಗಳನ್ನು ಹೊಂದಿರುವ ಒಂದು ಹಾಡನ್ನು ಸೆನ್ಸಾರ್‌ನವರು ಕತ್ತರಿಸುವಂತೆ ಹೇಳಿದರು. ವೇದಗಳ ಕಾಲದಿಂದಲೂ ಇಂತಹ ಪ್ರಯೋಗಗಳು ಇವೆ. ಆಗ ಒಳ್ಳೆ ಉದ್ದೇಶಕ್ಕೆ ಬಳಕೆಯಾಗುತ್ತಿತ್ತು' ಎಂದು ನಿರ್ದೇಶಕ ಶ್ರೀವತ್ಸ ರಾವ್ ಹೇಳಿದರು.

ನಾಯಕಿಯಾಗಿ ಧನ್ಯಾ ಪಾಟೀಲ್ ನಟಿಸಿದ್ದಾರೆ. ನಟಿ 'ಸ್ಪರ್ಶ' ರೇಖಾ, ಶರತ್ ಲೋಹಿತಾಶ್ವ, ಅಯ್ಯಪ್ಪ ಶರ್ಮಾ, ಸಾಧುಕೋಕಿಲ ಮುಂತಾದವರು ಚಿತ್ರದಲ್ಲಿದ್ದಾರೆ.

ನಟಿ ಸ್ಪರ್ಶ ರೇಖಾ ಮಾತನಾಡಿ, 'ಚಿತ್ರದಲ್ಲಿ ನಾನು ಒಬ್ಬ ನಟಿಯಾಗಿಯೇ ಕಾಣಿಸಿಕೊಂಡಿದ್ದೇನೆ. ಮಾಟ ಮಂತ್ರಕ್ಕೆ ಒಳಗಾಗುವ ಸ್ಪರ್ಶ ರೇಖಾ ಆಗಿಯೇ ಇಲ್ಲಿ ನಟಿಸಿದ್ದೇನೆ' ಎಂದರು. ❖

'ಅಂತ' ಮರು ಬಿಡುಗಡೆ



'ಕುತ್ತೆ ಕನ್ವರ್ ನಹಿ ಕನ್ವರ್‌ಲಾಲ್ ಬೋಲೊ' ಈ ಡೈಲಾಗ್ ಕೇಳುತ್ತಿದ್ದಂತೆ ನೆನಪಾಗುವುದು ರೆಬಲ್ ಸ್ಟಾರ್ ಅಂಬರೀಶ್ ಅವರ 'ಅಂತ' ಸಿನಿಮಾ. ಮೇ 29 ರೆಬಲ್ ಸ್ಟಾರ್ ಅಂಬರೀಶ್ ಅವರ ಜನ್ಮದಿನ. ಈ ಹೊಸ್ತಿಲಲ್ಲಿ ಅವರು ಅಭಿನಯಿಸಿದ್ದ ಸೂಪರ್ ಹಿಟ್ ಚಿತ್ರ 'ಅಂತ' ರಿರಿಲೀಸ್ ಆಗುತ್ತಿದೆ. ಮೇ 26ರಂದು ಸಿನಿಮಾ ಮರು ಬಿಡುಗಡೆ ಆಗಲಿದೆ.

'1981 ಇಸವಿಯಲ್ಲಿ ತೆರೆ ಕಂಡ ಚಿತ್ರವಿದು. ಈ ಚಿತ್ರಕ್ಕೆ ಈಗ ನೂತನ ತಂತ್ರಜ್ಞಾನ ಅಳವಡಿಸಲಾಗಿದೆ. ಈ ಚಿತ್ರವನ್ನು ಬೇರೆಯವರು ನಿರ್ದೇಶಿಸಬೇಕಿತ್ತು. ಆದರೆ ಪತ್ರಕರ್ತ ಎಂ.ಬಿ.ಸಿಂಗ್ ಅವರ ಮೂಲಕ ಕಥೆ ನನಗೆ ದೊರಕಿತು. ಪರಿಮಳ ಆರ್ಟ್ಸ್ ಮೂಲಕ ಮಾರುತಿ, ವೇಣು ಹಾಗೂ ಕೆ.ಸಿ.ಎನ್ ಚಂದ್ರಶೇಖರ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದರು' ಎಂದು ನಿರ್ದೇಶಕ ರಾಜೇಂದ್ರಸಿಂಗ್ ಬಾಬು ಹಳೆಯ ದಿನಗಳನ್ನು ನೆನಪಿಸಿಕೊಂಡರು.

'ಲಕ್ಷ್ಮೀ ಈ ಚಿತ್ರದ ನಾಯಕಿ. ವಜ್ರಮುನಿ, ಸುಂದರಕೃಷ್ಣ ಅರಸ್, ಮುಸುರಿ ಕೃಷ್ಣಮೂರ್ತಿ, ಪ್ರಭಾಕರ್ ಮುಂತಾದವರು ಇದರಲ್ಲಿ ನಟಿಸಿದ್ದಾರೆ. ಇಡೀ ಚಿತ್ರದ ಚಿತ್ರೀಕರಣ ಮೈಸೂರಿನಲ್ಲೇ ನಡೆದಿದೆ. ಹದಿನೆಂಟು ಅದ್ದೂರಿ ಸೆಟ್ ಹಾಕಲಾಗಿತ್ತು. 'ಅಂತ' ನಿರೀಕ್ಷೆಗೂ ಮೀರಿದ ಯಶಸ್ಸು ಗಳಿಸಿತ್ತು' ಎಂದು ಸಿಂಗ್ ವಿವರಿಸಿದರು.

'70ಕ್ಕೂ ಅಧಿಕ ಚಿತ್ರಮಂದಿರಗಳಲ್ಲಿ ಸಿನಿಮಾ ಮರು ಬಿಡುಗಡೆ ಮಾಡುತ್ತಿದ್ದೇವೆ. ಜಯಣ್ಣ ಫಿಲ್ಮ್ಸ್ ಅವರು ಬಿಡುಗಡೆ ಮಾಡುತ್ತಿದ್ದಾರೆ' ಎಂದು ನಿರ್ಮಾಪಕ ವೇಣು ತಿಳಿಸಿದರು. ❖

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ಕನ್ನಡ ಚಿತ್ರರಂಗದ ಶ್ರೀಮಂತ ದೃಶ್ಯಪರಂಪರೆಯನ್ನು ಗುರುತಿಸಿ ಸಂಭ್ರಮಿಸುವ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಸಮಾರಂಭ ಜೂನ್ 3ಕ್ಕೆ ನಡೆಯಲಿದೆ. ಈ ಪ್ರಶಸ್ತಿಯ ಬಗ್ಗೆ ಚಿತ್ರರಂಗದ ಕಲಾವಿದರು ಹೀಗನ್ನುತ್ತಾರೆ...

'ಪ್ರಯತ್ನಗಳನ್ನು ಪ್ರೋತ್ಸಾಹಿಸುವ ಸಮ್ಮಾನ'



ಕಲಾವಿದರನ್ನು ಪ್ರೋತ್ಸಾಹಿಸಿಕೊಂಡು ಬಂದಿದೆ

'ಪ್ರಜಾವಾಣಿ' ಪತ್ರಿಕೆ ಎಂದರೆ ಒಂದು ರೀತಿಯ ಆಪ್ತ ಭಾವನೆ. ನನ್ನ ಮೊದಲ ಸಿನಿಮಾ 'ಚಂದ್ರಚಕೋರಿ'ಯ ಸುದ್ದಿ ಮೊದಲು ಬಂದಿದ್ದು 'ಪ್ರಜಾವಾಣಿ'ಯಲ್ಲಿ. ನಾನು ಆಗ ಬಹುಶಃ ಕಾಲೇಜಿನಲ್ಲಿದ್ದೆ. ಗೆಳೆಯನೊಬ್ಬ ಆ ಲೇಖನ ತಂದು ತೋರಿಸಿ ಕಾಲೇಜಿಗೆಲ್ಲ ಸುದ್ದಿ ಹಬ್ಬಿಸಿದ್ದ. ಅದು ಇಂದಿಗೂ ಮರೆಯಲಾಗದ ಅನುಭವ. ಹೊಸಬರ ಸಿನಿಮಾಗಳಿಗೆ ಪತ್ರಿಕೆ ನೀಡಿದ ಪ್ರೋತ್ಸಾಹ ಅನನ್ಯವಾದುದು. ಇಂತಹ ಪತ್ರಿಕೆ 75 ವರ್ಷ ಪೂರೈಸುತ್ತಿರುವುದಕ್ಕೆ ಅಭಿನಂದನೆಗಳು. ಜೊತೆಗೆ ಈ ಸಂಭ್ರಮದಲ್ಲಿ 'ಸಿನಿ ಸಮ್ಮಾನ' ಎಂಬ ಚಿತ್ರರಂಗವನ್ನು ಗುರುತಿಸಿ, ಗೌರವಿಸುವ ಕೆಲಸ ಮಾಡುತ್ತಿರುವುದು ಅತ್ಯಂತ ಸಂತಸದ ವಿಷಯ. ತೀರ್ಪುಗಾರರ ಮಂಡಳಿ, ಆಯ್ಕೆ ವಿಧಾನ ಎಲ್ಲವೂ ಅನನ್ಯವಾಗಿದೆ. ಪ್ರತಿವರ್ಷ ಈ ಸಮ್ಮಾನಕ್ಕೆ ಕಾಯುವಂತಾಗಲಿ.

ಶ್ರೀಮುರಳಿ, ನಟ

'ಸಿನಿ ಸಮ್ಮಾನ'ವೆಂಬ ಪ್ರೋತ್ಸಾಹದ ಹಾದಿ



ನಾನು 8ನೇ ತರಗತಿಯಲ್ಲಿದ್ದಾಗ ನ್ಯೂಸ್ ಪೇಪರ್ ಹಾಕುತ್ತಿದ್ದೆ. ಆ ಸಂದರ್ಭದಲ್ಲೇ 'ಪ್ರಜಾವಾಣಿ' ಜೊತೆ ನಂಟು ಬೆಳೆಯಿತು. ಸಿನಿಮಾ ಪುಟ ನನ್ನ ಫೇವರೇಟ್ ಆಗಿತ್ತು. 75 ವರ್ಷಗಳ ಸುದೀರ್ಘ ಇತಿಹಾಸವಿರುವ ಪತ್ರಿಕೆ ಆರಂಭಿಸುತ್ತಿರುವ ಪ್ರಶಸ್ತಿಯ ನಾಮನಿರ್ದೇಶನದಲ್ಲಿ ನನ್ನ ಹೆಸರು ಇರುವುದು ಖುಷಿ ತಂದಿದೆ. ಸಿನಿಮಾ ಕ್ಷೇತ್ರದಲ್ಲಿ ದುಡಿಯುತ್ತಿರುವ ಪ್ರತಿಯೊಬ್ಬರಿಗೂ ಈ ಪ್ರಶಸ್ತಿ ಮತ್ತಷ್ಟು ಪ್ರೋತ್ಸಾಹ ನೀಡಲಿದೆ.

ಕಿರಣ್‌ರಾಜ್ ಕೆ., ನಿರ್ದೇಶಕ


ಸಮ್ಮಾನ ದೊಡ್ಡ ಮಟ್ಟದಲ್ಲಿ ಬೆಳೆಯಲಿ



ಪ್ರಜಾವಾಣಿ ಪತ್ರಿಕೆಯ ಫಾಂಟ್, ವಿನ್ಯಾಸ ನೋಡಿದ ತಕ್ಷಣ ಅದು 'ಪ್ರಜಾವಾಣಿ' ಎಂದು ಗೊತ್ತಾಗುತ್ತದೆ. ಅಷ್ಟರ ಮಟ್ಟಿಗೆ ಪತ್ರಿಕೆ ಮನಸ್ಸಿನಲ್ಲಿ ಉಳಿದಿದೆ. ನಮ್ಮನ್ನು ಬೆಳೆಸಿದ ಪತ್ರಿಕೆ ಇದು. ಇಂತಹ ಪತ್ರಿಕೆ ಪ್ರಶಸ್ತಿ ನೀಡುತ್ತಿದೆ ಎಂಬುದು ಹೆಮ್ಮೆಯ ಸಂಗತಿ. ಇದೊಂದು ಪ್ರೋತ್ಸಾಹ ನೀಡಿದಂತೆ. ಗಿರೀಶ್ ಕಾಸರವಳ್ಳಿಯವರಂತಹ ಮೇರು ನಿರ್ದೇಶಕರ ತೀರ್ಪುಗಾರರ ತಂಡ ಅತ್ಯಂತ ಅರ್ಹರನ್ನು ಆಯ್ಕೆ ಮಾಡಲಿದೆ. ಯಾವುದೇ ಚಿತ್ರಕ್ಕೆ ಪ್ರಶಸ್ತಿ ಬಂದರೂ ಇಡೀ ಚಿತ್ರರಂಗಕ್ಕೆ ಒಳ್ಳೊಳ್ಳೆ ವಿಷಯಗಳನ್ನು ಹೇಳುವ ಹುಮ್ಮಸ್ಸು ಬರುತ್ತದೆ. ಯುವ ನಿರ್ದೇಶಕರಿಗೆ ಒಂದು ರೀತಿಯ ಉತ್ತೇಜನ ಸಿಗುತ್ತದೆ. ಈ ಸಮ್ಮಾನ ದೊಡ್ಡ ಮಟ್ಟದಲ್ಲಿ ಬೆಳೆಯಲಿ.

ಶಿವಧ್ವಜ್, ನಟ, ನಿರ್ದೇಶಕ

ಪ್ರಶಸ್ತಿಗಾಗಿ ಎಲ್ಲರೂ ಕಾಯುವಂತಾಗಲಿ



ಪತ್ರಿಕೆ 75 ವರ್ಷಗಳನ್ನು ಪೂರೈಸುತ್ತಿರುವುದಕ್ಕೆ ಅಭಿನಂದನೆಗಳು. ಬಹುಶಃ ಶುಕ್ರವಾರದ ಸಿನಿಮಾ ಪುರವಣಿ ಮುದ್ರಣದ ಗುಣಮಟ್ಟ ಕನ್ನಡದಲ್ಲೇ ಅತ್ಯುತ್ತಮ. ನಾವು ಚಿತ್ರೀಕರಿಸಿದ ಸಿನಿಮಾಗಳ ಛಾಯಾಚಿತ್ರಗಳನ್ನು ಆ ಗುಣಮಟ್ಟದ ಪ್ರಿಂಟ್‌ನಲ್ಲಿ ನೋಡುವುದೇ ಸಂಭ್ರಮ. ಈ ಪತ್ರಿಕೆಯಲ್ಲಿ ಏನೇ ಬಂದರೂ ಅದು ಸತ್ಯವಾಗಿರುತ್ತದೆ ಎಂಬುದು ಆ ಕಾಲದಿಂದಲೂ ಸಾಬೀತಾಗಿದೆ. ಹಾಗಾಗಿಯೇ ಇದೊಂದು ವಿಶ್ವಾಸಾರ್ಹ ಪತ್ರಿಕೆ. ಇಂತಹ ಪತ್ರಿಕೆಯ ಸಿನಿ ಸಮ್ಮಾನ ಕನ್ನಡದ ಚಿತ್ರರಂಗದ ಮಟ್ಟಿಗೆ ದೊಡ್ಡ ಪ್ರಶಸ್ತಿಯಾಗಲಿದೆ. ಸರ್ಕಾರ ಪ್ರಶಸ್ತಿ ಬಿಟ್ಟರೆ ಕನ್ನಡದಲ್ಲಿ ಗುರುತಿಸಿಕೊಳ್ಳುವಂತಹ ಪ್ರಶಸ್ತಿ ಕನ್ನಡದಲ್ಲಿ ಇಲ್ಲ. ಸಾಕಷ್ಟು ಪ್ರಶಸ್ತಿಗಳ ಗುಣಮಟ್ಟ ಜನರಿಗೇ ತಿಳಿಯುತ್ತದೆ. ಈ ಸಮ್ಮಾನ ಅತ್ಯಂತ ಪಾರದರ್ಶಕವಾಗಿದೆ. ಅರ್ಹ ತೀರ್ಪುಗಾರರ ಮಂಡಳಿ ಇದೆ. ಆಯ್ಕೆ ಪ್ರಕ್ರಿಯೆ ಉತ್ತಮವಾಗಿದೆ. 75 ವರ್ಷದಲ್ಲಿ ತನ್ನನ್ನು ತಾನು ಸಾಬೀತು ಮಾಡಿಕೊಂಡ ಪತ್ರಿಕೆ ನೀಡುವ ಪ್ರಶಸ್ತಿಗೆ ಅತ್ಯಂತ ಮೌಲ್ಯವಿದೆ.

ಸತ್ಯ ಹೆಗಡೆ, ಛಾಯಾಗ್ರಾಹಕ

ಶಾಲೆಯಲ್ಲಿ ಪತ್ರಿಕೆ ಓದುತ್ತಿದ್ದೆವು



ಹೈಸ್ಕೂಲ್‌ನಿಂದ 'ಪ್ರಜಾವಾಣಿ' ಜೊತೆಗಿನ ನಂಟಿದೆ. ನಮ್ಮ ಶಾಲೆಗೆ 'ಡೆಕ್ಕನ್ ಹೆರಾಲ್ಡ್' ಪತ್ರಿಕೆ ಬರುತ್ತಿತ್ತು. ಅದರ ಜೊತೆಗೆ 'ಪ್ರಜಾವಾಣಿ' ಪತ್ರಿಕೆಯೂ ಬರುತ್ತಿತ್ತು. ಆಂಗ್ಲಮಾಧ್ಯಮ ಶಾಲೆಯಾದರೂ ಬೆಳಗಿನ ಪ್ರಾರ್ಥನೆ ನಂತರ 'ಡೆಕ್ಕನ್' ಜೊತೆಗೆ 'ಪ್ರಜಾವಾಣಿ' ಪತ್ರಿಕೆಯ ಮುಖ್ಯಾಂಶಗಳನ್ನು ಓದುತ್ತಿದ್ದೆವು. ನಟನೆಗೆ ಬಂದ ಈ ನಂಟು ಇನ್ನಷ್ಟು ಹೆಚ್ಚಾಯಿತು. ಪತ್ರಿಕೆ ನಡೆಸುವ 'ಭೂಮಿಕಾ' ಕ್ಲಬ್‌ನ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದೆ. ಸಾಹಿತ್ಯಿಕವಾಗಿ ಕನ್ನಡದಲ್ಲಿ ಬಹಳ ಗಟ್ಟಿಯ ಧ್ವನಿ 'ಪ್ರಜಾವಾಣಿ'. ಪತ್ರಿಕೆಯು ಈಗ ಸಿನಿಮಾರಂಗಕ್ಕೆ ಪ್ರತ್ಯೇಕವಾದ ಪ್ರಶಸ್ತಿ ನೀಡಲು ಮುಂದಾಗಿರುವುದು ಖುಷಿಯ ಕೆಲಸ. ಆಯ್ಕೆ ಪ್ರಕ್ರಿಯೆಯೇ ವಿಭಿನ್ನವಾಗಿದೆ. ಪ್ರಶಸ್ತಿ ಕೂಡ ಪತ್ರಿಕೆಯಷ್ಟೇ ವಿಶ್ವಾಸಾರ್ಹವಾಗಿರುತ್ತದೆ ಎಂಬ ನಂಬಿಕೆ ಇದೆ.

ರಂಜನಿ ರಾಘವನ್, ನಟಿ

ತೆರೆ ಮೇಲೂ ಸಿಂಹಪ್ರಿಯಾ



ದಿಗಂತ್, ಹರಿಪ್ರಿಯಾ, ವಸಿಷ್ಠ ಸಿಂಹ

ರಿಯಲ್ ಲೈಫ್‌ನ ಜೋಡಿ ನಟ ವಸಿಷ್ಠ ಸಿಂಹ ಹಾಗೂ ಹರಿಪ್ರಿಯ ಇದೇ ಮೊದಲ ಸಲ ತೆರೆಮೇಲೆಯೂ ಒಂದಾಗಿದ್ದಾರೆ. ಸಾವಿನ ರಹಸ್ಯವನ್ನು ಭೇದಿಸುವ 'ಯದಾ ಯದಾ ಹಿ' ಚಿತ್ರದಲ್ಲಿ ಜೊತೆಯಾಗಿ ನಟಿಸಿದ್ದಾರೆ.

ಇತ್ತೀಚೆಗಷ್ಟೆ ಚಿತ್ರದ ಟ್ರೇಲರ್ ಬಿಡುಗಡೆಗೊಂಡಿದ್ದು, ನಟ ದಿಗಂತ್ ಕೂಡ ಮೊದಲ ಸಲ ಪೊಲೀಸ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ತೆಲುಗು ಮೂಲದ ಅಶೋಕ ತೇಜ ನಿರ್ದೇಶನದ ಚಿತ್ರ ಜೂನ್ 2ರಂದು ಈ ಚಿತ್ರ ರಾಜ್ಯದಾದ್ಯಂತ ತೆರೆಕಾಣುತ್ತಿದ್ದು, ಶಾಲಿನಿ ಎಂಟರ್‌ಪ್ರೈಸಸ್ ಮೂಲಕ ಜಾಕ್ ಮಂಜು ಅವರು ಚಿತ್ರವನ್ನು ಬಿಡುಗಡೆ ಮಾಡುತ್ತಿದ್ದಾರೆ.

ಚಿತ್ರದ ಟೈಟಲ್ ಸಾಂಗ್‌ಗೆ ವಸಿಷ್ಠ ಸಿಂಹ ಹಾಗೂ ಹರಿಪ್ರಿಯ ದನಿಯಾಗಿದ್ದಾರೆ. ಇದೊಂದು ತೆಲಗಿನ 'ಎವರು' ಸಿನಿಮಾದ ರಿಮೇಕ್ ಇದಾಗಿದ್ದು, ಅಲ್ಲಿ ನಟಿ ರೆಜಿನಾ ಅವರು ನಿರ್ವಹಿಸಿದ್ದ ಪಾತ್ರವನ್ನು, ಇಲ್ಲಿ ಹರಿಪ್ರಿಯಾ ಅವರು ಮಾಡಿದ್ದಾರೆ. ಹಿರಿಯ ನಟ ಅವಿನಾಶ್ ಕೂಡ ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ.

'55 ದಿನಗಳ ಕಾಲ ಚಿತ್ರದ ಚಿತ್ರೀಕರಣ ನಡೆದಿದೆ. ಕೊಲೆಗಾರನನ್ನು ಪತ್ತೆ ಹಚ್ಚುವುದೇ ಚಿತ್ರದ ಕುತೂಹಲಕರ ಜರ್ನಿಯಾಗಿದೆ. ಮೂರು ಪ್ರಮುಖ ಪಾತ್ರಧಾರಿಗಳ ಮೇಲೂ ಕಥೆ ಸಾಗುತ್ತದೆ' ಎಂದು ನಿರ್ದೇಶಕ ಅಶೋಕ್ ತೇಜ ಹೇಳಿದರು.

'ನಾನು ಒಬ್ಬ ಪೊಲೀಸ್ ಅಧಿಕಾರಿ ಆಗಿ ಇಲ್ಲಿ ಕಾಣಿಸಿಕೊಂಡಿದ್ದೇನೆ. ನನ್ನ ಪಾತ್ರಕ್ಕೆ ಮತ್ತೊಂದು ಶೇಡ್ ಇದೆ. ತೆಲುಗಿನ ಪ್ರಸಿದ್ಧ ಕಾದಂಬರಿಯನ್ನಾಧರಿಸಿ ಈ ಸಿನಿಮಾ ಮಾಡಿದ್ದಾರೆ' ಎಂದು ದಿಗಂತ್ ತಿಳಿಸಿದರು.

ಚಿತ್ರದಲ್ಲಿ ಒಟ್ಟು 3 ಹಾಡುಗಳಿದ್ದು, ಶ್ರೀಚರಣ್ ಪಾಕಾಲ ಅವರ ಸಂಗೀತ ನಿರ್ದೇಶನವಿದೆ. ❖

'ಡಾಲರ್ಸ್‌ಪೇಟೆ' ದರೋಡೆ ಕಥೆ!


ಚಂದನವನದಲ್ಲೀಗ ಹೊಸ ಪ್ರತಿಭೆಗಳ ಕಾಲ. ವಿಭಿನ್ನವಾದ ಕಥಾಹಂದರವನ್ನು ಹೊತ್ತು ಹಲವು ನಿರ್ದೇಶಕರು ತೆರೆ ಮೇಲೆ ಬರುತ್ತಿದ್ದು, ಇದಕ್ಕೆ ಹೊಸ ಸೇರ್ಪಡೆ 'A day in ಡಾಲರ್ಸ್‌ಪೇಟೆ'.

'ಮಾಫ್ಟಿ', 'ಮದಗಜ' ಹೀಗೆ ಹಲವು ಸಿನಿಮಾಗಳಲ್ಲಿ ಸಹಾಯಕ ನಿರ್ದೇಶಕನಾಗಿ ಕಾರ್ಯನಿರ್ವಹಿಸಿದ್ದ ಮೋಹನ್ ಎನ್. ಮುನಿನಾರಾಯಣಪ್ಪ ನಿರ್ದೇಶನದ ಈ ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಯಾಗಿದೆ. ದರೋಡೆ ಹಿಂದಿನ ರೋಚಕ ಕಥೆಯನ್ನು ಟೀಸರ್ ಬಿಚ್ಚಿಟ್ಟಿದೆ. ಈಗಾಗಲೇ ಚಿತ್ರೀಕರಣ ಮುಗಿಸಿರುವ ಚಿತ್ರತಂಡ ಟೀಸರ್ ರಿಲೀಸ್ ಮಾಡುವ ಮೂಲಕ ಪ್ರಚಾರ ಕಾರ್ಯಕ್ಕೆ ಚಾಲನೆ ನೀಡಿದೆ.

'ಡಾಲರ್ಸ್‌ಪೇಟೆ ಸತ್ಯ ಘಟನೆಯಾಧಾರಿತ ಚಿತ್ರ. ತಮಿಳುನಾಡಿನ ಬ್ಯಾಂಕ್ ಒಂದರಲ್ಲಿ ಬ್ಯಾಂಕ್ ಮ್ಯಾನೇಜರ್ ಒಬ್ಬರ ತಪ್ಪಿನಿಂದ ₹13 ಕೋಟಿ 100 ಜನರ ಖಾತೆ ಸೇರುತ್ತದೆ. ಅದು ಹೇಗೆ? ಏನು? ಎನ್ನುವುದರ ಸುತ್ತ ಸಿನಿಮಾ ಸಾಗುತ್ತದೆ. ಇಡೀ ಸಿನಿಮಾವನ್ನು ಒಂದು ಪಾತ್ರದ ಮೇಲೆ ಡೆವಲಪ್ ಮಾಡಿಲ್ಲ. ಇದೊಂದು ಹೈಪರ್ ಲಿಂಕ್ ಹಾಗೂ ಡಾರ್ಕ್ ಕಾಮಿಡಿ ಥ್ರಿಲ್ಲರ್ ಸಿನಿಮಾ. ಶೇ 50ರಷ್ಟು ಸಿನಿಮಾ ಬ್ಯಾಂಕ್ ಒಳಗೆ ಚಿತ್ರೀಕರಣಗೊಂಡಿದೆ' ಎನ್ನುತ್ತಾರೆ ನಿರ್ದೇಶಕ ಮೋಹನ್.

ಈ ಸಿನಿಮಾದಲ್ಲಿ 'ಲೂಸಿಯಾ' ಪವನ್ ಪತ್ನಿ ಸೌಮ್ಯ ಜಗನ್ ಮೂರ್ತಿ, 'ಮೆಟ್ರೋ ಸಾಗಾ' ಖ್ಯಾತಿಯ ಆಕರ್ಷ್ ಕಮಲ, ವೆಂಕಟ್, ರಾಜ್ ಮುಖ್ಯಪಾತ್ರದಲ್ಲಿ ಅಭಿನಯಿಸಿದ್ದು, 'ದಿಯಾ' ಖ್ಯಾತಿಯ ಪೃಥ್ವಿ ಅಂಬರ್ ಅತಿಥಿ ಪಾತ್ರದಲ್ಲಿದ್ದಾರೆ. ಉಳಿದಂತೆ ದತ್ತು ಬಣಕರ್, ಕೌಶಿಲ್, ರಾಘವೇಂದ್ರ, ಹೊನ್ನವಳ್ಳಿ, ಡ್ರಾಮಾ ಜೂನಿಯರ್ಸ್ ಮಹೇಂದ್ರ ಒಳಗೊಂಡ ತಾರಾಬಳಗ ಚಿತ್ರದಲ್ಲಿದೆ.

ಸೂರಜ್ ಜೋಯಿಸ್ ಸಂಗೀತ ನಿರ್ದೇಶನ, ಆನಂದ್ ಸುಂದರೇಶ ಛಾಯಾಗ್ರಹಣ, ಮಹೇಶ್ ತೊಗಟ್ಟ ಸಂಕಲನ, ಅರ್ಜುನ್ ರಾಜ್ ಮತ್ತು ನರಸಿಂಹ ಸಾಹಸ ನಿರ್ದೇಶನ, ರಮೇಶ್ ಎಸ್, ಮನೋಹರ ಬರವಣಿಗೆ ಸಿನಿಮಾಕ್ಕಿದೆ. ಪೆಂಟ್ರಿಕ್ಸ್ ಎಂಟರ್‌ಟೇನ್‌ಮೆಂಟ್ ಬ್ಯಾನರ್‌ನಡಿ ಪೂಜಾ ಟಿ.ವೈ ಈ ಸಿನಿಮಾವನ್ನು ನಿರ್ಮಾಣ ಮಾಡಿದ್ದಾರೆ. ❖



ಪೃಥ್ವಿ ಅಂಬರ್

ದಾವಣಗೆರೆ: 375 ಎಕರೆ ಭತ್ತದ ಬೆಳೆ ಹಾನಿ • ನಾಪೋಕ್ಲುವಿನ ಕಕ್ಕಬ್ಬೆ ಹೊಳೆ ನೀರಿನ ಹರಿವು ಏರಿಕೆ

ಮಳೆ: ನೆಲಕಚ್ಚಿದ ಬೆಳೆ, ಕುಸಿದ ಮನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕೊಡಗು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಗುರುವಾರ ಉತ್ತಮ ಮಳೆಯಾಗಿದೆ. ಬುಧವಾರ ರಾತ್ರಿ ಸುರಿದ ಭಾರಿ ಮಳೆಯಿಂದಾಗಿ ದಾವಣಗೆರೆ ಜಿಲ್ಲೆಯ ವಿವಿಧೆಡೆ ದೊಡ್ಡ ಪ್ರಮಾಣದಲ್ಲಿ ಬೆಳೆ ಹಾನಿಯಾಗಿದೆ.

ದಾವಣಗೆರೆ ವರದಿ: ಬುಧವಾರ ರಾತ್ರಿ ಸುರಿದ ಧಾರಾಕಾರ ಮಳೆಗೆ ದಾವಣಗೆರೆ ಹಾಗೂ ಹರಿಹರ ತಾಲ್ಲೂಕಿನ ಕೆಲವೆಡೆ ಅಪಾರ ಪ್ರಮಾಣದ ಬೆಳೆಹಾನಿಯಾಗಿದೆ. ಚನ್ನಗಿರಿಯಲ್ಲಿ 8 ಸೆಂ.ಮೀ ಮಳೆಯಾಗಿದೆ.

ಹರಿಹರ ತಾಲ್ಲೂಕಿನ ದೇವರ ಬೆಳಕೆರೆ ಗ್ರಾಮದಲ್ಲಿ 100 ಎಕರೆ, ಕಡ್ಲೆಗೊಂದಿಯಲ್ಲಿ 200 ಎಕರೆ, ಮಿಟ್ಲಕಟ್ಟೆ ಗ್ರಾಮದಲ್ಲಿ 25 ಎಕರೆ, ಕುಣೆಬೆಳಕೆರೆಯಲ್ಲಿ 50 ಎಕರೆ ಸೇರಿ ಒಟ್ಟು 375 ಎಕರೆಯಲ್ಲಿ ಬೆಳೆದು ನಿಂತಿದ್ದ ಭತ್ತದ ಬೆಳೆಗೆ ಹಾನಿಯಾಗಿದೆ.

ಚನ್ನಗಿರಿ ತಾಲ್ಲೂಕಿನಲ್ಲಿ 200 ಎಕರೆ ಭತ್ತ, ಹೊನ್ನಾಳಿಯಲ್ಲಿ 1 ಎಕರೆ ಭತ್ತ, ಜಗಳೂರಿನಲ್ಲಿ 8 ಎಕರೆ ಬಾಳೆ ಹಾಗೂ 4 ಎಕರೆ ಅವರೆ ಬೆಳೆಗೆ ಹಾನಿಯಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ದಾವಣಗೆರೆ ತಾಲ್ಲೂಕಿನ ಜರೆಕಟ್ಟೆ, ಹರಿಹರ ತಾಲ್ಲೂಕಿನ ಮಿಟ್ಲಕಟ್ಟೆ, ಸಾಲಕಟ್ಟೆ ಸೇರಿ ಕೆಲವಡೆ ಬಿರುಗಾಳಿ ಸಹಿಯ ಮಳೆಯಾಗಿದೆ. ಇಲ್ಲಿ ಭತ್ತ ಕಟಾವಿಗೆ ರೈತರು ಸಿದ್ಧತೆ ನಡೆಸಿದ್ದರು. ಜರೆಕಟ್ಟೆಯಲ್ಲಿ ವಿದ್ಯುತ್ ಕಂಬಗಳು ಉರುಳಿದ್ದವು.

ಚಿಕ್ಕಜಾಜೂರು (ಚಿತ್ರದುರ್ಗ) ವರದಿ: ಜಿಲ್ಲೆಯಲ್ಲಿ ಬುಧವಾರ ಸಂಜೆ ಉತ್ತಮ ಮಳೆಯಾಗಿದ್ದು, ಬಿ.ದುರ್ಗದಲ್ಲಿ 7 ಸೆಂ.ಮೀ., ಚಿಕ್ಕಜಾಜೂರಿನಲ್ಲಿ 2 ಸೆಂ.ಮೀ. ಮಳೆ ಸುರಿದಿದೆ. ನೂರಾರು ಅಡಿಕೆ ಮರಗಳು, ತೆಂಗಿನ ಮರಗಳು, ಅಸಂಖ್ಯ ಕಾಡು ಮರಗಳು ಉರುಳಿವೆ. 15ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಧರೆಗುರುಳಿದ್ದು, ವಿದ್ಯುತ್ ವ್ಯತ್ಯಯವಾಗಿದೆ.


ಮಡಿಕೇರಿ ವರದಿ: ಕೊಡಗು ಜಿಲ್ಲೆಯಲ್ಲಿ ಗುರುವಾರವೂ ಮಳೆ ಮುಂದುವರಿದಿದೆ. ನಾಪೋಕ್ಲು, ಗೋಣಿಕೊಪ್ಪಲಿನಲ್ಲಿ ಧಾರಾಕಾರ ಮಳೆಯಾಗಿದೆ. ಕೊಯನಾಡಿನ ಕಿಂಡಿ ಅಣೆಕಟ್ಟೆಗೆ ಸಿಲುಕಿದ್ದ ಮರದ ದಿಮ್ಮಿಗಳನ್ನು ತೆರವುಗೊಳಿಸಲಾಗಿದೆ.

ಮಡಿಕೇರಿ ತಾಲ್ಲೂಕಿನ ಹೋದಕಾನ ಗ್ರಾಮದಲ್ಲಿ ಮನೆಯೊಂದು ಕುಸಿದಿದೆ. ಕಂದಾಯ ಇಲಾಖೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದರು. ನಾಪೋಕ್ಲು ಸಮೀಪದ ಕಕ್ಕಬ್ಬೆ ಹೊಳೆಯಲ್ಲಿ ನೀರಿನ ಹರಿವು ಹೆಚ್ಚಿದೆ.

ಹಿರೀಸಾವೆ (ಹಾಸನ) ವರದಿ: ಹೋಬಳಿಯ ಹೊನ್ನಮಾರನಹಳ್ಳಿ ಹಾಗೂ ಬಾಳಗಂಚಿ ಪಂಚಾಯಿತಿ ವ್ಯಾಪ್ತಿಯ ಬ್ಯಾಡರಹಳ್ಳಿಯಲ್ಲಿ ಬಿರುಗಾಳಿ, ಮಳೆಯಿಂದ ಕಂಬಗಳು ಮುರಿದು ಬಿದ್ದು ವಿದ್ಯುತ್ ಪೂರೈಕೆ ಸ್ಥಗಿತಗೊಂಡಿತ್ತು. ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲದಲ್ಲಿ ಬಿರುಗಾಳಿ, ಮಳೆಯಾಗಿದ್ದು, ಹಲವೆಡೆ ವಿದ್ಯುತ್ ಕಂಬಗಳು ಉರುಳಿವೆ.

ಚಿಕ್ಕಮಗಳೂರು ನಗರ ಮತ್ತು ಅಲ್ಲಂಪುರ, ಕೈಮರ, ರಾಂಪುರ ಸಹಿತ ವಿವಿಧೆಡೆಗಳಲ್ಲಿ ಉತ್ತಮ ಮಳೆಯಾಗಿದೆ.

ಮಂಗಳೂರು ನಗರದಲ್ಲಿಯೂ ಗುರುವಾರ ನಸುಕಿನಲ್ಲಿ ಸಾಧಾರಣ ಮಳೆಯಾಯಿತು.




ದಾವಣಗೆರೆ ತಾಲ್ಲೂಕು ಸಾಲಕಟ್ಟೆಯಲ್ಲಿ ಮಳೆಯಿಂದಾಗಿ ಹಾನಿಗೀಡಾಗಿರುವ ಭತ್ತದ ಬೆಳೆ (ಎಡ ಚಿತ್ರ). ಮಡಿಕೇರಿ ತಾಲ್ಲೂಕು ಹೊದಕಾನದಲ್ಲಿ ಕಂಬಟ್ಟ ಅವರ ಮನೆ ಮಳೆಗೆ ಗುರುವಾರ ಕುಸಿದಿರುವುದು –ಪ್ರಜಾವಾಣಿ ಚಿತ್ರಗಳು

ರಾಜ್ಯದ ವಿವಿಧೆಡೆ ಇಂದು ಮಳೆ

ಬೆಂಗಳೂರು: ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಕೆಲವು ಕಡೆ, ಉತ್ತರ ಒಳನಾಡಿನ ಒಂದೆರಡು ಕಡೆ ಶುಕ್ರವಾರವೂ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಒಳನಾಡಿನ ಒಂದೆರಡು ಕಡೆ ಬಿರುಗಾಳಿ ಸಹಿತ ಗುಡುಗಿನಿಂದ ಕೂಡಿದ ಮಳೆಯಾಗುವ ಸಾಧ್ಯತೆಯಿದ್ದು, ಗಾಳಿಯ ವೇಗವು ಒಳನಾಡಿನಲ್ಲಿ ಗಂಟೆಗೆ 30 ರಿಂದ 40 ಕಿ.ಮೀ. ಇರಲಿದೆ. ಗರಿಷ್ಠ ಉಷ್ಣಾಂಶವು ಕರಾವಳಿಯ ಕೆಲವು ಕಡೆ ಮತ್ತು ಒಳನಾಡಿನ ಒಂದೆರಡು ಕಡೆ ಸಾಮಾನ್ಯಕ್ಕಿಂತ 2–3 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗುವ ಸಾಧ್ಯತೆಯಿದೆ ಎಂದು ಇಲಾಖೆ ಹೇಳಿದೆ.

ಬೆಂಗಳೂರಿನಲ್ಲಿ ಸಂಜೆ ಅಥವಾ ರಾತ್ರಿಯ ವೇಳೆ ಬಿರುಗಾಳಿ, ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ. ಇಲ್ಲಿ ಗಾಳಿಯ ವೇಗವು ಗಂಟೆಗೆ 30ರಿಂದ 40 ಕಿ.ಮೀ. ತಲುಪಲಿದೆ. ಮುಂದಿನ 5 ದಿನ ಕರಾವಳಿ ಹಾಗೂ ದಕ್ಷಿಣ ಒಳನಾಡಿನಲ್ಲಿ ಮಳೆ ಮುಂದುವರಿಯಲಿದೆ. ಉತ್ತರ ಒಳನಾಡಿನಲ್ಲಿ ಒಣಹವೆ ಕಾಣಿಸಿಕೊಳ್ಳುವ ಸಾಧ್ಯತೆಯಿದೆ ಎಂದು ಇಲಾಖೆ ಹೇಳಿದೆ.

ಗುರುವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಹಿಂದಿನ 24 ಗಂಟೆಯ ಅವಧಿಯಲ್ಲಿ ಚಿತ್ರದುರ್ಗದ ಬಿ. ದುರ್ಗದಲ್ಲಿ ಗರಿಷ್ಠ (7 ಸೆಂ.ಮೀ.) ಮಳೆಯಾಗಿದೆ. ರಾಯಚೂರಿನಲ್ಲಿ ಗರಿಷ್ಠ ಉಷ್ಣಾಂಶ (39.8 ಡಿಗ್ರಿ ಸೆಲ್ಸಿಯಸ್) ದಾಖಲಾಗಿದೆ.

ಶಿಥಿಲ ಶಾಲಾ ಕಟ್ಟಡ ಬಳಸದಿರಲು ಸೂಚನೆ

ಬೆಂಗಳೂರು: ಶಿಥಿಲಾವಸ್ಥೆಯಲ್ಲಿರುವ ಶಾಲಾ ಕಟ್ಟಡಗಳನ್ನು ಬಳಸದಂತೆ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ರಾಜ್ಯದ ಬಹುತೇಕ ಭಾಗಗಳಲ್ಲಿ ಮಳೆ ಆಗುತ್ತಿರುವುದರಿಂದ ಶಾಲೆಗಳಲ್ಲಿ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಇಲಾಖೆ ಆಯುಕ್ತರು ಹಲವು ಸೂಚನೆಗಳನ್ನು ನೀಡಿದ್ದಾರೆ.

ರಾಜ್ಯಾದ್ಯಂತ ಮೇ 29 ರಿಂದ ಶಾಲೆಗಳು ಮತ್ತೆ ಪ್ರಾರಂಭವಾಗಲಿವೆ. ಆದ್ದರಿಂದ, ಶಿಥಿಲಾವಸ್ಥೆಯಲ್ಲಿರುವ ಹಲವು ಶಾಲಾ ಕಟ್ಟಡಗಳು ಭಾರಿ ಮಳೆಯಿಂದ ಹಾನಿಗೊಳಗಾಗುವ ಅಥವಾ ಕುಸಿಯುವ ಸಂಭವವಿರುತ್ತದೆ. ಅಂತಹ ಶಾಲಾ ಕಟ್ಟಡಗಳನ್ನು ಬಳಸಬಾರದು ಎಂದು ಸುತ್ತೋಲೆಯಲ್ಲಿ ವಿವರಿಸಿದ್ದಾರೆ.

ಶಾಲೆಯ ಸಮೀಪ ಸುಸ್ಥಿತಿಯಲ್ಲಿರುವ ಕಟ್ಟಡಗಳನ್ನು ಗುರುತಿಸಿ ಪರ್ಯಾಯ ವ್ಯವಸ್ಥೆಗಳನ್ನು ಕೈಗೊಳ್ಳಬೇಕು. ಜತೆಗೆ, ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳ ಬಳಿ ಮಕ್ಕಳು ಸುತ್ತಾಡದಂತೆಯೂ ಎಚ್ಚರವಹಿಸಬೇಕು. ಇಂತಹ ಕಟ್ಟಡಗಳನ್ನು ನೆಲಸಮಗೊಳಿಸಲು ಇಲಾಖೆಯ ಅಧಿಕಾರಿಗಳು ಕ್ರಮಕೈಗೊಳ್ಳಬೇಕು ಎಂದು ಸೂಚಿಸಿದ್ದಾರೆ.

ಪ್ರವಾಹ ಉಂಟಾದರೆ ಅಥವಾ ಶಾಲಾ ಆವರಣ ಮತ್ತು ಕೊಠಡಿಗಳು ಜಲಾವೃತಗೊಂಡರೆ ಮುಖ್ಯ ಶಿಕ್ಷಕರು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ಡಿಡಿಪಿಐ ಅವರ ಪೂರ್ವಾನುಮತಿ ಪಡೆದು ಶಾಲೆಗೆ ರಜೆ ಘೋಷಿಸಬೇಕು. ರಜಾ ಅವಧಿಯಲ್ಲಿನ ಪಾಠಗಳನ್ನು ಮುಂದಿನ ಸರ್ಕಾರಿ ರಜಾ ದಿನಗಳಲ್ಲಿ ಸರಿದೂಗಿಸುವಂತೆ ಸೂಚಿಸಿದ್ದಾರೆ.

ಮಂಡ್ಯದ ಬಳಿ ಸಿಡಿಲಿಗೆ ಜೋಡೆತ್ತು ಬಲಿ

ಮಂಡ್ಯ: ಜಿಲ್ಲೆಯ ವಿವಿಧೆಡೆ ಗುರುವಾರ ಬಿರುಗಾಳಿ ಸಹಿತ ಮಳೆಯಾಗಿದೆ. ಬಸರಾಳು ಹೋಬಳಿಯ ವಡ್ಡರಹಳ್ಳಿಯಲ್ಲಿ ಸಿಡಿಲಿಗೆ ಜೋಡೆತ್ತು ಬಲಿಯಾಗಿವೆ. ಮಳವಳ್ಳಿ, ಮದ್ದೂರು, ಭಾರತೀನಗರದಲ್ಲಿ ಗುಡುಗು, ಸಿಡಿಲು ಸಹಿತ ಮಳೆಯಾಗಿದೆ.

ರೈತ ಪ್ರೇಮ್‌ಕುಮಾರ್ ಎಂಬುವವರು ಉಳುಮೆ ನಂತರ ಎತ್ತುಗಳನ್ನು ಹೊಲದಲ್ಲೇ ಕಟ್ಟಹಾಕಿ ಮನೆಗೆ ತೆರಳಿದ್ದಾಗ ದುರ್ಘಟನೆ ನಡೆದಿದೆ.

ತಾಲ್ಲೂಕಿನ [illegible] ಮಳೆ ಆರಂಭವಾದಾಗ ಹೃದಯಾಘಾತದಿಂದ ಎತ್ತು ಅಸುನೀಗಿದೆ. ಶಾಸಕ ಗಣಿಗ ಪಿ.ರವಿಕುಮಾರ್ ಅವರು ಭೇಟಿ ನೀಡಿ, ಎತ್ತಿನ ಮಾಲೀಕ ಶಿವರಾಮು ಅವರಿಗೆ ₹20 ಸಾವಿರ ಪರಿಹಾರ ನೀಡಿದರು.

₹20 ಸಾವಿರ ಕೋಟಿ ಕಾಮಗಾರಿಗಳಿಗೆ ತಡೆ

ಒಂದನೇ ಪುಟದಿಂದ

‘ಜಲ ಸಂಪನ್ಮೂಲ ಇಲಾಖೆ ವ್ಯಾಪ್ತಿಯಲ್ಲಿರುವ ವಿಶ್ವೇಶ್ವರಯ್ಯ ಜಲ ನಿಗಮ, ಕರ್ನಾಟಕ ನೀರಾವರಿ ನಿಗಮ, ಕಾವೇರಿ ನೀರಾವರಿ ನಿಗಮ, ಕೃಷ್ಣಾ ಭಾಗ್ಯ ಜಲ ನಿಗಮ, ಇಂಧನ ಇಲಾಖೆ, ಲೋಕೋಪಯೋಗಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಜಲಜೀವನ್ ಮಿಷನ್ ಯೋಜನೆಯ ಅನುದಾನದ ಲಭ್ಯತೆ ಇಲ್ಲದೇ ಟೆಂಡರ್ ಪ್ರಕ್ರಿಯೆ ನಡೆಸಲಾಗಿದೆ. ಅನುದಾನದ ಕೊರತೆ, ಭೂಸ್ವಾಧೀನದ ತೊಂದರೆ ಇದ್ದರೂ ತರಾತುರಿಯಲ್ಲಿ ಟೆಂಡರ್ ನಡೆಸಿರುವ ದೂರುಗಳಿವೆ’ ಎಂದು ಟಿಪ್ಪಣಿಯಲ್ಲಿ ಉಲ್ಲೇಖಿಸಿದ್ದಾರೆ.

ತರಾತುರಿಯಲ್ಲಿ ನಿಯಮ ಉಲ್ಲಂಘಿಸಿ ಟೆಂಡರ್‌ಗಳನ್ನು ಕರೆಯಲಾಗಿದೆ. ಆ ಕಾಮಗಾರಿಗಳಿಗೆ ₹ 20,000 ಕೋಟಿ ವೆಚ್ಚಕ್ಕೆ ಅನುಮೋದನೆ ಆಗಿತ್ತು. ಕಾಮಗಾರಿಗಳು ಅವೈಜ್ಞಾನಿಕವಾಗಿದ್ದು, ಕೆಲವೆಡೆ ವ್ಯಾಪಕ ಅಕ್ರಮಗಳು ನಡೆದಿರುವ ದೂರುಗಳೂ ಇವೆ ಎಂದು ಹೇಳಿದ್ದಾರೆ.

ಈ ಎಲ್ಲ ಕಾಮಗಾರಿಗಳನ್ನೂ ಪರಿಶೀಲಿಸುವ ಅಗತ್ಯವಿದೆ. ಈ ಕಾರಣಕ್ಕಾಗಿ ಮುಂದಿನ ಆದೇಶದವರೆಗೆ ಈಗಾಗಲೇ ಆರಂಭವಾಗಿರುವ ಕಾಮಗಾರಿಗಳನ್ನು ಸ್ಥಗಿತಗೊಳಿಸಬೇಕು ಮತ್ತು ಟೆಂಡರ್ ಪ್ರಕ್ರಿಯೆಗಳನ್ನು ನಿಲ್ಲಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಚಿಸಿದ್ದಾರೆ.

ಗ್ರಾ.ಪಂ. ಅಧ್ಯಕ್ಷ, ಉಪಾಧ್ಯಕ್ಷ ಮೀಸಲಾತಿಗೆ ಮಾರ್ಗಸೂಚಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಎರಡೂವರೆ ವರ್ಷಗಳ ಮೊದಲ ಅವಧಿ ಪೂರ್ಣಗೊಳಿಸಿರುವ ಗ್ರಾಮ ಪಂಚಾಯಿತಿಗಳ ಎರಡನೇ ಅವಧಿಯ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯ ಮೀಸಲಾತಿ ನಿಗದಿಗೆ ರಾಜ್ಯ ಚುನಾವಣಾ ಆಯೋಗ ಗುರುವಾರ ಮಾರ್ಗಸೂಚಿ ಪ್ರಕಟಿಸಿದೆ.

ತಾಲ್ಲೂಕುವಾರು ಅನುಕ್ರಮವಾಗಿ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗಗಳ ಪ್ರವರ್ಗ–ಎ (ಬಿಸಿಎ–ಎ), ಹಿಂದುಳಿದ ವರ್ಗಗಳ ಪ್ರವರ್ಗ–ಬಿ (ಬಿಸಿಎ–ಬಿ), ಸಾಮಾನ್ಯ ಮಹಿಳೆ, ಸಾಮಾನ್ಯ ವರ್ಗಕ್ಕೆ ಮೀಸಲಾತಿ ನಿಗದಿಪಡಿಸಬೇಕು. ಆಯಾ ಪ್ರವರ್ಗದ ಅತಿ ಹೆಚ್ಚು ಸದಸ್ಯರನ್ನು ಒಳಗೊಂಡ ಗ್ರಾ. ಪಂ.ಗಳಪಟ್ಟಿ ಸಿದ್ಧಪಡಿಸಿ, ಅವರೋಹಣ ಕ್ರಮದಲ್ಲಿ ಅದೇ ಪ್ರವರ್ಗಗಳಿಗೆ ಮೀಸಲಿಡುತ್ತಾ ಬರಬೇಕೆಂದು ಹೇಳಲಾಗಿದೆ.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಚೆಕ್ ಅಥವಾ ಡಿ.ಡಿ.ರೂಪದಲ್ಲಿ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept. finc@printersmysore.co.inಗೆ ಮೇಲ್ ಕಳುಹಿಸಿ.

ಆನ್‌ಲೈನ್/ಚೆಕ್ ಮೂಲಕವೂ ಹಣ ವರ್ಗಾಯಿಸಬಹುದು. ₹1,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
Canara Bank, Cantonment Branch
A/c no. - **0404101200385**
IFSC code - **CNRB0000404**
MICR Code - **560015009**

ಸೂಚನೆ
ದಾನಿಗಳು ಲಕೋಟೆ ಮೇಲೆ ಶೈಕ್ಷಣಿಕ ನೆರವಿಗೆ ಕೊಡುಗೆ ಎಂದು ನಮೂದಿಸಬೇಕು

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್
ನಂ. 75, ಮಹಾತ್ಮ ಗಾಂಧಿ ರಸ್ತೆ
ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2023 ರ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಜತೆಗೆ ವಿಳಾಸ, ಮೊಬೈಲ್ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು. ಲಕೋಟೆಯ ಮೇಲೆ **‘ಶೈಕ್ಷಣಿಕ ನೆರವಿಗೆ ಅರ್ಜಿ’** ಎಂದು ಬರೆಯಬೇಕು.

ವಿದ್ಯಾರ್ಥಿಯ ಅನಿಸಿಕೆ

ಕಂಪ್ಯೂಟರ್ ಕೋರ್ಸ್‌ಗೆ ಸೇರಲು ಬಳಸಿಕೊಂಡೆ



‘ಪ್ರಜಾವಾಣಿ’ ಕೊಟ್ಟಿರುವ ವಿದ್ಯಾರ್ಥಿ ವೇತನವನ್ನು ನೋಟ್ ಬುಕ್ ಖರೀದಿಗೆ ಹಾಗೂ ಕಂಪ್ಯೂಟರ್ ಕೋರ್ಸ್‌ಗೆ ಸೇರಲು ಬಳಸಿಕೊಂಡೆ. ಕೆಲ ಪಠ್ಯಪುಸ್ತಕ ಖರೀದಿಗೂ ಅನುಕೂಲವಾಯಿತು. ಎಲ್ಲ ವಸ್ತುಗಳ ಬೆಲೆ ಏರಿಕೆಯ ಈ ಸಂದರ್ಭದಲ್ಲಿ ಕಷ್ಟದಲ್ಲಿರುವ ವಿದ್ಯಾರ್ಥಿಗಳಿಗೆ ಈ ಸಹಾಯ ನೆರವಾಗುತ್ತದೆ. ಈ ಪ್ರೋತ್ಸಾಹ ಹೀಗೆಯೇ ಮುಂದುವರಿಯಲಿ.

ಪ್ರಜ್ವಲ್, ಚಿಕ್ಕಮಗಳೂರು



ಸುಭಾಷಿತ

ಹಿಂಸಾಚಾರದ ಮೂಲಕ ನೀವು ಒಂದು ಸಮಸ್ಯೆಯನ್ನು ಬಗೆಹರಿಸಿರಬಹುದು. ಆದರೆ, ಅದರಿಂದ ಇನ್ನಷ್ಟು ಸಮಸ್ಯೆಗಳಿಗೆ ಬೀಜ ಬಿತ್ತಿರುತ್ತೀರಿ. **-ದಲೈಲಾಮ**

‘ಝೀರೊ ಟ್ರಾಫಿಕ್’ ಶಿಷ್ಟಾಚಾರ ಕೈಬಿಡಲು ಮುಖ್ಯಮಂತ್ರಿ ಸೂಚನೆ ಸ್ವಾಗತಾರ್ಹ

ತಮಗೆ ನೀಡಲಾಗಿರುವ ‘ಝೀರೊ ಟ್ರಾಫಿಕ್’ ಶಿಷ್ಟಾಚಾರವನ್ನು ಕೈಬಿಡಬೇಕು ಎಂದು ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪೊಲೀಸರಿಗೆ ನೀಡಿರುವ ಸೂಚನೆ ಸ್ವಾಗತಾರ್ಹ. ವಿಶೇಷವಾಗಿ ಬೆಂಗಳೂರಿನಲ್ಲಿ ವಾಹನಗಳಲ್ಲಿ ಓಡಾಡುವವರಿಗೆ ಇದರಿಂದ ಬಹುದೊಡ್ಡ ಅನುಕೂಲ ಆಗುತ್ತದೆ. ‘ಝೀರೊ ಟ್ರಾಫಿಕ್’ ಶಿಷ್ಟಾಚಾರದ ಪ್ರಕಾರ, ಮುಖ್ಯಮಂತ್ರಿ ಮತ್ತು ಅವರ ಬೆಂಗಾವಲು ಪಡೆ ಸಾಗುವ ರಸ್ತೆಗೆ ಅವರು ಸಂಚರಿಸುವುದಕ್ಕೂ ಮುಂಚಿತವಾಗಿ ಬೇರೆ ವಾಹನಗಳಿಗೆ ಪ್ರವೇಶ ತಡೆಯಲಾಗುತ್ತದೆ. ನಗರದ ವಾಹನ ದಟ್ಟಣೆಯ ರಸ್ತೆಗಳಲ್ಲಿ ಇದು ಅನ್ವಯ ಆಗುತ್ತದೆ. ಈ ವ್ಯವಸ್ಥೆಯಿಂದ ಸಾರ್ವಜನಿಕರಿಗೆ ಭಾರಿ ಅನನುಕೂಲ ಆಗುತ್ತದೆ. ಇದು ಅನಗತ್ಯವಾದ ತೊಂದರೆ. ಮುಖ್ಯಮಂತ್ರಿ ಅವರಲ್ಲದೆ, ರಾಜ್ಯಪಾಲರೂ ಈ ಸೌಲಭ್ಯ ಬಳಸುತ್ತಾರೆ. ಹಿಂದೆ ಉಪಮುಖ್ಯಮಂತ್ರಿ ಮತ್ತು ಗೃಹ ಸಚಿವರು ಕೂಡ ‘ಝೀರೊ ಟ್ರಾಫಿಕ್’ ಸೌಲಭ್ಯವನ್ನು ಬಳಸಿದ್ದುಂಟು. ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದಾಗ ಝೀರೊ ಟ್ರಾಫಿಕ್ ಸೌಲಭ್ಯ ಬೇಡ ಎಂದು ನಿರ್ದೇಶನ ನೀಡಿದ್ದರು. ಆದರೆ, ಅದು ಉಲ್ಲಂಘನೆ ಆಗಿದ್ದೇ ಹೆಚ್ಚು. ಏಕೆಂದರೆ, ಬೊಮ್ಮಾಯಿ ಅವರು ಖಾಸಗಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ತೆರಳುತ್ತಿದ್ದಾಗಲೂ ರಸ್ತೆಯನ್ನು ಪೊಲೀಸರು ಸಾರ್ವಜನಿಕರಿಗೆ ಬಂದ್ ಮಾಡುತ್ತಿದ್ದರು. ಜನರು ಅಪಾರ ಕಷ್ಟ ಅನುಭವಿಸುತ್ತಿದ್ದರು. ಹಾಗಾಗಿ, ‘ಝೀರೊ ಟ್ರಾಫಿಕ್’ಗೆ ಸಂಬಂಧಿಸಿ ನೀಡಿದ ನಿರ್ದೇಶನ ಕಟ್ಟುನಿಟ್ಟಾಗಿ ಪಾಲನೆ ಆಗುತ್ತದೆ ಎಂಬುದನ್ನು ಸಿದ್ದರಾಮಯ್ಯ ಅವರು ಖಚಿತಪಡಿಸಿಕೊಳ್ಳಬೇಕು. ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರೂ ಸಿದ್ದರಾಮಯ್ಯ ಅವರನ್ನು ಅನುಸರಿಸಿ, ‘ಝೀರೊ ಟ್ರಾಫಿಕ್’ ಶಿಷ್ಟಾಚಾರವನ್ನು ಕೈಬಿಡಬೇಕು. ಈ ಇಬ್ಬರು ಮತ್ತು ಇತರ ಗಣ್ಯರು ಸಂಚರಿಸುವಾಗ ಸಿಗ್ನಲ್‌ಗಳಲ್ಲಿ ‘ಗ್ರೀನ್ ಕಾರಿಡಾರ್’ ಸೌಲಭ್ಯ ಹೇಗೂ ಇದ್ದೇ ಇರುತ್ತದೆ. ಆದುದರಿಂದ ಈ 21ನೇ ಶತಮಾನದಲ್ಲಿಯೂ ‘ದೊರೆ’ಯ ಸಂಚಾರಕ್ಕಾಗಿ ಇತರ ಎಲ್ಲ ವಾಹನಗಳನ್ನು ತಡೆಯುವ ಊಳಿಗಮಾನ್ಯ ಧೋರಣೆಯನ್ನು ಕೈಬಿಡಬೇಕು.



‘ಝೀರೊ ಟ್ರಾಫಿಕ್’ಗೆ ಸಂಬಂಧಿಸಿ ನೀಡಿದ ನಿರ್ದೇಶನ ಕಟ್ಟುನಿಟ್ಟಾಗಿ ಪಾಲನೆ ಆಗುತ್ತದೆ ಎಂಬುದನ್ನು ಮುಖ್ಯಮಂತ್ರಿ ಖಚಿತಪಡಿಸಿಕೊಳ್ಳಬೇಕು

ಜಿಲ್ಲೆಗಳಲ್ಲಿ ಕೂಡ ಈ ನಿರ್ದೇಶನವನ್ನು ಅನುಸರಿಸಬೇಕು. ಜಿಲ್ಲೆಗೆ ಭೇಟಿ ನೀಡಿದ ಸಚಿವರನ್ನು ಸಂತೃಪ್ತಿಪಡಿಸಲು ಅಲ್ಲಿನ ಪೊಲೀಸರು ತುದಿಗಾಲಲ್ಲಿ ನಿಂತಿರುತ್ತಾರೆ. ಸಾರ್ವಜನಿಕ ವಾಹನಗಳಿಗೆ ಅನಗತ್ಯ ನಿರ್ಬಂಧಗಳನ್ನು ಹೇರಿ ಅತಿರೇಕ ಉಂಟು ಮಾಡುತ್ತಾರೆ. ಜಿಲ್ಲೆಗಳಿಗೆ ಸಚಿವರು ಮತ್ತು ಇತರ ಗಣ್ಯರ ಭೇಟಿಯು ಜನಜೀವನವನ್ನು ಅಸ್ತವ್ಯಸ್ತಗೊಳಿಸುತ್ತದೆ. ಜನರಿಗೆ ರೇಜಿಗೆ ಹುಟ್ಟಿಸುತ್ತದೆ. ನಿಗಮ ಅಥವಾ ಮಂಡಳಿಗೆ ಅಧ್ಯಕ್ಷರಾಗಿ ನೇಮಕವಾಗಿ ಸಂಪುಟ ದರ್ಜೆಯ ಸ್ಥಾನ ಪಡೆಯುವ ಶಾಸಕರು, ಬೆಂಗಾವಲು ವಾಹನಕ್ಕೆ ಬೇಡಿಕೆ ಇರಿಸುತ್ತಾರೆ. ಹಾಗೆಯೇ ಮುಖ್ಯಮಂತ್ರಿ ಕಾರ್ಯಾಲಯ ಮತ್ತು ಸರ್ಕಾರದಲ್ಲಿ ಸಂಪುಟ ದರ್ಜೆ ಸ್ಥಾನಮಾನವಿರುವ ಹುದ್ದೆ ಪಡೆಯುವವರು ಕೂಡ ಈ ಸೌಲಭ್ಯ ಬೇಕು ಎನ್ನುತ್ತಾರೆ. ಈ ಎಲ್ಲವೂ ಕೊನೆಯಾಗಬೇಕಿದೆ. ಪೊಲೀಸ್ ಇಲಾಖೆಯಲ್ಲಿ ಸಿಬ್ಬಂದಿಯ ಕೊರತೆ ಇದೆ. ಇಂತಹ ಶಿಷ್ಟಾಚಾರಗಳಿಗಾಗಿ ಸಿಬ್ಬಂದಿಯನ್ನು ನಿಯೋಜಿಸಿದರೆ ಇಲಾಖೆಗೆ ಇನ್ನಷ್ಟು ಹೊರೆಯಾಗುತ್ತದೆ. ಸರ್ಕಾರದ ಬೊಕ್ಕಸಕ್ಕೂ ಇದು ಹೊರೆ. ಸಾರ್ವಜನಿಕರಿಗೆ ಅನಗತ್ಯ ತೊಂದರೆ. ವರ್ಗಾವಣೆ, ನಿಯೋಜನೆಯಂತಹ ವಿವಿಧ ಕೆಲಸಗಳಿಗಾಗಿ ಜನಪ್ರತಿನಿಧಿಗಳನ್ನು ಪೊಲೀಸರು ಅವಲಂಬಿಸಿರುತ್ತಾರೆ. ಹೀಗಾಗಿಯೇ ಜನಪ್ರತಿನಿಧಿಗಳ ಗುಲಾಮರಂತೆ ಪೊಲೀಸರು ವರ್ತಿಸುತ್ತಾರೆ. ವ್ಯವಸ್ಥೆಯ ದುರ್ಬಳಕೆ ಮಾಡುವುದಕ್ಕೆ ಪೊಲೀಸ್ ಮಹಾನಿರ್ದೇಶಕ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮತ್ತು ನಗರಗಳ ಪೊಲೀಸ್ ಆಯುಕ್ತರು ಅಂತ್ಯ ಹಾಡಬೇಕು. ನಿಯಮ ಉಲ್ಲಂಘಿಸುವವರ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಚುನಾಯಿತ ಪ್ರತಿನಿಧಿಗಳು ಎಂದರೆ, ಅನಭಿಷಿಕ್ತ ದೊರೆಗಳೇನೂ ಅಲ್ಲ. ಅವರು ಜನರ ಸೇವಕರು ಅಷ್ಟೇ.

ಬೆಂಗಳೂರಿನ ಸಂಚಾರ ವ್ಯವಸ್ಥೆಯು ಹಳಿತಪ್ಪಿ ಹೋಗಲು ಎಲ್ಲ ಪಕ್ಷಗಳ ಈ ರಾಜಕಾರಣಿಗಳೇ ಕಾರಣ. ಹಾಗಾಗಿಯೇ ಸಾರ್ವಜನಿಕರು ಅನುಭವಿಸುತ್ತಿರುವ ಸಂಕಷ್ಟವನ್ನು ರಾಜಕಾರಣಿಗಳೂ ಅನುಭವಿಸಬೇಕು. ಬೆಂಗಳೂರಿನ ಸಂಚಾರ ದಟ್ಟಣೆಯನ್ನು ಸರಿಪಡಿಸಲು ಯಾವ ಪಕ್ಷದ ನೇತೃತ್ವದ ಸರ್ಕಾರವೂ ಪ್ರಾಮಾಣಿಕ ಪ್ರಯತ್ನ ಮಾಡಿಲ್ಲ. ಬೆಂಗಳೂರಿನ ರಸ್ತೆಗಳಲ್ಲಿ ನಿತ್ಯವೂ ಸಂಚರಿಸುವ ಜನರು ಅನುಭವಿಸುವ ಯಾತನೆ ಯಾವ ರೀತಿಯಲ್ಲಿ ಇರುತ್ತದೆ ಎಂಬುದರ ಪ್ರತ್ಯಕ್ಷ ಅನುಭವ ಈ ಸಮಸ್ಯೆಯನ್ನು ಪರಿಹರಿಸಲು ಅಗತ್ಯವಾದ ಅಧಿಕಾರ ಉಳ್ಳವರಿಗೆ ಆಗಬೇಕು. ಆಗ ಸಮಸ್ಯೆ ಪರಿಹಾರದ ಇಚ್ಛಾಶಕ್ತಿ ಅವರಲ್ಲಿ ಮೂಡಬಹುದು.

ಆಡಳಿತ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆಗೆ ನೂತನ ಸರ್ಕಾರ ಸಿದ್ಧವಿದೆಯೇ?

ರಾಜ್ಯಕ್ಕೆ ಬೇಕಿದೆ ಆರನೇ ಗ್ಯಾರಂಟಿ



ವಿಶ್ಲೇಷಣೆ

ಸುಧೀಂದ್ರ ಕುಲಕರ್ಣಿ

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಪದಗ್ರಹಣ ಮಾಡಿದ ಮಾರನೇ ದಿನ ಇಂಗ್ಲಿಷಿನಲ್ಲಿ ಒಂದು ಟ್ವೀಟ್ ಮಾಡಿದರು (ಕನ್ನಡದಲ್ಲಿ ಅದು ಬರಲಿಲ್ಲ ಎಂಬುದು ಗಮನಾರ್ಹ). ಅವರ ಮೊಮ್ಮಗ ಬೆಂಗಳೂರಿನ ಕೆನಡಿಯನ್ ಇಂಟರ್‌ನ್ಯಾಷನಲ್ ಸ್ಕೂಲಿನಲ್ಲಿ –ಇಲ್ಲಿ ಶುಲ್ಕ ದುಬಾರಿ– 12ನೇ ತರಗತಿ ಮುಗಿಸಿದ ನಂತರದ ಬೀಳ್ಕೊಡುಗೆ ಸಮಾರಂಭದಲ್ಲಿ ತಾವು ಭಾಗವಹಿಸಿದ್ದ ಮಾಹಿತಿಯನ್ನು ಚಿತ್ರಸಮೇತ ಹಂಚಿಕೊಂಡಿದ್ದರು. ಅವರ ಮೊಮ್ಮಗನ ಮುಂದಿನ ಶಿಕ್ಷಣ ಕರ್ನಾಟಕದ ಯಾವುದೇ ಸರ್ಕಾರಿ ವಿಶ್ವವಿದ್ಯಾಲಯದಲ್ಲಿ ನಡೆಯುವ ಸಂಭವವಿಲ್ಲ ಎಂದು ನಾವು ಊಹಿಸಿದರೆ ತಪ್ಪಾಗಲಾರದು. ಅವನ ಭವಿಷ್ಯಕ್ಕೆ ಶುಭ ಹಾರೈಸುತ್ತಾ ಮುಖ್ಯಮಂತ್ರಿಯವರ ಅವಗಾಹನೆಗಾಗಿ ಕೆಲವು ವಿಚಾರಗಳನ್ನು ತರಬಯಸುವೆ. ಸಿದ್ದರಾಮಯ್ಯ ಅವರದು ಶೋಷಿತರ ಉದ್ಧಾರಕ್ಕಾಗಿ ಸ್ಪಂದಿಸುವ ಹೃದಯವಾದ್ದರಿಂದ ಅವರು ಈ ವಿಚಾರಗಳನ್ನು ಗಂಭೀರವಾಗಿ ಪರಿಗಣಿಸುವರು ಎಂಬ ಭರವಸೆ ಇದೆ.

ರಾಜ್ಯ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ಟಿ.ಎಂ.ವಿಜಯಭಾಸ್ಕರ್ ಅವರ ನೇತೃತ್ವದಲ್ಲಿ 2020ರಲ್ಲಿ ರಚಿಸಲಾದ ಕರ್ನಾಟಕ ಆಡಳಿತ ಸುಧಾರಣಾ ಆಯೋಗವು ತನ್ನ ಐದನೇ ವರದಿಯಲ್ಲಿ, ರಾಜ್ಯದ ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳ ಗುಣಮಟ್ಟ ಕುಸಿದು ಹೋಗುತ್ತಿರುವ ದಾರುಣ ಸ್ಥಿತಿಯನ್ನು ಚಿತ್ರಿಸಿದೆ. ಈ ಶಾಲೆಗಳಲ್ಲಿ ಕಲಿಯುವ ಬಹುತೇಕ ಎಲ್ಲರೂ ಹಳ್ಳಿಯ ಬಡ ಕಾರ್ಮಿಕ, ರೈತಾಪಿ ಮತ್ತು ಸಿದ್ದರಾಮಯ್ಯ ಅವರ ರಾಜಕಾರಣದ ಕೇಂದ್ರಬಿಂದುವಾದ ‘ಅಹಿಂದ’ ವರ್ಗಗಳಿಗೆ ಸೇರಿದ ಮಕ್ಕಳೇ ಆಗಿದ್ದಾರೆ. ರಾಜ್ಯ ಎಸ್‌ಎಸ್‌ಎಲ್‌ಸಿ ಪಠ್ಯಕ್ರಮದ ವ್ಯಾಪ್ತಿಗೊಳಪಡುವ ಈ ಮಕ್ಕಳು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಇದ್ದರೂ ಎಂಬಿಬಿಎಸ್‌ನಂತಹ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಸರ್ಕಾರಿ ಕೋಟಾದಲ್ಲಿನ ಸೀಟುಗಳ ಸಿಂಹಪಾಲು ಸಿಬಿಎಸ್‌ಇ, ಐಸಿಎಸ್‌ಇ ಪಠ್ಯಕ್ರಮವನ್ನು ಇಂಗ್ಲಿಷ್ ಮಾಧ್ಯಮದಲ್ಲಿ ಓದಿದ, ಆರ್ಥಿಕವಾಗಿ ಸಬಲರಾದ ವಿದ್ಯಾರ್ಥಿಗಳಿಗೇ ದೊರೆಯುತ್ತದೆ. ಕನ್ನಡ ಮಾಧ್ಯಮದಲ್ಲಿ ಓದಿದರೆ ಮುಂದೆ ಕೂಲಿ, ಚಾಕರಿ ಮಾಡುವುದೊಂದೇ ಗತಿ ಎಂದು ತಿಳಿದು, ಲಕ್ಷಾಂತರ ಬಡ ಮಕ್ಕಳು ಇಂದು ಸರ್ಕಾರಿ ಶಾಲೆಗಳನ್ನು ತ್ಯಜಿಸಿ, ಅತಿ ಹೆಚ್ಚು ಶುಲ್ಕ ಕಟ್ಟಬೇಕಾದ– ಸಾಮಾನ್ಯವಾಗಿ ಕಳಪೆ ಗುಣಮಟ್ಟದ– ಖಾಸಗಿ ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ಸೇರುತ್ತಿದ್ದಾರೆ.

ಶಿಕ್ಷಣದಲ್ಲಿ ಈಗ ನಡೆಯುತ್ತಿರುವಂತೆ ಮಾತೃಭಾಷೆಯ ಭಯಾನಕ ಉಪೇಕ್ಷೆ ಮುಂದುವರಿದರೆ, ರಾಜ್ಯದಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಅಸಮಾನತೆಯ ವಾತಾವರಣ ಇನ್ನಷ್ಟು ಗಟ್ಟಿಗೊಳ್ಳುತ್ತದೆ. ಈ ಸ್ಥಿತಿಯ ಸುಧಾರಣೆಗೆ ಆಯೋಗವು ಕೆಲವು ಶಿಫಾರಸುಗಳನ್ನು ಮಾಡಿದೆ. ಶಿಕ್ಷಣ ಕ್ಷೇತ್ರವಲ್ಲದೆ ಹಿಂದುಳಿದ ವರ್ಗಗಳ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುವ ಆರೋಗ್ಯ, ಕೃಷಿ, ಪಶುಸಂಗೋಪನ, ಮತ್ಸ್ಯಕೃಷಿ, ಮೂಲಸೌಕರ್ಯ ನಿರ್ಮಾಣ, ಕೊಳಚೆ ಪ್ರದೇಶಗಳ ಸುಧಾರಣೆ, ಪೊಲೀಸ್ ಮತ್ತು ನ್ಯಾಯಾಂಗ ವ್ಯವಸ್ಥೆ, ಮಹಿಳಾ ಸಶಕ್ತೀಕರಣದಂತಹ ವಿಭಾಗಗಳಲ್ಲಿಯೂ ಆಗಲೇಬೇಕಾಗಿರುವ ಆಡಳಿತ ಸುಧಾರಣೆಗಳ ಬಗ್ಗೆ ಮಹತ್ವದ ಸಲಹೆ, ಸೂಚನೆಗಳನ್ನು ನೀಡಿದೆ.

ಸರ್ಕಾರಿ ವ್ಯವಸ್ಥೆಯಲ್ಲಿ ದೈತ್ಯಾಕಾರವಾಗಿ ಬೆಳೆದಿರುವ ಭ್ರಷ್ಟಾಚಾರ ನಿರ್ಮೂಲನೆಗೆ ಸಂಬಂಧಿಸಿದಂತೆಯೂ ಅದು ಶಿಫಾರಸುಗಳನ್ನು ಸಲ್ಲಿಸಿದೆ. ಆಡಳಿತ ವ್ಯವಸ್ಥೆಯಲ್ಲಿ ಸುಧಾರಣೆಗಳಾಗದಿದ್ದರೆ, ಸರ್ಕಾರಿ ಸೇವೆಗಳ ಕಾರ್ಯನಿರ್ವಹಣೆಯಲ್ಲಿ ವಿಳಂಬ ತಪ್ಪಿಸಿ, ನೌಕರಶಾಹಿಯ ಉಪಟಳವನ್ನು ನಿಯಂತ್ರಿಸದಿದ್ದರೆ ಭ್ರಷ್ಟಾಚಾರ ಹೋಗಲಾರದು, ಕರ್ನಾಟಕದ ಸಮಗ್ರ ಅಭಿವೃದ್ಧಿಯು ವೇಗ ಪಡೆಯಲಾರದು ಹಾಗೂ ಅದು ಸಮಗ್ರ ದೃಷ್ಟಿಕೋನವನ್ನೂ ಹೊಂದಿರಲಾರದು.

ವಿಧಾನಸಭೆ ಚುನಾವಣೆಯಲ್ಲಿ ರಾಜ್ಯದ ಜನ ಬಿಜೆಪಿಯನ್ನು ಸೋಲಿಸಿ ಕಾಂಗ್ರೆಸ್‌ಗೆ ಭಾರಿ ಬಹುಮತ ತಂದುಕೊಟ್ಟದ್ದು ಅತ್ಯಂತ ಸ್ವಾಗತಾರ್ಹ. ಭ್ರಷ್ಟಾಚಾರವನ್ನು ಗಗನಕ್ಕೇರಿಸಿದ, ಸಮಾಜ ವಿಭಜಕ ಕೋಮುದ್ವೇಷದ ರಾಜಕಾರಣ ನಡೆಸಿದ ಹಾಗೂ ಡಬಲ್ ಎಂಜಿನ್ ಸರ್ಕಾರ ಎಂಬ ಸಂವಿಧಾನ ವಿರೋಧಿ ತತ್ವದ ಪ್ರತಿಪಾದನೆ ಮಾಡಿದ ಬಿಜೆಪಿಗೆ ಪಾಠ ಕಲಿಸುವುದು ಅವಶ್ಯವಾಗಿತ್ತು. ಯಾವುದೇ ಪಕ್ಷಕ್ಕೆ ಅಂಟಿಕೊಂಡಿರದ ನಾನು ಕೂಡ ಈ ಚುನಾವಣೆಯಲ್ಲಿ ಕಾಂಗ್ರೆಸ್‌ನ ವಿಜಯಕ್ಕಾಗಿ ಪ್ರವಾಸ, ಪ್ರಚಾರ ಮಾಡಿದೆ. ಆದರೆ ವಿಷಾದದ ಸಂಗತಿಯೆಂದರೆ, ಚುನಾವಣಾ ಸಮಯದಲ್ಲಿ ‘ಶಾಸನ ವ್ಯವಸ್ಥೆಯಲ್ಲಿ ಅತ್ಯಗತ್ಯ ಸುಧಾರಣೆ ತರುವುದು ಕೂಡ ನಮ್ಮ ಗ್ಯಾರಂಟಿ’ ಎಂದು ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿಯವರಾಗಲೀ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರಾಗಲೀ ಖಡಾಖಂಡಿತವಾಗಿ ಹೇಳಲಿಲ್ಲ.

ಬಿಜೆಪಿ ನೇತೃತ್ವದ ಸರ್ಕಾರದ ಆಡಳಿತವನ್ನು ಟೀಕಿಸುವುದರ ಹೊರತಾಗಿ ರಾಜ್ಯದ ಜನರಿಗೆ ಕಾಂಗ್ರೆಸ್ ಕೊಟ್ಟ ‘ಐದು ಗ್ಯಾರಂಟಿ’ಗಳ ಬಗ್ಗೆ ಮಾತ್ರ ಅವರು ಮಾತನಾಡುತ್ತಿದ್ದರು. ಈ ಗ್ಯಾರಂಟಿಗಳ ಅಗತ್ಯವನ್ನು ನಾನು ನಿರಾಕರಿಸುವುದಿಲ್ಲ. ಅನ್ಯಾಯ ಮತ್ತು ಉಪೇಕ್ಷೆಗೆ ಒಳಗಾದ ಜನರಿಗೆ ಒಂದಿಷ್ಟು ಪರಿಹಾರಾತ್ಮಕ ನೆರವು ನೀಡುವ ಧೋರಣೆ ಅತ್ಯಂತ ಸ್ತುತ್ಯರ್ಹ. ಆದರೆ ಗ್ಯಾರಂಟಿಗಳನ್ನು ನಾವು ಕಾರ್ಯರೂಪಕ್ಕೆ ತಂದೇ ತೀರುತ್ತೇವೆ ಎಂದು ಮೊದಲ ದಿನವೇ ಘೋಷಿಸಿ, ಅತಿದೊಡ್ಡ ಕ್ರಾಂತಿಕಾರಿ ಕಾರ್ಯ ಮಾಡಿದೆವು ಎಂದು ಸಂತಸಪಡುತ್ತಿರುವ ಕಾಂಗ್ರೆಸ್ಸಿನ ಅಲ್ಪಸಂತುಷ್ಟರಿಗೆ ನಾವು ಒಂದು ಪ್ರಶ್ನೆ ಕೇಳಬೇಕು: ಇಷ್ಟರಿಂದಲೇ ಅಥವಾ ಕೆಲವು ವರ್ಗಗಳಿಗೆ ಮೀಸಲಾತಿ ಪ್ರಮಾಣ ಹೆಚ್ಚಿಸುವುದರಿಂದಲೇ ಬಡವರು ಮತ್ತು ಹಿಂದುಳಿದವರ ಉದ್ಧಾರವಾಗುತ್ತದೆಯೇ?



ಶೇ 40ರಷ್ಟು ಕಮಿಷನ್ ಆರೋಪವು ಬಿಜೆಪಿ ನೇತೃತ್ವದ ಸರ್ಕಾರದ ಮೇಲಿತ್ತು. ಕಮಿಷನ್ ಪ್ರಮಾಣವನ್ನು ಶೇ 5- 10ಕ್ಕಾದರೂ ತಂದು ನಿಲ್ಲಿಸಿದರೆ ಸರ್ಕಾರದ ವರಮಾನದಲ್ಲಿ ಭಾರಿ ಹೆಚ್ಚಳವಾಗುವುದಲ್ಲದೆ ಆರ್ಥಿಕ ಪ್ರಗತಿಯೂ ವರ್ಧಿಸುತ್ತದೆ. ಜೊತೆಗೆ ಕೃಷಿ ಸಹಿತವಾಗಿ ಹೈಟೆಕ್ ಆಧಾರಿತ ಸಣ್ಣ, ಮಧ್ಯಮ, ದೊಡ್ಡ ಕೈಗಾರಿಕೆ ಹಾಗೂ ವ್ಯಾಪಾರಗಳಿಗೆ ಚಾಲನೆ ಕೊಡುವ, ದೇಶ ವಿದೇಶಗಳಿಂದ ಭಾರಿ ಪ್ರಮಾಣದಲ್ಲಿ ಬಂಡವಾಳ ತರುವ, ಉತ್ತರ ಕರ್ನಾಟಕದಲ್ಲೂ ಎಲ್ಲ ತರಹದ ಅಭಿವೃದ್ಧಿಗೆ ಪ್ರೋತ್ಸಾಹ ಕೊಡುವ ಧೋರಣೆಗಳನ್ನು ಅನುಸರಿಸಿದರೆ ರಾಜ್ಯದ ಜಿಡಿಪಿಯನ್ನೂ ಬಜೆಟ್ಟಿನ ಗಾತ್ರವನ್ನೂ ದುಪ್ಪಟ್ಟುಗೊಳಿಸಬಹುದು. ಇದರಿಂದ ‘ಐದು ಗ್ಯಾರಂಟಿ’ಗಳಿಗೆ ಹಣಕಾಸು ಒದಗಿಸುವುದರ ಹೊರತಾಗಿ ಇನ್ನೂ ಹಲವಾರು ಹೊಸ ಜನಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು, ನಿರುದ್ಯೋಗದ ಪ್ರಮಾಣವನ್ನು ತಗ್ಗಿಸಲು ಸಾಧ್ಯ. ಹಿಂದುಳಿದ ಜಾತಿ, ವರ್ಗಗಳಲ್ಲಿ ಉದ್ಯಮಶೀಲತೆಯನ್ನು ಬೆಳೆಸಿ ಸಕಲ ಸಮುದಾಯಗಳನ್ನೂ ಸಮೃದ್ಧಗೊಳಿಸಲು ಸಾಧ್ಯ. ಆದರೆ ಇವೆಲ್ಲವನ್ನೂ ಮಾಡಲು ಬೇಕಾದ ಸಾಹಸ, ಒಮ್ಮತ ಮತ್ತು ದೂರದೃಷ್ಟಿಯು ಸರ್ಕಾರದಲ್ಲಿ ಇದೆಯೇ?

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು (ಕೆಐಎಡಿಬಿ) ಭ್ರಷ್ಟಾಚಾರದ ಭದ್ರಕೋಟೆಯಾಗಿರುವುದು ಸರ್ವವಿದಿತ. ಬೆಂಗಳೂರು ಸಹಿತ ಎಲ್ಲ ದೊಡ್ಡ, ಚಿಕ್ಕ ಪಟ್ಟಣಗಳಲ್ಲಿ ಭೂ ಮಾಫಿಯಾವು ರಾಜ್ಯದ ಸಂಪತ್ತನ್ನು ಲೂಟಿ ಮಾಡುತ್ತಿರುವುದು ಹಾಗೂ ಎಲ್ಲ ಪ್ರಮುಖ ಪಕ್ಷಗಳೂ ರಾಜಕಾರಣವನ್ನು ಹೊಲಸು ಮಾಡುತ್ತಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಸರ್ಕಾರಿ ವಿಶ್ವವಿದ್ಯಾಲಯಗಳಿಗೆ ಹಿಂದಿನ ಸರ್ಕಾರವು ಅರ್ಹತೆಯಿಲ್ಲದವರನ್ನು ಲಂಚ ಪಡೆದು ಕುಲಪತಿಗಳನ್ನಾಗಿ ನೇಮಿಸಿತ್ತು ಎಂಬ ಆರೋಪವಿದೆ. ಪೊಲೀಸ್ ಇಲಾಖೆಯಲ್ಲಿ ಹುದ್ದೆ ಭರ್ತಿ ಹಾಗೂ ವರ್ಗಾವಣೆ ಲಂಚವಿಲ್ಲದೆ ನಡೆಯುತ್ತಿರಲಿಲ್ಲ. ಜನಪ್ರತಿನಿಧಿಗಳಾಗಿ ಸರ್ಕಾರಿ ಯೋಜನೆಗಳಲ್ಲಿ ಹಸ್ತಕ್ಷೇಪ ಮಾಡಿ, ರಾಜ್ಯದ ಸಂಪತ್ತನ್ನು ಕೊಳ್ಳೆಹೊಡೆದು ನೂರಾರು ಕೋಟಿ ರೂಪಾಯಿ ಗಳಿಸಿದ ಅನೇಕರು ನಮ್ಮಲ್ಲಿ ಇದ್ದಾರೆ. ಈ ರೀತಿ ರಾಜಕಾರಣ ಹಾಗೂ ಆಡಳಿತ ಎರಡೂ ವ್ಯವಸ್ಥೆಗಳಿಗೆ ಅಂಟಿಕೊಂಡ ಹಾಗೂ ಪ್ರಜಾಪ್ರಭುತ್ವವನ್ನು ಧನಪ್ರಭುತ್ವವನ್ನಾಗಿ ಕ್ಷೀಣಗೊಳಿಸಿದ ಈ ಮಹಾರೋಗವನ್ನು ಸ್ವಲ್ಪಮಟ್ಟಿಗಾದರೂ ಗುಣಮುಖಗೊಳಿಸುವ ಪ್ರಬಲ ಸಂಕಲ್ಪವನ್ನು ರಾಹುಲ್, ಸಿದ್ದರಾಮಯ್ಯ ತೋರಬಲ್ಲರೇ?

ಆಮೂಲಾಗ್ರ ಶಾಸನ ಸುಧಾರಣೆಗಾಗಿ ಈ ‘ಆರನೇ ಗ್ಯಾರಂಟಿ’ಯನ್ನು ಅವರು ಕೊಟ್ಟರೆ ಹಾಗೂ ಅದನ್ನು ಆಂಶಿಕವಾಗಿಯಾದರೂ ಒಂದು ವರ್ಷದಲ್ಲಿ ಈಡೇರಿಸಿದರೆ ಕರ್ನಾಟಕದ ಪ್ರಬುದ್ಧ ಜನ, 2024ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ 2023ರ ವಿಧಾನಸಭೆ ಚುನಾವಣೆಯಂತೆಯೇ ಭಾರಿ ಬೆಂಬಲ ನೀಡುತ್ತಾರೆ ಎಂಬುದರಲ್ಲಿ ಸಂಶಯವಿಲ್ಲ. ನಿರಾಸೆಗೊಳಿಸದಿರಿ ಎಂಬುದಷ್ಟೇ ಅವರಲ್ಲಿ ಮಾಡುವ ವಿನಂತಿ.

ಚುರುಮುರಿ



ಕಂಡೀಷನ್ಸ್ ಅಪ್ಲೈ!

• ಬಿ.ಎನ್.ಮಲ್ಲೇಶ್

‘ಗುರೂ... ನಂಗೇನೋ ಈ ಗ್ಯಾರಂಟಿಗಳು ಜಾರಿಗೆ ಬರ್ತಾವೆ ಅನ್ನೋದು ಡೌಟಪ, ತೀರ ಅಟಾಕಂದು ರೊಕ್ಕ ಎಲ್ಲಿಂದ ತರ್ತಾರೆ ಅಂತ’ ಹರಟೆಕಟ್ಟೆಯಲ್ಲಿ ದುಬ್ಬೀರ ತಲೆಯಾಡಿಸಿದಾಗ, ‘ನಂಗೂ ಹಂಗೇ ಅನ್ಸುತ್ತಪ್ಪ, ಅದ್ಕೇ ಈಗ ಕಂಡೀಷನ್ನು ಅದೂ ಇದೂ ಅಂತಿದಾರೆ’ ತೆಪರೇಸಿಯೂ ದನಿಗೂಡಿಸಿದ.

‘ಅಲ್ಲ ತಮಾಸಿಗೆ ಕೇಳ್ತೀನಿ, ಗ್ಯಾರಂಟಿ ಕೊಡ್ತೀವಿ ಅಂದಿದ್ದು ನಿಜ, ಈಗ್ಲೇ ಕೊಡ್ತೀವಿ ಅಂದಿದ್ರಾ?’ ಗುಡ್ಡೆ ನಕ್ಕ.

‘ಮತ್ತೆ? ಇನ್ನಾವಾಗ ಕೊಡ್ತಾರೆ, ಐದು ವರ್ಷ ಬಿಟ್ಟಾ?’ ಮಂಜಮ್ಮಗೆ ಕೋಪ.

‘ಅಕ್ಕಿ ಪಕ್ಕಿ ಕೊಡಬೋದು, ಆದ್ರೆ ನಿನ್ನಂಥ ಹೋಟ್ಲು ಓನರ್‌ಗೆ ಎರಡು ಸಾವಿರ ಕೊಡಾಣ ಅಂದ್ರೆ, ಇದೇ ಟೈಮಿಗೆ ಕೇಂದ್ರದೋರು ಎರಡು ಸಾವಿರ ರೂಪಾಯಿ ನೋಟೇ ವಾಪಸ್ ತಗಂಡ್ರು. ಪಾಪ, ರಾಜ್ಯ ಸರ್ಕಾರದೋರು ಏನ್ಮಾಡ್ತಾರೆ?’

‘ಐನೂರವು ನಾಕು ಕೊಡ್ಲಿ, ಬ್ಯಾಡಂತೀವಾ? ಆಮೇಲೆ ನಮಿಗೆ ಫ್ರೀ ಬಸ್ ಪ್ರಯಾಣ ಯಾವಾಗಿಂದ?’

‘ಅದ್ಕೂ ಕಂಡೀಷನ್ ಇದೆ. ಮೊಬೈಲ್ ಇಟ್ಕಂಡಿರೋ ನಿನ್ನಂಥ ಮಹಿಳೆಯರಿಗೆ ಫ್ರೀ ಬಸ್ ಇಲ್ಲ ಅಂತಾರಪ, ಆಗ?’

‘ಗುಡ್ಡೆ ಬ್ಯಾಡ ನೋಡು, ಅಷ್ಟೇ ಈಗ...’ ಮಂಜಮ್ಮ ಕಾಫಿ ಲೋಟ ಕೈಗೆತ್ತಿಕೊಂಡಳು.

‘ಶಾಂತಿ ಶಾಂತಿ... ಲೇ ಗುಡ್ಡೆ ನೀನು ಗೌರ್ಮೆಂಟಿಗೆ ಅಡ್ವೈಸರ್ ಆಗಾಕೆ ಲಾಯಕ್ಕಿದಿ ನೋಡಲೆ, ಅಲ್ಲಲೆ ಈಗಿನ ಕಾಲದಾಗೆ ಮೊಬೈಲ್ ಇಲ್ದೇ ಇರೋರು ಯಾರದಾರ್ಲೆ? ಅದಿರ್ಲಿ ಈಗ ಕರೆಂಟ್ ಕತಿ ಹೆಂಗೆ, ಫ್ರೀ ಕೊಡ್ತಾರಾ?’ ದುಬ್ಬೀರ ಕೇಳಿದ.

‘ಅದೆಂಗ್ ಕೊಡ್ತಾರಲೆ, ಕರೆಂಟ್ ಬಿಲ್ ಬಂದೇ ಬರ್ತತಿ’.

‘ನಾವು ಕಟ್ಟಲ್ಲ ಅಂತೀವಪ’.

‘ನಾವು ಬಿಲ್ ಕೊಟ್ಟಿರೋದು ಕರೆಂಟ್ ಬಳಸಿದ್ದಕ್ಕಲ್ಲ, ಇದು ಮೀಟರ್ ಚಾರ್ಜು ಅಂತೀವಪ, ಆಗ?’

ಮಂಜಮ್ಮ ಕಾಫಿ ಲೋಟವನ್ನ ಗುಡ್ಡೆ ಮೇಲೆ ಬೀಸಿ ಒಗೆದು ‘ಅಯ್ಯೋ ಮನೆಹಾಳ’ ಎಂದಳು. ಎಲ್ಲರೂ ಗೊಳ್ಳಂತ ನಕ್ಕರು.

ದಿನದ ಟ್ವೀಟ್

ವಿಶೇಷ ಹಕ್ಕು ಇದೆ



ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಂಚಿಯಲ್ಲಿನ ಜಾರ್ಖಂಡ್ ಹೈಕೋರ್ಟ್ ಸಂಕೀರ್ಣದಲ್ಲಿ ದೇಶದ ಅತಿದೊಡ್ಡ ನ್ಯಾಯಾಂಗ ಕ್ಯಾಂಪಸ್ ಉದ್ಘಾಟಿಸಿದರು. ನವದೆಹಲಿಯಲ್ಲಿ ಮೇ 28ರಂದು ಸಂಸತ್ತಿನ ಹೊಸ ಕಟ್ಟಡವನ್ನು ಉದ್ಘಾಟಿಸುವ ಸಾಂವಿಧಾನಿಕ ವಿಶೇಷ ಹಕ್ಕು ದೇಶದ ಮೊದಲ ಆದಿವಾಸಿ ಮಹಿಳಾ ರಾಷ್ಟ್ರಪತಿಗೆ ನಿರಾಕರಣೆ ಆಗುತ್ತಿರುವುದು ಒಬ್ಬ ವ್ಯಕ್ತಿಯ ಅಹಂ ಮತ್ತು ಆತ್ಮಪ್ರಶಂಸೆಯ ಆಸೆಯ ಕಾರಣದಿಂದ.

ಜೈರಾಂ ರಮೇಶ್, ಕಾಂಗ್ರೆಸ್ ಮುಖಂಡ

ಕಿಡಿನುಡಿ



ಕಾಂಗ್ರೆಸ್ ಪಕ್ಷವು ಜೆಡಿಎಸ್ ವಿರುದ್ಧ ವ್ಯವಸ್ಥಿತವಾಗಿ ಅಪಪ್ರಚಾರ ನಡೆಸಿತು. ಸುಳ್ಳು ಗ್ಯಾರಂಟಿಗಳು ಹಾಗೂ ಕೂಪನ್‌ಗಳನ್ನು ವಿತರಿಸಿ ಜನರಿಗೆ ವಂಚಿಸಿ, ಕುತಂತ್ರದಿಂದ ಅಧಿಕಾರಕ್ಕೆ ಬಂದಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕುತಂತ್ರಗಾರಿಕೆ ಮಾಡಿದರು. ಅವರ ಪಕ್ಷದವರು ಒಂದು ಸಮುದಾಯವನ್ನು ಜೆಡಿಎಸ್ ವಿರುದ್ಧ ಎತ್ತಿ ಕಟ್ಟಿದರು.

ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಮಂಗಳವಾರ, 26-5-1998

• **ಕಾವೇರಿ ಮಧ್ಯಂತರ ತೀರ್ಪು ಜಾರಿಗೆ ಜಯಲಲಿತಾ ಒತ್ತಡ**

ಚೆನ್ನೈ, ಮೇ 25– ತಮಿಳುನಾಡು ರೈತರ ಹಿತ ದೃಷ್ಟಿಯಿಂದ ಕಾವೇರಿ ನ್ಯಾಯಮಂಡಳಿಯ ಮಧ್ಯಂತರ ತೀರ್ಪು ಜಾರಿಗೆ ತಕ್ಷಣ ಕ್ರಮ ಕೈಗೊಳ್ಳಬೇಕು ಹಾಗೂ ವಿದ್ಯುತ್ ಬೆಲೆ ನಿಯಂತ್ರಣ ಮಸೂದೆಯನ್ನು ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ಮಂಡಿಸಬಾರದು ಎಂದು ಕೇಂದ್ರದ ಬಿಜೆಪಿ ಮೈತ್ರಿಕೂಟದ ಘಟಕ ಪಕ್ಷವಾದ ಎಐಎಡಿಎಂಕೆ ಇಂದು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಿದೆ.

ಮಿತ್ರಪಕ್ಷದಿಂದಲೇ ಬಂದಿರುವ ಈ ಷರತ್ತಿನಿಂದ ಬಜೆಟ್ ಅಧಿವೇಶನದಲ್ಲಿ ಮತ್ತೊಮ್ಮೆ ಮುಜುಗರಕ್ಕೆ ಒಳಗಾಗುವುದನ್ನು ತಪ್ಪಿಸಲು ಸರ್ಕಾರ ತಕ್ಷಣವೇ ಕ್ರಮ ಕೈಗೊಳ್ಳಲು ನಿರ್ಧರಿಸಿದ್ದು, ವಿದ್ಯುತ್ ಮಸೂದೆ ಕುರಿತಂತೆ ಜಯಲಲಿತಾ ಅವರೊಂದಿಗೆ ಸಮಾಲೋಚನೆ ನಡೆಸಲು ಸಿದ್ಧವಿರುವುದಾಗಿ ಪ್ರಕಟಿಸಿದೆ.

‘ಬಿಜೆಪಿ ಮೈತ್ರಿಕೂಟದಲ್ಲಿ ಎಐಎಡಿಎಂಕೆ ಬಹುಮುಖ್ಯ ಘಟಕವಾದ್ದರಿಂದ ವಿದ್ಯುತ್ ಸುಗ್ರೀವಾಜ್ಞೆ ಕುರಿತಂತೆ ಯಾವುದೇ ಭಿನ್ನಾಭಿಪ್ರಾಯಗಳಿದ್ದರೆ ಅದನ್ನು ಮಾತುಕತೆ ಮೂಲಕ ಬಗೆಹರಿಸಿಕೊಳ್ಳಲಾಗುವುದು’ ಎಂದು ಪ್ರಧಾನಿ ಅವರ ರಾಜಕೀಯ ಸಲಹೆಗಾರ ಪ್ರಮೋದ್ ಮಹಾಜನ್ ಅವರು ದೆಹಲಿಯಲ್ಲಿ ಹೇಳಿದ್ದಾರೆ.

• **ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ದರೋಡೆ**

ಚಿಕ್ಕಮಗಳೂರು, ಮೇ 25– ಚಿಕ್ಕಮಗಳೂರಿನ ಯಗಟಿ, ತುಮಕೂರು ಬಳಿಯ ಬಡ್ಡಿಹಳ್ಳಿಯಲ್ಲಿ ದರೋಡೆಕೋರರು ಮನೆಗಳ ಮೇಲೆ ದಾಳಿ ಮಾಡಿ ನಗನಾಣ್ಯ ದೋಚಿದ್ದಾರೆ. ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ರಾಜೇಶ್ವರದಲ್ಲಿಯೂ ದರೋಡೆ ಯತ್ನ ನಡೆದಿದೆ.

50 ವರ್ಷಗಳ ಹಿಂದೆ

ಶನಿವಾರ, 26-5-1973

• **ಗೃಹಖಾತೆ ರಾಜ್ಯ ಸಚಿವ ಆರ್.ಡಿ. ಕಿತ್ತೂರರ ರಾಜೀನಾಮೆ ಅಂಗೀಕೃತ**

ಬೆಂಗಳೂರು, ಮೇ 25– ತಮ್ಮ ಬಗೆಗೆ ಉಂಟಾದ ವಿವಾದವನ್ನನುಸರಿಸಿ ರಾಜ್ಯ ಸಚಿವ ಶ್ರೀ ರಘುನಾಥ್ ಧೂಳಪ್ಪ ಕಿತ್ತೂರು ಅವರು ಇಂದು ಬೆಳಿಗ್ಗೆ ಇತ್ತ ರಾಜೀನಾಮೆಯನ್ನು ಮುಖ್ಯಮಂತ್ರಿಗಳ ಶಿಫಾರಸಿನ ಮೇರೆಗೆ ರಾಜ್ಯಪಾಲರು ಅಂಗೀಕರಿಸಿದ್ದಾರೆ.

ವಿಧಾನಮಂಡಲದ ಉಭಯ ಸದನಗಳಲ್ಲಿ ಹಾಗೂ ಹೊರಗೂ ಕುತೂಹಲವನ್ನು ಕೆರಳಿಸಿದ ಪ್ರಕರಣ ಸಂಬಂಧಪಟ್ಟ ರಾಜ್ಯ ಸಚಿವರ ರಾಜೀನಾಮೆಯಲ್ಲಿ ಪರ್ಯವಸಾನವಾಯಿತು.

ಇಂದು ಬೆಳಿಗ್ಗೆ ಮುಖ್ಯಮಂತ್ರಿಗಳಿಗೆ ಕಳುಹಿಸಿದ ರಾಜೀನಾಮೆ ಪತ್ರದಲ್ಲಿ ಶ್ರೀ ಕಿತ್ತೂರು ಅವರು ತಮ್ಮನ್ನು ಭೇಟಿ ಮಾಡಿದ ಮಹಿಳೆಯೊಬ್ಬರ ಬಗ್ಗೆ ಪತ್ರಿಕೆಗಳಲ್ಲಿ ಹಾಗೂ ವಿಧಾನಮಂಡಲದಲ್ಲಿ ವಿವಾದ ಬೆಳೆದುದರ ಬಗ್ಗೆ ವಿಷಾದ ವ್ಯಕ್ತಪಡಿಸಿದ್ದಾರೆ.

• **ಕಾಳಸಂತೆಯಲ್ಲಿ ಟೈರು ಮಾರಾಟ ತಪ್ಪಿಸಲು ನಿಯಂತ್ರಣ**

ಬೆಂಗಳೂರು, ಮೇ 25– ಟೈರುಗಳು ಕಾಳಸಂತೆಯಲ್ಲಿ ಮಾರಾಟವಾಗುತ್ತಿವೆ ಎಂದು ತಿಳಿದ ನಂತರ ನಿಯಂತ್ರಣಕ್ಕೆ ತರಲಾಗಿದೆ ಎಂದು ಆಹಾರ ಸಚಿವೆ ಶ್ರೀಮತಿ ಇವಾವಾಜ್ ಇಂದು ವಿಧಾನಪರಿಷತ್ತಿನಲ್ಲಿ ತಿಳಿಸಿದರು.

ಸಂಗತ

ಹೋಂವರ್ಕ್: ಸಂಕಟವಲ್ಲ, ಸಡಗರವಾಗಲಿ

ಮಕ್ಕಳಲ್ಲಿ ಬೇರೂರಿರುವ ಹೋಂವರ್ಕ್ ಕುರಿತ ಭೀತಿಯನ್ನು ಅಧ್ಯಾಪಕರು ಹಾಗೂ ಪೋಷಕರು ಹೋಗಲಾಡಿಸುವುದು ಅತ್ಯಗತ್ಯ

• ಬಿ.ಎಸ್.ಭಗವಾನ್

ಹೋಂವರ್ಕ್ ಎಂದೊಡನೆ ಬಹುತೇಕ ಮಕ್ಕಳು ಹಾವು ಕಂಡಂತೆ ಗಾಬರಿಪಡುತ್ತಾರೆ. ಅದೊಂದು ಶಿಕ್ಷೆ ಎಂತಲೋ ಕಠಿಣ ಸಮಸ್ಯೆಗಳಿಗೆ ಉತ್ತರದ ವ್ಯರ್ಥ ಹುಡುಕಾಟ ಎಂದೋ ಅಥವಾ ಹೇಗೋ ಅಷ್ಟಿಷ್ಟು ವಿಷಯ ಸಂಗ್ರಹಿಸಿ ಪೋಣಿಸಿ ಒಪ್ಪಿಸುವ ಪ್ರಬಂಧವೆಂದೋ ಭಾವಿಸುವುದಿದೆ.


ಈಗ್ಗೆ ಇಪ್ಪತ್ತು ವರ್ಷಗಳಿಗೂ ಹಿಂದೆ ಶಾಲೆಯಲ್ಲಿ ನೀಡುತ್ತಿದ್ದ ಹೋಂವರ್ಕ್‌ಗೆ ಹೋಲಿಸಿದರೆ ಇಂದಿನದು ದುಪ್ಪಟ್ಟು ಪ್ರಮಾಣದ್ದೆಂಬುದು ಸರಿ. ಹೋಂವರ್ಕ್ ಮಾಡದಿದ್ದರೆ ಅತ್ತ ಶಾಲೆಯಲ್ಲೂ ಇತ್ತ ಮನೆಯಲ್ಲೂ ಮಕ್ಕಳಿಗೆ ಅಸಹನೀಯ ಒತ್ತಡ, ಇದಕ್ಕಿಂತ ಹೊಣೆಗೇಡಿತನ ಇನ್ನೊಂದಿಲ್ಲ ಎಂಬ ಪಟ್ಟ. ‘ಗುಮ್ಮ’ ಎಂದೇ ಮಕ್ಕಳು ಪರಿಭಾವಿಸುವ ಹೋಂವರ್ಕ್, ಅವರಲ್ಲಿ ಬಗೆ ಬಗೆ ಸುಳ್ಳು ಹೇಳಿಸಬಹುದು, ನೆಪ ಹೂಡಿಸಬಹುದು. ಅಧ್ಯಾಪಕರು ಹಾಗೂ ಪೋಷಕರು ಮಕ್ಕಳಲ್ಲಿ ಬೇರೂರಿರುವ ಹೋಂವರ್ಕ್ ಕುರಿತ ಭೀತಿಯನ್ನು ಹೋಗಲಾಡಿಸುವುದು ಅತ್ಯಗತ್ಯ.

ಮಕ್ಕಳಿಗೆ ಕೊಡುವ ಹೋಂವರ್ಕ್ ಅವರಿಗೆ ಆಪ್ತವಾಗುವತ್ತ ಸಂಯಮದ ಹೆಜ್ಜೆಗಳನ್ನಿಡುವುದು ಸಾಧ್ಯ. ಇಲ್ಲಿ ಪೋಷಕರ ಆದ್ಯತೆ ಮಕ್ಕಳೇ ವಿನಾ ಹೋಂವರ್ಕ್ ಅಲ್ಲ! ಅದರ ಹೆಸರೇ ಹೋಂವರ್ಕ್- ಮನೆಯಲ್ಲಿ ಬಿಡುಬೀಸಾಗಿ ವಿದ್ಯಾಲಯದಲ್ಲಿ ನಿಗದಿಪಡಿಸಿದ್ದರ ಅಭ್ಯಾಸ. ನಾಳೆ ಅಧ್ಯಾಪಕರಿಗೆ ‘ಇಗೊಳ್ಳಿ ಇಷ್ಟು ಪೂರೈಸಿದ್ದೇನೆ’ ಎನ್ನುವ ವರದಿಗಿಂತಲೂ ತಾನೇನು ಕಲಿತೆ, ಅರಿತೆ ಎನ್ನುವುದು ವಿದ್ಯಾಕಾಂಕ್ಷಿಗೆ ಮುಖ್ಯವಾಗುತ್ತದೆ. ಹೋಂವರ್ಕ್ ಜ್ಞಾನದ ಜೊತೆಗೆ ಸ್ವಯಂ ಶಿಸ್ತು, ಜವಾಬ್ದಾರಿ ಕಲಿಸುವಲ್ಲಿ ಪ್ರೇರಕ ನಿರ್ದೇಶನವಾಗುವುದು.

ಮಕ್ಕಳು ಚಿಂತನೆಗಳಿಗೂ ಮೀರಿ ತಪ್ಪುಗಳಿಂದಲೇ ತಿಳಿವಳಿಕೆಯತ್ತ ದಾಪುಗಾಲಿಡುತ್ತಾರೆ. ಎಲ್ಲಕ್ಕಿಂತ ಮುಖ್ಯವಾಗಿ, ಕೊಟ್ಟ ಹೋಂವರ್ಕ್ ಅನ್ನು ಸಮರ್ಪಕವಾಗಿ ಮಾಡಿದಾಗ ಮಕ್ಕಳು ಆಯಾ ವಿಷಯದ ಮುಂದಿನ ಅಧ್ಯಾಯವನ್ನು ಸುಲಭವಾಗಿ ಆತ್ಮವಿಶ್ವಾಸದಿಂದ ಅರ್ಥೈಸಿಕೊಳ್ಳಬಹುದು. ಎಂತಹ ದಿವ್ಯತೆಯನ್ನು ಅವರು ಪಡೆಯಬಹುದೆಂದರೆ, ಹೋಂವರ್ಕ್ ಕೊಟ್ಟಿರದ ದಿನ ಕೂಡ ಗಂಭೀರ ಓದಿನಲ್ಲಿ, ಬರವಣಿಗೆಯಲ್ಲಿ, ಏನಾದರೊಂದು ಉಪಯುಕ್ತ ಓದಿನಲ್ಲಿ ತೊಡಗಿರುತ್ತಾರೆ. ಮಕ್ಕಳು ಹೋಂವರ್ಕ್‌ನಲ್ಲಿ ನಿರತರಾದಾಗ ಹಿರಿಯರು ಅವರೊಂದಿಗೆ ಕುಳಿತು ತಮ್ಮ ಓದು, ಸಣ್ಣಪುಟ್ಟ ಕಡತದ ವಿಲೇವಾರಿಯಲ್ಲಿ ಮಗ್ನರಾದರೆ ಅದಕ್ಕಿಂತ ಸ್ಫೂರ್ತಿಯಿರದು. ತನಗೆ ಮಾತ್ರ ಈ ಪ್ರಯಾಸ, ಮನೆಯಲ್ಲಿ ಉಳಿದವರೆಲ್ಲ ಆರಾಮವಾಗಿದ್ದಾರೆ ಎಂಬ ಭಾವ ಮಕ್ಕಳಿಗೆ ಬರಬಾರದು. ಮನೆಗೆಂದು ಕೊಟ್ಟ ಪಾಠವನ್ನು ಉಲ್ಲಾಸದಾಯಕ ಆಟವಾಗಿ ರೂಪಾಂತರಿಸುವುದು ಸಾಧ್ಯ.

ಇದು ತಮ್ಮ ಮಕ್ಕಳಿಗೆ ಕೊಟ್ಟ ಹೋಂವರ್ಕ್, ತಮಗಲ್ಲ, ತಮ್ಮದೇನಿದ್ದರೂ ಉತ್ತೇಜನ ಎಂದು ಪೋಷಕರು ತಿಳಿದರೆ ಹೋಂವರ್ಕ್‌ನ ಉದ್ದೇಶ ಅರ್ಧ ಹಾದಿ ಕ್ರಮಿಸಿದಂತೆ. ಶಾಲೆಯಿಂದ ಬಂದ ಕೂಡಲೇ ‘ಇವೊತ್ತು ಏನು ಕೊಟ್ಟಿದ್ದಾರೆ, ಯಾವ ಲೆಕ್ಕ, ಎಷ್ಟು ಸಾಲುಗಳ ಪದ್ಯ ಬರೆದುಕೊಂಡು ಹೋಗಬೇಕು’ ಎಂದೆಲ್ಲ ವಿಚಾರಿಸುವ ಆತುರ, ಕಾತರದ ಅಗತ್ಯವಿಲ್ಲ. ಇಂಥ ತಾಕೀತಿನಿಂದ ಇಡೀ ದಿನ ಪೇಪರ್, ಪೆನ್ಸಿಲ್, ರಬ್ಬರ್, ಮಗ್ಗಿಯಲ್ಲಿ ತೊಡಗಿದ ಮಗುವಿನಲ್ಲಿ ಸಿಟ್ಟು, ಅಸಹನೆ ಮತ್ತಷ್ಟು ಹೆಚ್ಚುತ್ತದೆ. ಅವರು ಹೋಂವರ್ಕ್ ನಿರಾಕರಿಸುವುದು ಸಹಜ. ರೇಗುವುದು, ಬೆದರಿಸುವುದು, ದಂಡಿಸುವುದರ ಬದಲು, ಹೋಂವರ್ಕ್ ಮಾಡದಿದ್ದರೆ ಪರಿಣಾಮಗಳನ್ನು ಅವರ ಮುಂದೆ ಮುಕ್ತವಾಗಿ ತೆರೆದಿಡಬೇಕು. ಬದಲಿಗೆ ಹೋಂವರ್ಕ್ ಮಾಡುವ ಸಮಯವನ್ನು ಮಕ್ಕಳ ಆಯ್ಕೆಗೇ ಬಿಡುವುದು ಸೂಕ್ತ.

ವಿಪರ್ಯಾಸವೆಂದರೆ, ಹೋಂವರ್ಕ್ ನಿಮಿತ್ತವಾಗಿಯೇ ಮಕ್ಕಳನ್ನು ಪೋಷಕರು ಟ್ಯೂಷನ್ನಿಗೆ ಕಳಿಸುವುದುಂಟು. ನಿಜಕ್ಕೂ ವಿದ್ಯಾರ್ಜನೆಯ ಗೊತ್ತುಗುರಿಯನ್ನೇ ಮೂಲೆಗುಂಪಾಗಿಸುವ ನಿರ್ಧಾರವಿದು. ಇದರಿಂದ ಮಕ್ಕಳಿಗೆ ಮತ್ತಷ್ಟು ಒತ್ತಡ, ಸಮಯಹರಣವಷ್ಟೇ ಅಲ್ಲ, ಸ್ವಾಧ್ಯಯನಕ್ಕೆ, ಸೃಜನಶೀಲತೆಗೆ ಅವಕಾಶವೇ ಇಲ್ಲದಂತಾಗುವ ತರಾತುರಿ.



ಹೋಂವರ್ಕ್ ಎನ್ನುವುದು ಮನೆಗೆ ನಿಯೋಜಿಸುವ ಕಾರ್ಯವಲ್ಲ, ಅದು ಪರಿಣತಿ ಹೆಚ್ಚಿಸಿಕೊಳ್ಳುವ ಸಲುವಾಗಿ ಪೂರೈಸಲು ಹೇಳುವ ನಿಗದಿತ ಕಾರ್ಯ. ಮಕ್ಕಳು ಆ ಯಶಸ್ಸನ್ನು ಮುಟ್ಟಿದರೆ ತರಗತಿ ರಂಜನೀಯ ಎನ್ನಿಸುವುದು. ಶೈಕ್ಷಣಿಕ ವರ್ಷದ ಮಧ್ಯದಲ್ಲೇ ಶಾಲೆ ತೊರೆಯುವವರ ಸಂಖ್ಯೆಯೂ ಗಣನೀಯವಾಗಿ ಇಳಿಮುಖವಾಗುತ್ತದೆ. ‘ಹೋಂವರ್ಕ್’ ಎಂಬ ಪದವನ್ನೇ ಮಾರ್ಪಡಿಸಿ ‘ಮನೆ ಓದು’ ಅಥವಾ ‘ಮನೆ ಅಭ್ಯಾಸ’ ಎನ್ನುವುದು ಸೂಕ್ತ. ಕೊಡುವ ಹೋಂವರ್ಕ್ ಕಗ್ಗಂಟು, ಒಗಟಾದರೆ ನಿಸ್ಸಂದೇಹವಾಗಿ ಅದು ಮಕ್ಕಳಿಗೆ ಹೊರೆ. ಹಾಗಾಗಿ ಆಯಾ ಬೋಧಕರು ಸರಳವಾದರೂ ಪರಿಕಲ್ಪನೆಗಳಿಂದ ಸಮೃದ್ಧವಾಗಿರುವ ಹೋಂವರ್ಕ್ ನಿಗದಿಗೊಳಿಸಬೇಕು.

ಅಮೆರಿಕದ ಹಿರಿಯ ಬರಹಗಾರ್ತಿ ಲಿಲಿ ಟಾಮ್ಲಿನ್ ಅವರ ಮೌಲಿಕ ನುಡಿಯಿದು: ‘ಹೋಂವರ್ಕ್‌ನಿಂದ ಆಚೆಗೂ ಮಕ್ಕಳಲ್ಲಿ ಏನಾದರೂ ಹೊಸತು ಸ್ಫುರಿಸುವ ‘ಹೋಂವರ್ಕ್’ ಅನ್ನು ಮನೆಗೊಯ್ಯಲು ಹೇಳುವ ಶಿಕ್ಷಕರನ್ನು ಇಷ್ಟಪಡುತ್ತೇನೆ’.

ಪೋಷಕರು ತಮ್ಮ ಮಕ್ಕಳ ವಿದ್ಯಾರ್ಜನೆಯಲ್ಲಿ ಒಳಗೊಂಡರೆ ಆಗುವ ಪ್ರಯೋಜನಗಳು ಬಹುಮುಖಿ. ಮಕ್ಕಳಲ್ಲಿ ಜೀವನವಿಡೀ ಉತ್ತಮ ಶೈಕ್ಷಣಿಕ ಅನುಭವ ಅನುರಣಿಸುತ್ತದೆ. ಜ್ಞಾನ, ಸಾಮಾಜಿಕ ಕೌಶಲ, ಸದ್ವರ್ತನೆಯು ಶಾಲೆ ಮತ್ತು ಮನೆಯ ಸಹಯೋಗದಿಂದ ತಮಗೆ ಪ್ರಾಪ್ತವಾದ ಉಡುಗೊರೆ ಎಂದು ಅವರು ನೆನೆಯುತ್ತಾರೆ.

ವಾಚಕರ ವಾಣಿ

ಈಡೇರಲಿ ನೌಕರರ ಒಕ್ಕೊರಲಿನ ಬೇಡಿಕೆ

ಅಭಿವೃದ್ಧಿ ಕಾರ್ಯಗಳ ಅನುಷ್ಠಾನದಲ್ಲಿ ಮತ್ತು ಸುಗಮ ಆಡಳಿತದಲ್ಲಿ ಸರ್ಕಾರಿ ನೌಕರರ ಪಾತ್ರ ಹಿರಿದಾದುದು. ಆದರೆ 2006ರಿಂದ ನೇಮಕಗೊಂಡ ಸರ್ಕಾರಿ ನೌಕರರಿಗೆ ಅನ್ವಯವಾಗುವ ಹೊಸ ಪಿಂಚಣಿ ವ್ಯವಸ್ಥೆ (ಎನ್‌ಪಿಎಸ್) ಮಾರಕವಾಗಿ ಪರಿಣಮಿಸಿದೆ. ಈ ವ್ಯವಸ್ಥೆಯನ್ನು ಹೋಗಲಾಡಿಸಿ ಹಳೆ ಪಿಂಚಣಿ ವ್ಯವಸ್ಥೆಯನ್ನು (ಒಪಿಎಸ್) ಜಾರಿಗೆ ತರಬೇಕೆಂಬುದು ನೌಕರರ ಒಕ್ಕೊರಲಿನ ಬೇಡಿಕೆಯಾಗಿದೆ.

ನೂತನ ಸರ್ಕಾರವು ಸರ್ಕಾರಿ ನೌಕರರಿಗೆ ಇದರ ಹೊರತಾಗಿ ಉಚಿತವಾಗಿ ಕೊಡುವ ಮತ್ತ್ಯಾವುದೇ ಯೋಜನೆಗಳನ್ನು ಜಾರಿಗೆ ತರುವುದು ಬೇಡ. ಅಂತಹವುಗಳನ್ನು ಬಡತನದ ರೇಖೆಗಿಂತ ಕೆಳಗೆ ಇರುವವರಿಗೆ ಪ್ರಾಮಾಣಿಕವಾಗಿ ತಲುಪಿಸುವ ಕಾರ್ಯ ಆಗಲಿ.

ಶ್ರೀನಿವಾಸ ಎನ್. ದೇಸಾಯಿ, ತಲ್ಲೂರ

ಸಂಪ್ರದಾಯ ಪಾಲನೆಯಾಗಲಿ

ನಮ್ಮಲ್ಲಿ ಪ್ರಧಾನಮಂತ್ರಿಯವರದು ಚುನಾಯಿತ ಹುದ್ದೆಯಾದರೆ, ರಾಷ್ಟ್ರಪತಿಯವರದು ಸಾಂವಿಧಾನಿಕ ಹುದ್ದೆ. ಇವರು ಲೋಕತಂತ್ರದ ಮೇಲ್ವಿಚಾರಕ, ಶಾಸಕಾಂಗ, ಕಾರ್ಯಾಂಗಗಳ ಪಾಲಕ, ಸಂರಕ್ಷಕ. ಪ್ರತಿವರ್ಷ ಅಧಿವೇಶನದ ಪ್ರಾರಂಭದಲ್ಲಿ ರಾಷ್ಟ್ರಪತಿಯವರ ಭಾಷಣ ಇರುತ್ತದೆ. ಸಂಸತ್ತಿನ ಯಾವುದೇ ಮಹತ್ವದ ಹೊಸ ಕಾರ್ಯವನ್ನು ರಾಷ್ಟ್ರಪತಿಯವರಿಂದಲೇ ಆರಂಭಿಸುವ ಸಂಪ್ರದಾಯ ಇದೆ. ಆದರೆ, ಇದೀಗ ಹೊಸ ಸಂಸತ್ ಭವನದ ಕಟ್ಟಡವನ್ನು ಪ್ರಧಾನಿಯವರೇ ಉದ್ಘಾಟಿಸುತ್ತಿರುವುದು ಆಭಾಸಕರ. ಇದೇ ಕಾರಣಕ್ಕೆ ಬಹುತೇಕ ವಿರೋಧ ಪಕ್ಷಗಳು ಸಮಾರಂಭವನ್ನು ಬಹಿಷ್ಕರಿಸಲು ಮುಂದಾಗಿವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷಗಳಿಲ್ಲದೇ ನಡೆಯುವ ಕಾರ್ಯಕ್ರಮಗಳು ಆಳುವ ಪಕ್ಷಕ್ಕೆ ಮುಜುಗರ ಉಂಟುಮಾಡುತ್ತವೆ.

ರಾಮಚಂದ್ರ ಎಸ್. ಕುಲಕರ್ಣಿ, ಧಾರವಾಡ

ಯಾರನ್ನೋ ಮೆಚ್ಚಿಸುವ ಖಯಾಲಿಯೇಕೆ?

ಸಚಿವ ಎಂ.ಬಿ.ಪಾಟೀಲ ಅವರು ‘ಸಿದ್ದರಾಮಯ್ಯ ಪೂರ್ಣಾವಧಿ ಮುಖ್ಯಮಂತ್ರಿಯಾಗಲಿದ್ದಾರೆ’ ಎಂದು ಹೇಳಿಕೆ ನೀಡಿ ಅನಗತ್ಯ ಗೊಂದಲ ಸೃಷ್ಟಿಸಿದ್ದಾರೆ. ಆಗಾಗ್ಗೆ ವಿವಾದಾತ್ಮಕ ಹೇಳಿಕೆಗಳನ್ನು ನೀಡುವುದು ಇತ್ತೀಚೆಗೆ ರಾಜಕಾರಣಿಗಳಿಗೆ ಒಂದು ಫ್ಯಾಷನ್ ಆಗಿಬಿಟ್ಟಿದೆ. ಹಿಂದಿನ ಸರ್ಕಾರದ ಅವಧಿಯಲ್ಲಂತೂ ಇದು ಮಾಮೂಲಿಯಾಗಿಬಿಟ್ಟಿತ್ತು. ಈಗಲೂ ಈ ಚಾಳಿ ಮುಂದುವರಿಯುವಂತೆ ಕಾಣುತ್ತಿದೆ. ಈಗ ತಾನೇ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಅದರ ಮುಂದೆ ಸವಾಲುಗಳು ಬಹಳಷ್ಟಿವೆ. ಅವುಗಳತ್ತ ಗಮನಹರಿಸುವುದನ್ನು ಬಿಟ್ಟು, ಕಾಲ ನಿರ್ಧರಿಸಬೇಕಾದ ಇಂಥ ವಿಷಯಗಳ ಬಗ್ಗೆ ನಾಲಿಗೆ ಹರಿಯಬಿಟ್ಟು ಯಾರನ್ನೋ ಮೆಚ್ಚಿಸುವ ಖಯಾಲಿ ಪಾಟೀಲರಂಥ ಅನುಭವಿ ರಾಜಕಾರಣಿಗೆ ಶೋಭೆ ತರುವುದಿಲ್ಲ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರು, ಕೊಪ್ಪ

ಡಿಜಿಟಲ್ ಪಾವತಿ: ಸಿಗಲಿ ಪ್ರೇರಣೆ

₹ 2000 ಮುಖಬೆಲೆಯ ನೋಟುಗಳನ್ನು ಬ್ಯಾಂಕಿನಲ್ಲಿ ಜಮಾ ಮತ್ತು ವಿನಿಮಯ ಮಾಡಲು ಜನ ಅಷ್ಟೇನೂ ಸರದಿ ಸಾಲಿನಲ್ಲಿ ನಿಂತು ಬ್ಯಾಂಕ್ ಕಿಕ್ಕಿರಿದು ತುಂಬುತ್ತಿಲ್ಲ. ಜನ ಗಾಬರಿಯೂ ಆಗಿಲ್ಲ. ಕಾರಣ, ಬಹುತೇಕ ಎರಡು ಸಾವಿರದ ನೋಟುಗಳು ಅದಾಗಲೇ ಕಣ್ಮರೆಯಾಗಿವೆ. ಅವು ಜನರ ಬಳಿ ಹೆಚ್ಚಿನ ಪ್ರಮಾಣದಲ್ಲಿ ಇಲ್ಲ. ಇದಕ್ಕೆ ಮುಖ್ಯವಾದ ಮತ್ತೊಂದು ಕಾರಣ ಎಂದರೆ ಡಿಜಿಟಲ್ ಪಾವತಿ ಅಥವಾ ಯುಪಿಐ ವ್ಯವಸ್ಥೆ.

ಡಿಜಿಟಲ್ ಪಾವತಿ ವ್ಯವಸ್ಥೆ ಗ್ರಾಮೀಣ ಭಾಗದಲ್ಲಿಯೂ ಹೆಚ್ಚಾಗಿದೆ ಎಂದು ಎಸ್‌ಬಿಐ ತನ್ನ ವರದಿಯಲ್ಲಿ ಹೇಳಿದೆ. ಆದರೆ ಕೆಲವು ಬ್ಯಾಂಕ್‌ಗಳಲ್ಲಿ ಹಣ ಜಮೆ ಮಾಡಿ ಅಥವಾ ಹಣ ಹಿಂತೆಗೆದುಕೊಂಡು ಪಾಸ್‌ಬುಕ್ ಎಂಟ್ರಿಗೆ ಕೊಡುವಾಗ ಅಲ್ಲಿನ ಸಿಬ್ಬಂದಿ ‘ನೀವು ಸಿಕ್ಕ ಸಿಕ್ಕ ಹಾಗೆ ಫೋನ್ ಪೇ, ಗೂಗಲ್ ಪೇ ಬಳಸುತ್ತಿದ್ದೀರಿ. ಪಾಸ್‌ಬುಕ್ ಎಂಟ್ರಿ ಮಾಡಲು ಆಗುವುದಿಲ್ಲ’ ಎನ್ನುವ ಮೂಲಕ, ಗ್ರಾಹಕರು ಡಿಜಿಟಲ್ ಪಾವತಿ ವ್ಯವಸ್ಥೆಯ ಬಳಕೆ ಕಡಿಮೆ ಮಾಡುವ ನಿರ್ಣಯ ತೆಗೆದುಕೊಳ್ಳುವ ರೀತಿಯಲ್ಲಿ ವರ್ತಿಸುತ್ತಾರೆ. ಬ್ಯಾಂಕ್ ಸಿಬ್ಬಂದಿಯ ಇಂತಹ ವರ್ತನೆ ಮೊದಲು ನಿಲ್ಲಬೇಕು. ಡಿಜಿಟಲ್ ಪಾವತಿ ವ್ಯವಸ್ಥೆ ಬಳಸಲು ಪ್ರೇರಣೆ ನೀಡಬೇಕು.

ಬಸನಗೌಡ ಮಂಜುನಾಥಗೌಡ ಪಾಟೀಲ, ಯರಗುಪ್ಪಿ

ಮಾತೆ- ಮಾನವೀಯತೆ

ರಾಜಧಾನಿ ಬೆಂಗಳೂರಿನ
ಅಂಡರ್‌ಪಾಸ್ ಒಂದರಲ್ಲಿ
ಮಳೆಯ ನೀರಿನಲ್ಲಿ ಸಿಲುಕಿ,
ಪ್ರಾಣಾಪಾಯದಲ್ಲಿ ಇದ್ದವರನ್ನು
ರಕ್ಷಿಸಲು ಮಹಿಳೆಯೊಬ್ಬರು
ತಮ್ಮ ಸೀರೆಯನ್ನೇ ಬಿಚ್ಚಿಕೊಟ್ಟರಂತೆ!
ಇದೇನು ಸಾಮಾನ್ಯ ಮಾತೇ?
ಮಾತೆ ಮೆರೆದರು
ಅಪೂರ್ವ ಮಾನವೀಯತೆ!

ಮ.ಗು.ಬಸವಣ್ಣ, ನಂಜನಗೂಡು

ಹೋಟೆಲ್ ಆಹಾರ: ಬೆಲೆ ನಿಯಂತ್ರಿಸಿ

ಮಂಡ್ಯದ ಹೋಟೆಲೊಂದಕ್ಕೆ ಇತ್ತೀಚೆಗೆ ಉಪಾಹಾರಕ್ಕೆಂದು ಹೋಗಿದ್ದೆ. ಎರಡು ಇಡ್ಲಿ ಸಾಂಬಾರ್, ಒಂದು ಸೆಟ್ ದೋಸೆ ಮಾತ್ರ ಸೇವಿಸಿದೆ. ಕಾಫಿ ಬೇಡ ಎಂದು ಹೇಳಿ ಬಿಲ್ ಕೇಳಿದೆ. ಬಿಲ್ ₹ 105 ಬಂದದ್ದು ನೋಡಿ ಆಶ್ಚರ್ಯವಾಯಿತು. ಬಡವರು, ರೈತರು, ವಿದ್ಯಾರ್ಥಿಗಳು ಹೋಟೆಲ್‌ಗಳಲ್ಲಿ ತಿಂಡಿ-ಊಟ ಸೇವಿಸಲು ಹೋಗುವ ಮುನ್ನ ಯೋಚಿಸಬೇಕಾದಂತಹ ಕಾಲ ಇದು. ಈಗ ಹೊಸ ಸರ್ಕಾರ ‘ಇಂದಿರಾ ಕ್ಯಾಂಟೀನ್’ಗಳಿಗೆ ಮರುಜೀವ ಕೊಡುತ್ತಿರುವುದು ಸ್ವಾಗತಾರ್ಹ. ನಾನು ವಿದ್ಯಾರ್ಥಿಯಾಗಿದ್ದಾಗ ಅಂದಿನ ಕಾಲದಲ್ಲಿ ಶ್ರೀರಾಮುಲು ಎಂಬ ಸಚಿವರು ರಾಜ್ಯದ ಹೋಟೆಲ್‌ಗಳಲ್ಲಿ ಊಟ, ತಿಂಡಿಯ ಬೆಲೆ ನಿಯಂತ್ರಣ ಮಾಡಿದ್ದರು. ಹೋಟೆಲ್‌ಗಳನ್ನು ಎ, ಬಿ, ಸಿ, ಡಿ ಎಂದು ಗ್ರೇಡ್‌ಗಳಾಗಿ ವಿಂಗಡಿಸಿ, ತಿಂಡಿಗಳ ಗುಣಮಟ್ಟ ಕಾಯ್ದುಕೊಳ್ಳಬೇಕೆಂದು, ಕಾಫಿ ಇಂತಿಷ್ಟು ಎಂ.ಎಲ್ ಇರಲೇಬೇಕೆಂದು ತಿಳಿಸಲಾಗಿತ್ತು. ಇಂದಿರಾ ಕ್ಯಾಂಟೀನ್‌ಗಳನ್ನು ಎಲ್ಲೆಡೆ ತೆರೆಯುವುದು ಕಷ್ಟಸಾಧ್ಯ. ಈಗಲೂ ಹಾಗೆಯೇ ಹೋಟೆಲ್‌ಗಳಿಗೆ ಗ್ರೇಡ್‌ಗಳನ್ನು ನಿಗದಿಪಡಿಸಿ, ಸಾಮಾನ್ಯ ಹೋಟೆಲ್‌ಗಳಲ್ಲಿ ಕಡಿಮೆ ಬೆಲೆಯಲ್ಲಿ ಊಟ, ತಿಂಡಿ ತಿನಿಸು ದೊರೆಯುವಂತೆ ಮಾಡಲು ಸರ್ಕಾರ ಮುಂದಾಗಬೇಕು.

ಸಿ.ಸಿದ್ದರಾಜು ಆಲಕೆರೆ, ಮಂಡ್ಯ


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

'ಸ್ಮಾರ್ಟ್ ಸಿಟಿ' ಪ್ರಗತಿಗೆ ಕೇಂದ್ರವೇ ಅಡ್ಡಗಾಲು

ಪ್ರಧಾನಿ ನರೇಂದ್ರ ಮೋದಿ ಅವರ ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ 'ಸ್ಮಾರ್ಟ್ ಸಿಟಿ ಅಭಿಯಾನ' ಸಹ ಒಂದು. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಸಮಾನ ವೆಚ್ಚದಲ್ಲಿ ಈ ಯೋಜನೆ ಅನುಷ್ಠಾನವಾಗಬೇಕು. ರಾಜ್ಯ ಸರ್ಕಾರಗಳು ಯೋಜನೆಯ ಅನುದಾನದ ವೆಚ್ಚವನ್ನೂ ಮೀರಿ, ಕಾಮಗಾರಿಗಳನ್ನು ನಡೆಸಿವೆ. ಆದರೆ, ಕೇಂದ್ರ ಸರ್ಕಾರವು ತಾನು ಕೊಡಬೇಕಿದ್ದಷ್ಟು ಅನುದಾನವನ್ನು ನೀಡಿಯೇ ಇಲ್ಲ


ಅನುದಾನ ನೀಡದ ಕೇಂದ್ರ ಸರ್ಕಾರ

ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ₹ 48,000 ಕೋಟಿ ಅನುದಾನ ನೀಡಬೇಕಿತ್ತು. ಅಷ್ಟೇ ಮೊತ್ತದ ಅನುದಾನವನ್ನು ರಾಜ್ಯ ಸರ್ಕಾರಗಳು ಯೋಜನೆ ಅನುಷ್ಠಾನಕ್ಕೆ ಒದಗಿಸಬೇಕಿತ್ತು. ಯೋಜನೆ ಆರಂಭವಾದ ಎಂಟು ವರ್ಷಗಳಲ್ಲಿ ರಾಜ್ಯ ಸರ್ಕಾರಗಳು, ಕೇಂದ್ರ ಸರ್ಕಾರ ನೀಡಬೇಕಿದ್ದ ಅನುದಾನಕ್ಕಿಂತಲೂ ಹೆಚ್ಚು ಮೊತ್ತವನ್ನು ಅನುಷ್ಠಾನಕ್ಕೆ ಬಳಕೆ ಮಾಡಿವೆ. ಆದರೆ, ಕೇಂದ್ರ ಸರ್ಕಾರವು ತಾನು ಘೋಷಿಸಿದ್ದಷ್ಟು ಅನುದಾನವನ್ನೂ ಪೂರ್ಣ ಪ್ರಮಾಣದಲ್ಲಿ ಬಿಡುಗಡೆ ಮಾಡಿಲ್ಲ



ಮೂಲ ಗಡುವಿನೊಳಗೆ ದೊರೆಯದ ಅನುದಾನ

- ₹48,000 ಕೋಟಿ — 2020–21ನೇ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಕೇಂದ್ರ ಸರ್ಕಾರವು ಬಿಡುಗಡೆ ಮಾಡಬೇಕಿದ್ದ ಅನುದಾನ
- ₹21,854 ಕೋಟಿ — 2015–16ರಿಂದ 2020–21ರವರೆಗೆ ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ಘೋಷಿಸಿದ ಅನುದಾನ
- ₹19,790 ಕೋಟಿ — 2015–16ರಿಂದ 2020–21ರವರೆಗೆ ಕೇಂದ್ರ ಸರ್ಕಾರವು ಬಜೆಟ್‌ನ ಪರಿಷ್ಕೃತ ಅಂದಾಜಿನಲ್ಲಿ ತೆಗೆದಿರಿಸಿದ ಅನುದಾನ
- ₹19,711 ಕೋಟಿ — 2015–16ರಿಂದ 2020–21ರವರೆಗೆ ಕೇಂದ್ರ ಸರ್ಕಾರವು ನೀಡಿದ್ದ ಅನುದಾನದಲ್ಲಿ ವೆಚ್ಚ ಮಾಡಲಾದ ಮೊತ್ತ



ವಿಸ್ತರಿಸಿದ ಗಡುವಿನೊಳಗೂ ಸಿಗದ ಅನುದಾನ

- ₹48,000 ಕೋಟಿ — 2020–21ನೇ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಕೇಂದ್ರ ಸರ್ಕಾರವು ನೀಡಬೇಕಿದ್ದ ಅನುದಾನ
- ₹2.05 ಲಕ್ಷ ಕೋಟಿ — ಈ ಯೋಜನೆ ಅಡಿ ಈವರೆಗೆ ಕೈಗೆತ್ತಿಕೊಂಡಿರುವ ಕಾಮಗಾರಿಗಳಿಗೆ ತಗಲುವ ವೆಚ್ಚ
- ₹1 ಲಕ್ಷ ಕೋಟಿ — ಈ ಯೋಜನೆ ಅಡಿ ಈವರೆಗೆ ಕಾಮಗಾರಿ ಪೂರ್ಣಗೊಂಡಿರುವ ಚಟುವಟಿಕೆಗಳ ಒಟ್ಟು ವೆಚ್ಚ
- ₹36,561 ಕೋಟಿ — 2022–23ನೇ ಆರ್ಥಿಕ ವರ್ಷದ ವೇಳೆಗೆ ಈ ಯೋಜನೆಗೆ ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುವ ಅನುದಾನದ ಮೊತ್ತ

ದೇಶದ ಆಯ್ದ ನೂರು ನಗರಗಳನ್ನು 2016ರಲ್ಲಿ 'ಸ್ಮಾರ್ಟ್ ಸಿಟಿ' ಎಂದು ಘೋಷಿಸಲಾಗಿತ್ತು. ನಂತರದ ಐದು ವರ್ಷಗಳಲ್ಲಿ ಈ ನಗರಗಳನ್ನು ಸ್ಮಾರ್ಟ್ ಆಗಿಸುವ ಹತ್ತಾರು ಕಾಮಗಾರಿಗಳನ್ನು, ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳುವುದಾಗಿ ಕೇಂದ್ರ ಸರ್ಕಾರವು ಹೇಳಿತ್ತು. ಪ್ರಧಾನಿ ನರೇಂದ್ರ ಮೋದಿ ಅವರ ಮೆಚ್ಚಿನ ಕಾರ್ಯಕ್ರಮಗಳಲ್ಲಿ ಇದೂ ಒಂದಾಗಿತ್ತು. ಆದರೆ, ಯೋಜನೆ ಘೋಷಣೆಯಾಗಿ ಎಂಟು ವರ್ಷಗಳಾದರೂ ಯಾವೊಂದು ನಗರದಲ್ಲೂ ಯೋಜನೆ ಪೂರ್ಣಪ್ರಮಾಣದಲ್ಲಿ ಅನುಷ್ಠಾನವಾಗಿಲ್ಲ. 2021ಕ್ಕೆ ಪೂರ್ಣಗೊಳ್ಳಬೇಕಿದ್ದ ಯೋಜನೆಯನ್ನು, ಈಗಾಗಲೇ ಎರಡು ಬಾರಿ ವಿಸ್ತರಿಸಲಾಗಿದೆ.


2016ರಲ್ಲಿ ಯೋಜನೆಯನ್ನು ಘೋಷಿಸಿದಾಗ ನಂತರದ ಐದು ವರ್ಷಗಳಲ್ಲಿ, ಪ್ರತಿ ನಗರಕ್ಕೆ ಪ್ರತಿ ವರ್ಷ ₹100 ಕೋಟಿ ಅನುದಾನ ಒದಗಿಸಲಾಗುವುದು ಎಂದು ಕೇಂದ್ರ ಸರ್ಕಾರವು ಘೋಷಿಸಿತ್ತು. ಈ ಪ್ರಕಾರ ಪ್ರತಿ ನಗರಕ್ಕೆ ಐದು ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ₹500 ಕೋಟಿ ಅನುದಾನ ದೊರೆಯಬೇಕಿತ್ತು. ಈ ಲೆಕ್ಕಾಚಾರದಂತೆ, 2020–21ನೇ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಕೇಂದ್ರ ಸರ್ಕಾರವು ಒಟ್ಟು ₹50,000 ಕೋಟಿ ನೀಡಬೇಕಿತ್ತು. ₹48,000 ಕೋಟಿ ನೀಡುವುದಾಗಿ ಸರ್ಕಾರವು ಘೋಷಣೆ ಮಾಡಿತ್ತು. ಆದರೆ, ಸ್ಮಾರ್ಟ್ ಸಿಟಿ ಯೋಜನೆ ಆರಂಭವಾಗಿ ಎಂಟು ವರ್ಷ ಕಳೆದರೂ ಕೇಂದ್ರ ಸರ್ಕಾರವು ಈವರೆಗೆ ಬಿಡುಗಡೆ ಮಾಡಿರುವ ಅನುದಾನವು ಬಿಡುಗಡೆ ಮಾಡಬೇಕಿದ್ದ ಮೊತ್ತದ ಅರ್ಧದಷ್ಟೂ ಆಗಿಲ್ಲ.

7,821 ಈ ಯೋಜನೆ ಅಡಿ ಕೈಗೊಳ್ಳಲಾಗಿರುವ ಕಾಮಗಾರಿಗಳ ಸಂಖ್ಯೆ

5,343 ಪೂರ್ಣಗೊಂಡಿರುವ ಕಾಮಗಾರಿಗಳ ಸಂಖ್ಯೆ

ಅನುದಾನ ಬಿಡುಗಡೆಯಾಗದೇ ಇರುವುದು ಈ ಯೋಜನೆ ಕುಂಟುತ್ತಾ ಸಾಗಲು ಪ್ರಮುಖ ಕಾರಣ ಎಂದು ವಸತಿ ಮತ್ತು ನಗರಾಭಿವೃದ್ಧಿ ವ್ಯವಹಾರಗಳ ಸಂಸದೀಯ ಸ್ಥಾಯಿ ಸಮಿತಿ ಸಲ್ಲಿಸಿರುವ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಯೋಜನೆ ಆರಂಭಿಸಿದಾಗ 2020–21ರ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಕ್ಕೆ ಬರಬೇಕು ಎಂದು ಗಡುವು ಹಾಕಿಕೊಳ್ಳಲಾಗಿತ್ತು. ಆದರೆ, ಅದು ಸಾಧ್ಯವಾಗದಿದ್ದ ಕಾರಣ, ಯೋಜನೆಯನ್ನು ಎರಡು ವರ್ಷ ವಿಸ್ತರಿಸಲಾಗಿತ್ತು. ಆ ಪ್ರಕಾರ 2023ರ ಏಪ್ರಿಲ್ ಅಂತ್ಯದ ವೇಳೆಗೆ ಯೋಜನೆ ಪೂರ್ಣಗೊಳ್ಳಬೇಕಿತ್ತು. ಆ ಗಡುವಿನ ಒಳಗೂ ಯೋಜನೆ ಪೂರ್ಣಗೊಳ್ಳದ ಕಾರಣ, ಈಗ 2024ರ ಏಪ್ರಿಲ್‌ವರೆಗೂ ಯೋಜನೆಯನ್ನು ಎರಡನೇ ಬಾರಿಗೆ ವಿಸ್ತರಿಸಲಾಗಿದೆ.

ಬಿಡುಗಡೆಯಾದ ಅನುದಾನ ಬಹುತೇಕ ವೆಚ್ಚ



- ಕೇಂದ್ರ ಬಜೆಟ್‌ನಲ್ಲಿ ಸ್ಮಾರ್ಟ್ ಸಿಟಿ ಯೋಜನೆಗೆ ಆಯಾ ವರ್ಷ ಮೀಸಲಿರಿಸುವ ಅನುದಾನದ ಪೈಕಿ, ಬಹುತೇಕ ಹಣವನ್ನು ಪ್ರತೀ ವರ್ಷ ವೆಚ್ಚ ಮಾಡಲಾಗಿದೆ
- ಬಜೆಟ್ ಅಂದಾಜಿಗೆ ಹೋಲಿಸಿದರೆ, ಪರಿಷ್ಕೃತ ಅಂದಾಜಿನಲ್ಲಿ ಯೋಜನೆಯ ಮೊತ್ತವನ್ನು ಕೆಲವು ವರ್ಷಗಳಲ್ಲಿ ಹೆಚ್ಚಿಸಲಾಗಿದೆ. ಆದರೆ ಕೆಲವು ವರ್ಷದ ಪರಿಷ್ಕೃತ ಅಂದಾಜಿನಲ್ಲಿ ಅನುದಾನದ ಮೊತ್ತವನ್ನು ಕಡಿತ ಮಾಡಲಾಗಿದೆ
- 2019-20 ಹಾಗೂ 2020–21ನೇ ಆರ್ಥಿಕ ವರ್ಷಗಳಲ್ಲಿ ಬಜೆಟ್‌ನಲ್ಲಿ ಘೋಷಿಸಿದ್ದ ಅನುದಾನವನ್ನು ಪರಿಷ್ಕೃತ ಬಜೆಟ್‌ನಲ್ಲಿ ಶೇ 47ರಷ್ಟು ಕಡಿಮೆ ಮಾಡಲಾಗಿದೆ; ಯೋಜನೆ ಆರಂಭವಾದ 2015–16ನೇ ಆರ್ಥಿಕ ವರ್ಷದಲ್ಲಿ ಶೇ 25ರಷ್ಟು ಅನುದಾನವನ್ನು ಕಡಿತ ಮಾಡಲಾಗಿತ್ತು
- ಆದರೆ 2016-17, 2021-22 ಹಾಗೂ 2022–23ನೇ ಆರ್ಥಿಕ ವರ್ಷದಲ್ಲಿ ಬಜೆಟ್ ಅಂದಾಜಿಗಿಂತ ಪರಿಷ್ಕೃತ ಅಂದಾಜಿನಲ್ಲಿ ಅನುದಾನವನ್ನು ಹೆಚ್ಚಿಸಲಾಗಿದೆ
- 2022-23ನೇ ಆರ್ಥಿಕ ವರ್ಷದ ಫೆಬ್ರುವರಿ 1ವರೆಗಿನ ಮಾಹಿತಿ ಪ್ರಕಾರ, ಪರಿಷ್ಕೃತ ಬಜೆಟ್‌ನಲ್ಲಿ ಘೋಷಿಸಲಾಗಿದ್ದ ₹8,800 ಕೋಟಿ ಅನುದಾನದ ಪೈಕಿ ₹7,195.16 ಕೋಟಿ ಹಣವನ್ನು ಈಗಾಗಲೇ ವೆಚ್ಚ ಮಾಡಲಾಗಿದೆ

ಆಧಾರ: ವಸತಿ ಮತ್ತು ನಗರಾಭಿವೃದ್ಧಿ ವ್ಯವಹಾರಗಳ ಸಂಸದೀಯ ಸ್ಥಾಯಿ ಸಮಿತಿ ವರದಿ, ಪಿಟಿಐ, ಸ್ಮಾರ್ಟ್ ಸಿಟಿ ಮಿಷನ್‌ನ ಡ್ಯಾಶ್‌ಬೋರ್ಡ್

ಪ್ರಜಾವಾಣಿ ಗ್ರಾಫಿಕ್ಸ್| ಮಂಜುನಾಥ ಹುಲಕೊಪ್ಪದ

ಚಂದ್ರನ ಬೃಹತ್ ಚಿತ್ರ 'ಗಿಗಾಮೂನ್'

ಪೂರ್ಣಚಂದ್ರನಾಗಲೀ, ಅರ್ಧಚಂದ್ರನಾಗಲಿ ಈವರೆಗೆ ಲಭ್ಯವಿರುವ ಚಿತ್ರಗಳಲ್ಲಿ ಚಂದ್ರ ಕಾಣುವುದು ಕಪ್ಪು–ಬಿಳುಪು ಬಣ್ಣದಲ್ಲಿ. ಬಾಹ್ಯಾಕಾಶ ಸಂಶೋಧನಾ ಸಂಸ್ಥೆಗಳಾದ ನಾಸಾ, ಇಸ್ರೊ ತೆಗೆದ ಕೆಲವು ಚಿತ್ರಗಳಲ್ಲಿ ಚಂದ್ರನ ಚಿತ್ರಗಳಲ್ಲಿ ಕಪ್ಪು–ಬಿಳುಪು ಹೊರತಾದ ಹಲವು ಕೆಲವು ಬಣ್ಣಗಳು ಗೋಚರಿಸುತ್ತವೆ. ಆದರೂ, ಆ ಬಣ್ಣಗಳು ಮತ್ತು ಚಂದ್ರನ ಮೇಲ್ಮೈನ ಚಿತ್ರಣ ಸ್ಪಷ್ಟವಾಗೇನೂ ಇಲ್ಲ. ಆದರೆ, ಚಂದ್ರನ ಮೇಲ್ಮೈನಲ್ಲಿ ಕಪ್ಪು–ಬಿಳುಪು ಹೊರತಾದ ಬಣ್ಣಗಳಿಂದ ಕೂಡಿರುವ ರಚನೆಗಳೂ ಇರುವುದನ್ನು ಸ್ಪಷ್ಟವಾಗಿ ತೋರಿಸುವ ಚಿತ್ರವನ್ನು (ಚಿತ್ರಗಳನ್ನು) ಸೆರೆಹಿಡಿಯಲಾಗಿದೆ. ಈ ಚಿತ್ರವನ್ನು 'ಗಿಗಾಮೂನ್' ಎಂದು ಕರೆಯಲಾಗಿದೆ.

ಅಮೆರಿಕದ ಖಗೋಳ ಛಾಯಾಗ್ರಾಹಕ ಆ್ಯಂಡ್ರೀವ್ ಮೆಕ್‌ಕಾರ್ತಿ ಈ ಚಿತ್ರವನ್ನು ಸೆರೆಹಿಡಿದಿದ್ದಾರೆ. ಇದನ್ನು ಬರಿಯ ಚಿತ್ರ ಎಂದರೆ ತಪ್ಪಾಗುತ್ತದೆ, ಬದಲಿಗೆ ಚಿತ್ರಗಳು ಎಂದರೆ ಸರಿಯಾದೀತು. ಏಕೆಂದರೆ, ಚಂದ್ರನ ಒಟ್ಟು 2.80 ಲಕ್ಷ ಚಿತ್ರಗಳನ್ನು ಸೆರೆಹಿಡಿದು 'ಗಿಗಾಮೂನ್' ಚಿತ್ರವನ್ನು ರೂಪಿಸಲಾಗಿದೆ. ಸಾಮಾನ್ಯವಾಗಿ ನಾವು ಸ್ಮಾರ್ಟ್‌ಫೋನ್‌ಗಳಲ್ಲಿ, ಡಿಎಸ್‌ಎಲ್‌ಆರ್‌ಗಳಲ್ಲಿ ಸೆರೆಹಿಡಿಯುವ ಚಿತ್ರಗಳ ಪಿಕ್ಸಲ್ ಗಾತ್ರವು, ಹತ್ತಾರು ಮೆಗಾಪಿಕ್ಸಲ್‌ಗಳಲ್ಲಿ ಇರುತ್ತವೆ. ಆದರೆ ಮೆಕ್‌ಕಾರ್ತಿ ಸೆರೆಹಿಡಿದಿರುವ ಈ ಚಿತ್ರದ ಪಿಕ್ಸಲ್ ಗಾತ್ರವು, ಗಿಗಾಪಿಕ್ಸಲ್‌ನದ್ದು. ಹೀಗಾಗಿಯೇ ಈ ಚಿತ್ರವನ್ನು 'ಗಿಗಾಮೂನ್' ಎಂದು ಕರೆಯಲಾಗಿದೆ.

2.80 ಲಕ್ಷ ಚಿತ್ರಗಳನ್ನು ಪ್ರತ್ಯೇಕವಾಗಿ ಸೆರೆಹಿಡಿಯಲಾಗಿದೆ. ಈ ಎಲ್ಲಾ ಚಿತ್ರಗಳನ್ನು ಪರಸ್ಪರ ಜೋಡಿಸುವಾಗ ಕಂಪ್ಯೂಟರ್ ಹಲವು ಬಾರಿ ಕ್ರ್ಯಾಶ್ ಆಗಿದೆ. ಆದರೆ, ಹಲವು ವರ್ಷಗಳ ಶ್ರಮ ಅಂತಿಮವಾಗಿ ಅದ್ಭುತವಾದ ಫಲ ನೀಡಿದೆ ಎಂದು ಅವರು ತಮ್ಮ ಟ್ವೀಟ್‌ನಲ್ಲಿ ಬರೆದುಕೊಂಡಿದ್ದಾರೆ. ಚಂದ್ರನ ಬೇರೆ ಬೇರೆ ಭಾಗಗಳಲ್ಲಿ ಇರುವ ಘನೀಕರಿಸಿದ ಮಿಥೇನ್‌ನ ಮೇಲ್ಮೈ ಈಚಿತ್ರದಲ್ಲಿ ಕಾಣುತ್ತದೆ. ಅದು ನೀಲಿ ಬಣ್ಣದಲ್ಲಿದೆ. ಅದೇ ರೀತಿ ಕೆಂಪು ಬಣ್ಣದ ಖನಿಜ ವಸ್ತುಗಳೂ ಕಾಣುತ್ತವೆ. ಚಂದ್ರನ ಕುಳಿಗಳು, ಕಣಿವೆ ಪ್ರದೇಶಗಳೂ ಈ ಚಿತ್ರದಲ್ಲಿ ಸ್ಪಷ್ಟವಾಗಿ ಕಾಣುತ್ತವೆ.

'ಈ ಚಿತ್ರವನ್ನು ಸ್ಮಾರ್ಟ್‌ಫೋನ್‌ಗಳಲ್ಲಿ ಡೌನ್‌ಲೋಡ್ ಮಾಡಲು ಸಾಧ್ಯವಿಲ್ಲ. ಅತ್ಯಂತ ಶಕ್ತಿಯುತವಾದ ಕಂಪ್ಯೂಟರ್‌ಗಳಲ್ಲಿ ಡೌನ್‌ಲೋಡ್ ಮಾಡಿದರೂ, ಅದು ಕ್ರ್ಯಾಶ್ ಆಗುವ ಅಪಾಯವಿರುತ್ತದೆ' ಎಂದು ಮೆಕ್‌ಕಾರ್ತಿ ತಮ್ಮ ಜಾಲತಾಣದಲ್ಲಿ ಹೇಳಿಕೊಂಡಿದ್ದಾರೆ. ಈ ಚಿತ್ರವನ್ನು ಒಳಗೊಂಡ ಸೀಮಿತ ಸಂಖ್ಯೆಯ ಕಲಾಕೃತಿಗಳನ್ನು ಮೆಕ್‌ಕಾರ್ತಿ ಈಚೆಗೆ ಮಾರಾಟಕ್ಕೆ ಇಟ್ಟಿದ್ದರು. ಆ ಎಲ್ಲಾ ಕಲಾಕೃತಿಗಳೂ ಮಾರಾಟವಾಗಿವೆ. ಆದರೆ, ಈ 'ಗಿಗಾಮೂನ್'ನ ಕಂಪ್ರೆಸ್ ಮಾಡಲಾದ ಕಡತವನ್ನು ಅವರು ಟ್ವೀಟ್ ಮಾಡಿದ್ದಾರೆ. ಅದನ್ನು ಯಾರು ಬೇಕಾದರೂ ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದಿದ್ದಾರೆ.



ಆಧಾರ ಮತ್ತು ಚಿತ್ರಕೃಪೆ: ಕಾಸ್ಮಿಕ್ ಬ್ಯಾಕ್‌ಗ್ರೌಂಡ್.ಕಾಂ, ಆ್ಯಂಡ್ರೀವ್ ಮೆಕ್‌ಕಾರ್ತಿ

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ **ಶ್ರೀನಗರದ** ಬುಲೆವಾರ್ಡ್ ರಸ್ತೆಯಲ್ಲಿ ಕ್ಲಿಕ್ಕಿಸಲಾಗಿದೆ ಎಂದು ಹೇಳಲಾಗುವ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಜಮ್ಮು ಕಾಶ್ಮೀರದಲ್ಲಿ ಬದಲಾವಣೆಯ ಮಹಾಪರ್ವ ಆರಂಭವಾಗಿದ್ದು, ಈ ಚಿತ್ರವೇ ಅದ್ಭುತ ಬದಲಾವಣೆಯನ್ನು ಸಂಕೇತಿಸುತ್ತದೆ ಎಂದು ಸಾಮಾಜಿಕ ಜಾಲತಾಣ ಬಳಕೆದಾರರು ಹೇಳಿದ್ದಾರೆ. ಸೇವ್ ಯೂಥ್ ಸೇವ್ ಫ್ಯೂಚರ್ ಎಂಬ ಹೆಸರಿನ ಕಾಶ್ಮೀರದ ಸರ್ಕಾರೇತರ ಸಂಘಟನೆಯ ಮುಖ್ಯಸ್ಥ ವಜಾಹತ್ ಫಾರೂಕ್ ಭಟ್ ಎಂಬವರು ಈ ಚಿತ್ರವನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ. ಈ ಚಿತ್ರಕ್ಕೆ ಕೇಂದ್ರ ಸಚಿವೆ ಮೀನಾಕ್ಷಿ ಲೇಖಿ ಅವರು ಟ್ವಿಟರ್‌ನಲ್ಲಿ ಮೆಚ್ಚುಗೆ ಸೂಚಿಸಿದ್ದಾರೆ. ಜಿ–20 ಸಭೆಗೆ ಕಾಶ್ಮೀರಕ್ಕೆ ಬರುತ್ತಿರುವ ಗಣ್ಯರನ್ನು ಸ್ವಾಗತಿಸಲು ಬುಲೆವಾರ್ಡ್ ರಸ್ತೆ ಅದ್ದೂರಿಯಾಗಿ ಸಿದ್ಧಗೊಂಡಿದೆ ಎಂದು @aquibmir71 ಹೆಸರಿನ ಟ್ವಿಟರ್ ಖಾತೆಯಲ್ಲಿ ಉಲ್ಲೇಖಿಸಲಾಗಿದೆ. ಆದರೆ ಈ ಚಿತ್ರ ಕಾಶ್ಮೀರದ್ದಲ್ಲ, ಬದಲಾಗಿ ಬಾಂಗ್ಲಾದೇಶದ್ದು.



✓ **ಸಾಮಾಜಿಕ** ಜಾಲತಾಣಗಳಲ್ಲಿ ಹರಿದಾಡುತ್ತಿರುವ ಚಿತ್ರವು ಬಾಂಗ್ಲಾದೇಶದ ಪತೌಖಲಿ ಪಟ್ಟಣದಲ್ಲಿರುವ ಜೌತೋಲಾ ಪತೌಖಲಿ ಹೆಸರಿನ ಉದ್ಯಾನದ್ದು ಎಂದು 'ಆಲ್ಟ್ ನ್ಯೂಸ್' ವರದಿ ಮಾಡಿದೆ. ಗೂಗಲ್ ಸ್ಟ್ರೀಟ್‌ವ್ಯೂ ಮೂಲಕ ಪರಿಶೀಲಿಸಿದಾಗಲೂ ಇದು ದೃಢಪಟ್ಟಿದೆ. ಜಿ–20 ಸಭೆಗಾಗಿ ಶ್ರೀನಗರ ಸಜ್ಜಾಗಿದ್ದು, ಬುಲೆವಾರ್ಡ್ ರಸ್ತೆಯಲ್ಲಿ ಭದ್ರತಾ ಪಡೆ ನಿಗಾ ವಹಿಸಿರುವ ಸುದ್ದಿ ಹಾಗೂ ಚಿತ್ರವನ್ನು ಸಿಯಾಸತ್ ಸುದ್ದಿತಾಣ ವರದಿ ಮಾಡಿದೆ. ಬುಲೆವಾರ್ಡ್ ರಸ್ತೆಯ ನೈಜ ಚಿತ್ರಕ್ಕೂ, ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿರುವ ಚಿತ್ರಕ್ಕೂ ಸಂಬಂಧವೇ ಇಲ್ಲ ಎಂದು ಆಲ್ಟ್ ನ್ಯೂಸ್ ತಿಳಿಸಿದೆ. ಬಾಂಗ್ಲಾದೇಶದ ಉದ್ಯಾನದ ಚಿತ್ರವನ್ನೇ ಶ್ರೀನಗರದ ಚಿತ್ರ ಎಂದು ತಪ್ಪಾಗಿ ಅರ್ಥೈಸಿ ಹಂಚಿಕೊಳ್ಳಲಾಗುತ್ತಿದೆ ಎಂದು ತಿಳಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ರಹಸ್ಯದ ಎರಡು ನೆಲೆಗಳು

ಹೊರಗೆ, ವಿಶ್ವದಿನಾಚೆ, ದೂರದಲಿ, ನೀಲದಲಿ |
ಒಳಗೆ, ಹೃತ್ಕೂಪದಾಳದಲಿ, ಮುಸುಕಿನಲಿ ||
ನೆಲೆಗಳಿಂತೆರಡು ಮೂಲ ರಹಸ್ಯಕವುಗಳುಲಿ |
ಕಲೆತಂದು ನೀಂ ಜ್ಞಾನಿ - ಮಂಕುತಿಮ್ಮ || **892** ||

ಪದ-ಅರ್ಥ: ವಿಶ್ವದಿನಾಚೆ = ವಿಶ್ವದಿನ್ (ವಿಶ್ವದಿಂದ) + ಆಚೆ, ಹೃತ್ಕೂಪದಾಳದಲಿ = ಹೃತ್ಕೂಪದ (ಹೃದಯವೆಂಬ ಬಾವಿಯ) + ಆಳದಲಿ, ನೆಲೆಗಳಿಂತೆರಡು = ನೆಲೆಗಳು + ಇಂತು + ಎರಡು, ರಹಸ್ಯಕವುಗಳುಲಿ = ರಹಸ್ಯಕ + ಅವುಗಳ + ಉಲಿ(ಧ್ವನಿ).

ವಾಚ್ಯಾರ್ಥ: ಹೊರಗೆ, ವಿಶ್ವದಿಂದ ಆಚೆಗೆ, ದೂರದಲ್ಲಿ, ಆಕಾಶದಾಚೆಯ ಒಂದು ಧ್ವನಿ. ಒಳಗೆ, ಹೃದಯದಾಳದಲ್ಲಿ, ಅಜ್ಞಾನದ ಮುಸುಕಿನಿಂದ ಒಂದು ಧ್ವನಿ. ಇವೆರಡು ಮೂಲ ರಹಸ್ಯದ ನೆಲೆಗಳು. ಅವುಗಳ ಧ್ವನಿ ನಿನ್ನಲ್ಲಿ ಕಲೆತರೆ, ನೀನು ಜ್ಞಾನಿ.

ವಿವರಣೆ: ಈ ಕಗ್ಗ ಮೂಲ ರಹಸ್ಯದ ಎರಡು ನೆಲೆಗಳನ್ನು ಗುರುತಿಸುತ್ತದೆ. ಮೂಲರಹಸ್ಯ ಪರಬ್ರಹ್ಮ ವಸ್ತು. ಅದು ಎರಡು ನೆಲೆಗಳಲ್ಲಿ ಕಾರ್ಯಮಾಡುತ್ತದೆ. ಒಂದು ವ್ಯಕ್ತ ಅಥವಾ ದೃಶ್ಯ ಇನ್ನೊಂದು ಅವ್ಯಕ್ತ ಅಥವಾ ಅದೃಶ್ಯ. ಪರಸತ್ವ ವ್ಯಕ್ತವಾಗುವುದು ಯಾವಾಗ? ಅದು ಜಗತ್ತಿನ ರೂಪದಲ್ಲಿ ಕಂಡಾಗ, ನಮ್ಮ ಇಂದ್ರಿಯಗಳಿಗೆ ಗೋಚರವಾದಾಗ. ಅದನ್ನೇ ನಾವು ಪ್ರಕೃತಿ ಎಂದು ಕರೆದೆವು. ಅದು ಪರಬ್ರಹ್ಮದ ವ್ಯಕ್ತರೂಪ. ಅದು ತುಂಬ ದೊಡ್ಡದು ಎಂದು ತೋರುತ್ತದಲ್ಲವೆ? ಆದರೆ ಶಾಸ್ತ್ರಗಳು ಹೇಳುತ್ತವೆ, ವ್ಯಕ್ತ ಪ್ರಪಂಚ, ಅವ್ಯಕ್ತ ಪ್ರಪಂಚದ ಸಣ್ಣ ತುಂಡು. ಸಮುದ್ರದಲ್ಲಿ ಒಂದು ಮಂಜುಗಡ್ಡೆ ತೇಲಿದ ಹಾಗೆ. ಆಕಾಶದಲ್ಲೊಂದು ಬಲೂನ್ ಹಾರಿದ ಹಾಗೆ. ಪುರುಷ ಸೂಕ್ತದ ಮಾತು ಹೀಗಿದೆ – "ಪಾದೋಸ್ಯ ವಿಶ್ವಾ ಭೂತಾನಿ | ತ್ರಿಪಾದಸ್ಯಾಮೃತಂದಿವಿ" ಹಾಗೆಂದರೆ ಸಮಗ್ರ ದೃಶ್ಯ ಪ್ರಪಂಚವೆಲ್ಲ ಒಂದು ಭಾಗವಾದರೆ ಅದರ ಮೂರು ಪಟ್ಟಿನಷ್ಟು ಅದೃಶ್ಯ ಪ್ರಪಂಚ ಹರಡಿಕೊಂಡಿದೆ. ದೃಶ್ಯ ಪ್ರಪಂಚವೇನೋ ನಮಗೆ ಕಾಣುತ್ತದೆ, ಅದನ್ನು ನಾವು ಅನುಭವಿಸುತ್ತೇವೆ. ಆದರೆ ಅದೃಶ್ಯ ಪ್ರಪಂಚವನ್ನು ಎಲ್ಲಿ ಹುಡುಕುವುದು? ಆ ವಿಷಯವನ್ನು ಕಗ್ಗ ಹೇಳುತ್ತದೆ. ನಮ್ಮ ಹೊರಗೆ, ವಿಶ್ವದ ಎಲ್ಲೆಡೆಯಲ್ಲಿ, ಆಗಸದಾಚೆ ಇರುವ ಸೂರ್ಯಮಂಡಲ, ಚಂದ್ರಮಂಡಲಗಳು, ನೀಹಾರಿಕೆಗಳು, ದೂರದ ನಕ್ಷತ್ರಪುಂಜಗಳು ಇವೆಲ್ಲ ದೃಶ್ಯ ಅಥವಾ ವ್ಯಕ್ತರೂಪಗಳು. ಅವ್ಯಕ್ತ ಪ್ರಪಂಚ ನಮ್ಮೊಳಗಿದೆ, ಹೃದಯದಾಳದಲ್ಲಿ ನೆಲೆಯಾಗಿದೆ. ಹೊರಗಿನ ಪ್ರಪಂಚದ ಅರಿವಿಗೆ ಬಾಹ್ಯದೃಷ್ಟಿ ಬೇಕಾದರೆ, ಆಂತರಿಕ ಪ್ರಪಂಚದ ತಿಳಿವಳಿಕೆಗೆ ಅಂತರ್‌ದೃಷ್ಟಿ ಬೇಕು. ಇವೆರಡೂ ಪರಬ್ರಹ್ಮದ ಎರಡು ನೆಲೆಗಳು. ಅದಕ್ಕೇ ಪರಬ್ರಹ್ಮವನ್ನು "ವ್ಯಕ್ತಾವ್ಯಕ್ತ ಸ್ವರೂಪಾಯ" ಎಂದು ವರ್ಣಿಸುತ್ತಾರೆ. ಹಾಗೆಂದರೇನಾಯಿತು? ಪರಬ್ರಹ್ಮವಸ್ತು ಒಳಗೆ-ಹೊರಗೆ ಎಲ್ಲೆಡೆಯಲ್ಲಿಯೂ ಇದೆ. ಅದು ಸರ್ವವ್ಯಾಪಿಯಾದದ್ದು. ಇವೆರಡನ್ನು, ಅವುಗಳ ಧ್ವನಿಗಳನ್ನು ತಿಳಿದ ಮನುಷ್ಯನೇ ಜ್ಞಾನಿ. ಅವನಿಗೆ ಬಾಹ್ಯದಲ್ಲಿ ಮತ್ತು ಆಂತರ್ಯದಲ್ಲಿ ಒಂದೇ ಆದ ಪರವಸ್ತು ಗೋಚರವಾಗುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಮೇ 26, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಷಷ್ಠಿ ಗಂ. 5-20 ನಕ್ಷತ್ರ: ಆಶ್ಲೇಷ ಗಂ. 20-50 ಯೋಗ: ಧ್ರುವ ಗಂ. 19-03, ಕರಣ: ತೈತಿಲ ಗಂ. 05-20, ವೃಷಭ ಮಾಸದ 11 ನೇ ದಿನ, ಮಳೆನಕ್ಷತ್ರ: ರೋಹಿಣಿ 1.
ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 06-06 ಸೂರ್ಯಾಸ್ತ : 06-49, ಮುಸ್ಲಿಂ ದಿನಾಂಕ : 06 ಜುಲ್ಖಾಯದ್
ದಿನ ವಿಶೇಷ : ಷಫೀಸ್ಟ್ ಆಫ್ ವೀಕ್ಸ್ (ಶುಬ್ಹೂತ್) – ಜ್ಯೂಯಿಷ್
ಅದೃಷ್ಟ ಸಂಖ್ಯೆ : 1, 5

ಮೇಷ: ಕುಟುಂಬದ ಹಿರಿಯ ವ್ಯಕ್ತಿಗಳನ್ನು ಭೇಟಿಯಾಗಿ ಹೊಸ ವ್ಯವಹಾರ ಶುರುಮಾಡಲು ಆಶೀರ್ವಾದವನ್ನು ಪಡೆದುಕೊಳ್ಳುವಿರಿ. ಉತ್ತಮ ಪ್ರತಿಜ್ಞೆಗಳೊಂದಿಗೆ ಶುರುವಾದ ಕಾರ್ಯ ಶುಭಫಲ ನೀಡುವುದು.

ವೃಷಭ: ಹೊಸ ವಿಚಾರಗಳನ್ನು ಸಹೋದರಿಯಿಂದ ಕಲಿಯಲು ಮುಂದಾಗುತ್ತೀರಿ. ನ್ಯಾಯಾಲಯದ ಕಾರ್ಯ ಕಲಾಪಗಳಲ್ಲಿ ಹೊಸತನ ಕಂಡುಕೊಳ್ಳುವಿರಿ. ಹಾಸ್ಯ ಪ್ರವೃತ್ತಿಯ ನಿಮ್ಮ ವ್ಯಕ್ತಿತ್ವ ಬೇಸರದಲ್ಲಿರುವವರನ್ನು ಸಂತಸಪಡಿಸುತ್ತದೆ.

ಮಿಥುನ: ತಾಯಿಯಿಂದ ಕಲಿತ ಪಾಠಗಳನ್ನು ಮುಂದಿನ ಪೀಳಿಗೆಗೆ ಕಲಿಸಿ ಕೊಡುವಂಥ ಸಂತಸದ ದಿನಗಳಿಗೆ ಗಣನೆ ಮಾಡುವಿರಿ. ವಯಸ್ಸಿಗೆ ಮೀರಿದ ಗಾಂಭೀರ್ಯ ಹೊಗಳುವವರು ಕೆಲವರಾದರೆ ತೆಗಳುವವರು ಕೆಲವರಿರುತ್ತಾರೆ.

ಕರ್ಕಾಟಕ: ಕಾಯಿಲೆಗೆಂದು ತೆಗೆದುಕೊಂಡ ಔಷಧಿ ಇನ್ನೊಂದುಅನಾರೋಗ್ಯಕ್ಕೆ ದಾರಿಯಾಗಬಹುದು. ಸವಾಲುಗಳನ್ನು ಎದುರಿಸಬೇಕಾದ ಸಂದರ್ಭಬರುತ್ತದೆ. ಬರೀಯ ಮೃದು ಮಾತುಗಳಿಂದ ಸಮಸ್ಯೆ ಪರಿಹಾರವಾಗುವುದಿಲ್ಲ.

ಸಿಂಹ: ಪುರುಷ ಸ್ತ್ರೀಯರ ನಡುವಿನ ಅಂತರ ಮನೆಯಲ್ಲಿ ಕಡಿಮೆ ಮಾಡುವ ಸರ್ವ ಪ್ರಯತ್ನ ಮಾಡುವಿರಿ. ಮಾನಸಿಕವಾಗಿ ನಿರ್ಧಾರಗಳಲ್ಲಿ ನಿಮಗೆ ಸ್ಥಿರತೆ ಬರುವವರೆಗೂ ಇತರರ ಮುಂದೆ ಪ್ರಸ್ತುತಪಡಿಸಬೇಡಿ.

ಕನ್ಯಾ: ಪ್ರಸ್ತುತ ವಿಷಯಗಳನ್ನು ತಿಳಿದುಕೊಳ್ಳುವ ಮೂಲಕ ಪ್ರವೇಶ ಪರೀಕ್ಷೆಗಳಲ್ಲಿ ಒಳ್ಳೆಯ ಫಲಿತಾಂಶ ಪಡೆಯುವಿರಿ. ಸೋದರ ಮಾವನ ಮನೆಯ ಕಾರ್ಯಕ್ರಮದಲ್ಲಿ ಭಾಗವಹಿಸುವಿರಿ.ನಿಮ್ಮ ಕೆಲಸಗಳಲ್ಲಿ ಪ್ರವೀಣತೆ ಪಡೆಯುವಿರಿ..

ತುಲಾ: ಮಗಳ ಮಾತಿಗೆ ಬೆಲೆ ಕೊಟ್ಟು ಆಕೆಯ ಇಚ್ಛೆಯಂತೆಯೇ ಆಗಲು ಬಿಟ್ಟರೂ ಮನಸ್ಸಿಗೆ ನೋವು ಮಾಡಬಹುದು. ನಿಮ್ಮ ತೋಟದ ಫಸಲಿನಲ್ಲಿ ಮಹತ್ತರ ಬದಲಾವಣೆಯನ್ನು ತರುವ ಉಪಾಯ ಮಾಡುವಿರಿ.

ವೃಶ್ಚಿಕ: ದೇವರ ಕೃಪೆಯಿಂದಾಗಿ ನಿಮ್ಮ ವ್ಯವಹಾರ ಕ್ಷೇತ್ರದಲ್ಲಿಆಗಬೇಕಾದ ಅನಾಹುತಗಳು ನಿವಾರಣೆಯಾಗುತ್ತದೆ. ಇತರರ ಮೇಲಿನ ನಿಮ್ಮ ಜವಾಬ್ದಾರಿಗಳು ಹೆಚ್ಚಾದ ಕಾರಣ ಅನಾರೋಗ್ಯ ನಿರ್ಲಕ್ಷಿಸಬೇಕಾಗುತ್ತದೆ.

ಧನು: ಎಂಜಿನಿಯರ್‌ಗಳಿಗೆ ಇಂದು ಬಿಡುವಿಲ್ಲದ ದಿನವಾಗಿ ಪರಿಣಮಿಸುತ್ತದೆ. ಕೇಶವಿನ್ಯಾಸಗಾರರು ಇತರರರೊಂದಿಗೆ ಸ್ಪರ್ಧಿಸಬೇಕಾಗುತ್ತದೆ. ತಮ್ಮನ ಮಕ್ಕಳ ಮದುವೆಯಲ್ಲಿ ಅತ್ಯಂತ ಹೆಚ್ಚಿನ ಓಡಾಟ ನಡೆಸುವಿರಿ.

ಮಕರ: ತಾಳಪತ್ರಗಳ ಅಧ್ಯಯನ ನಡೆಸಬೇಕೆಂದು ಇರುವವರಿಗೆ ಸರಿಯಾದ ಸ್ಥಳವು ದೊರೆಯುತ್ತದೆ. ತಾಯಿಯ ಮನೆಯ ಆಸ್ತಿಗಾಗಿ ಆಸೆ ಪಡುವುದು ಸರಿಯಲ್ಲ. ಕೃತಜ್ಞತೆ ವ್ಯಕ್ತಪಡಿಸದ ವ್ಯಕ್ತಿಗಳ ಜೊತೆ ವ್ಯವಹಾರ ನಡೆಸುವುದು ಬೇಡ.


ಕುಂಭ: ಮಂಗಳ ಕಾರ್ಯಗಳು ಜರಗುವಾಗ ಅಸಾಂದರ್ಭಿಕ ಮಾತುಗಳನ್ನು ಆಡದಿರಿ. ನಿಮ್ಮದೆ ತಪ್ಪುಗಳಿರುವಾಗ ಅದನ್ನು ಸರಿಪಡಿಸುವವರ ಮೇಲೆ ಬೇಸರ ಮಾಡಿಕೊಳ್ಳುವುದು ಸೂಕ್ತವಲ್ಲ. ಮಿತವಾದ ಆಹಾರ ಸೇವನೆ ಇರಲಿ.

ಮೀನ: ಜೀವನದ ಅತ್ಯಂತ ಪ್ರಮುಖ ಘಟ್ಟವೊಂದರಲ್ಲಿ ಅನಾರೋಗ್ಯದಿಂದ ಸರಿಯಾದ ರೀತಿಯಲ್ಲಿ ಆ ಕ್ಷಣವನ್ನು ಅನುಭವಿಸಲು ಆಗುವುದಿಲ್ಲ. ಕೆಲವರು ಮಾಡುವ ಅನಾಹುತ ನಿಲ್ಲಿಸದೇ ಬೇರೆಯ ಹಾದಿ ಇಲ್ಲವಾಗಿರುತ್ತದೆ.

ಪದಬಂಧ 5330 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅಂಗಿಯನ್ನು ಅರ್ಧ ಮಾಡಿದಾಗ ಕಾಣಿಸಿದ ಹೆಂಡತಿ (3)
3.ಮನದೊಳಗೇ ಇರುವ ವಂಶ (4)
5.ಕೊನೆಗೆ ಜಾಲ ಬೀಸಿದಾಗಲೇ ಇದು ನಿರಾಯಾಸ (4)
6.ವಟಗುಟ್ಟುವವನ ಹತ್ತಿರವಿರುವ ಬ್ರಹ್ಮಚಾರಿ (2)
7.ಗಮನ ಹರಿಸಿ ನೋಡಿ! ಆಕಾಶ ಕಾಣಿಸೀತು! (3)
9.ನಯನಕ್ಕೆ ಗೋಚರಿಸಿದ್ದು ಹೊಸತು (3)
12.ಪರಾಜಯದಲ್ಲೂ ಗೆಲುವು ನುಸುಳಿದೆಯಲ್ಲಾ! (2)
13.ಮಡಿವಂತಿಕೆ ತೋರುತ್ತಿರುವ ಅಗಸ (4)
15.ಆಸರೆಯ ಮನೆಯಲ್ಲ ,ಇದು ಜೈಲು! (4)
16.ಕರುವಿನ ಪಚನಾಂಗ ಇಲ್ಲಿ ಕಾಣಿಸುತ್ತಿದೆ (3)

ಮೇಲಿಂದ ಕೆಳಕ್ಕೆ
1.ಅತ್ತಿತ್ತ ನೋಡುವುದರೊಳಗೇ ಬಂದಿದ್ದಾಳೆ ಮಾವನ ಹೆಂಡತಿ (2)
2.ಗೀಟು ಹಾಕಿದವ ಮಾಡಿದ ಮೆರುಗಿನ ಲೇಪನ (3)
3.ಕರೆದು ಹೆಣ್ಣು ಕೊಟ್ಟದ್ದಕ್ಕೇ ಅಳಿಯನಿಗೆ ಈ ಅಪಸ್ಮಾರ ರೋಗವಂತೆ! (4)
.ಕೂಸು ತುಸು ಕಣ್ಣು ಬಿಟ್ಟದ್ದು ಬೆಳಗಿನ ಜಾವ (3)
6.ಆ ವರ್ತಕನೇ ತಿಳಿಸಿಬಿಡುತ್ತಾನೆ ಎಲ್ಲಾ ಸುದ್ದಿ! (4)
8. ನಯದೊಳಗೇ ಇದೆ ಉದಯದ ಪ್ರಾರಂಭ! (4)
10.ನಡುಗುತ್ತಾ ಆತ ಮನೆಯ ಹಜಾರಕ್ಕೆಬಂದಿಹನಲ್ಲಾ! (4)
11.ಹಸೆ ಬರೆಯುವ ಜಾಗದಲ್ಲೇ ಬೆಳೆದ ಪಾಚಿ (3)
12.ಜಗಲಿ ಹತ್ತಿರ ಜಗಳವಾಡುತ್ತಲೇ ಮಾಡಿದ ಸ್ನಾನ (3)
14.ಅಗುಳು ನುಂಗುವಾಗ ಬಂದ ಕಣ್ಣೀರು (2)



5329ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಗುಪ್ತದ್ವಾರ 3.ತೊಡಪು
5.ಮಜ್ಜನ 7.ಛಳುಕು
8.ವಿಶ್ವಾಸಘಾತ
11.ಕನಲು 12.ನರ್ತಕ
15.ಗುದಾಮು 16.ಜನಿವಾರ

ಮೇಲಿಂದ ಕೆಳಕ್ಕೆ:
1.ಗುಲಾಮ 2.ರತ್ನ
3.ತೊಡಕು 4.ಪುಡಿಗಾಸು
6.ನಧಾವಿ 7.ಛಡಸವಾಲು
9.ತಲ್ಲೀನ 10.ಹುಸಿನಗು
11.ಕದುಮು 13.ಕರ್ಪೂರ
14.ಹುಂಜ

ಸುಡೊಕು 5716

1				2			8	4
		7			9		5	2
	8			4				
2							6	
		4		3				1
5								3
		5		9			7	6
7			2		6	8		
9	4			7				5

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5715 ಡೊಕು

9	4	1	5	6	7	2	3	8
6	7	8	2	3	9	1	4	5
5	3	2	4	1	8	9	6	7
2	8	5	1	9	6	4	7	3
1	6	4	7	5	3	8	2	9
3	9	7	8	2	4	6	5	1
4	1	3	9	7	2	5	8	6
8	5	6	3	4	1	7	9	2
7	2	9	6	8	5	3	1	4

ಅಲ್ಪ ಏರಿಕೆ ಕಂಡ ಸೆನ್ಸೆಕ್ಸ್, ನಿಫ್ಟಿ


ಮುಂಬೈ (ಪಿಟಿಐ): ಷೇರುಪೇಟೆ ಸೂಚ್ಯಂಕಗಳಾದ ಸೆನ್ಸೆಕ್ಸ್ ಮತ್ತು ನಿಫ್ಟಿ ಗುರುವಾರದ ವಹಿವಾಟಿನಲ್ಲಿ ಅಲ್ಪ ಏರಿಕೆ ಕಂಡಿವೆ.

ದಿನದ ವಹಿವಾಟಿನ ಕೊನೆಯಲ್ಲಿ ಹೂಡಿಕೆದಾರರು ಷೇರುಗಳ ಖರೀದಿಗೆ ಗಮನ ನೀಡಿದ್ದು ಸೂಚ್ಯಂಕಗಳ ಏರಿಕೆಗೆ ನೆರವಾಯಿತು.

ಗುರುವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್ಐಐ) ₹589.10 ಕೋಟಿ ಮೌಲ್ಯದ ಷೇರುಗಳನ್ನು ಖರೀದಿ ಮಾಡಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 1.14ರಷ್ಟು ಕಡಿಮೆ ಆಗಿದ್ದು ಪ್ರತಿ ಬ್ಯಾರಲ್‌ಗೆ 77.47 ಡಾಲರ್‌ಗೆ ತಲುಪಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,285
ಇಂದಿನ ಅಂತ್ಯ	18,321
▲	36
ದಿನದ ಗರಿಷ್ಠ	18,338

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹525
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹530

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈಂಡ್)	₹1615 (1615)
ಸೋಯಾ (ರಿಫೈಂಡ್)	₹902 (900)
ಸೂರ್ಯಕಾಂತಿ (ರಿಫೈಂಡ್)	₹925 (950)
ಪಾಮೋಲಿನ್	₹867 (870)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹900-1100
ಮಧ್ಯಮ	₹400-700
ಸಣ್ಣ	₹200-400

ಸಿಂಗಪುರ, ನೆದರ್ಲೆಂಡ್ಸ್, ಮಾರಿಷಸ್‌ಗೆ ಪಟ್ಟಿಯಲ್ಲಿಲ್ಲ ಸ್ಥಾನ: ಹಣಕಾಸು ಸಚಿವಾಲಯ

ಏಂಜೆಲ್ ತೆರಿಗೆ: 21 ದೇಶಕ್ಕೆ ವಿನಾಯಿತಿ

ನವದೆಹಲಿ (ಪಿಟಿಐ): ಷೇರುಪೇಟೆಯಲ್ಲಿ ನೋಂದಾಯಿತ ಆಗಿರದ ಭಾರತದ ನವೋದ್ಯಮಗಳಲ್ಲಿ, 21 ದೇಶಗಳ ಅನಿವಾಸಿ ಭಾರತೀಯರು ಮಾಡುವ ಹೂಡಿಕೆಗಳಿಗೆ ಏಂಜೆಲ್ ತೆರಿಗೆಯಿಂದ ವಿನಾಯಿತಿ ನೀಡಲಾಗಿದ್ದು, ಈ ದೇಶಗಳ ಪಟ್ಟಿಯನ್ನು ಕೇಂದ್ರ ಹಣಕಾಸು ಸಚಿವಾಲಯವು ಅಧಿಸೂಚನೆಯಲ್ಲಿ ಪ್ರಕಟಿಸಿದೆ.


ಅಮೆರಿಕ, ಬ್ರಿಟನ್, ಫ್ರಾನ್ಸ್ ವಿನಾಯಿತಿ ಪಡೆದಿರುವ ದೇಶಗಳ ಪಟ್ಟಿಯಲ್ಲಿ ಇವೆ. ಆದರೆ, ಸಿಂಗಪುರ, ನೆದರ್ಲೆಂಡ್ಸ್ ಮತ್ತು ಮಾರಿಷಸ್ ಈ ಪಟ್ಟಿಯಲ್ಲಿ ಇಲ್ಲ.

ಷೇರುಪೇಟೆಯಲ್ಲಿ ನೋಂದಾಯಿತ ಆಗಿರದ ಕಂಪನಿಗಳಲ್ಲಿ ವಿದೇಶಗಳಿಂದ ಆಗುವ ಹೂಡಿಕೆಗೆ ಏಂಜೆಲ್ ತೆರಿಗೆ ಅನ್ವಯವಾಗುತ್ತದೆ ಎಂದು ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ಹೇಳಿತ್ತು. ಡಿಪಿಐಐಟಿ (ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆ) ಮಾನ್ಯತೆ ಪಡೆದಿರುವ ನವೋದ್ಯಮಗಳಿಗೆ ಈ ತೆರಿಗೆಯಿಂದ ವಿನಾಯಿತಿ ಇತ್ತು.

ಆದರೆ, ನವೋದ್ಯಮಗಳು ಮತ್ತು ವೆಂಚರ್ ಕ್ಯಾಪಿಟಲ್ ಕಂಪನಿಗಳು ಕೆಲವು ಹೂಡಿಕೆದಾರರಿಗೆ ಈ ತೆರಿಗೆಯಿಂದ ವಿನಾಯಿತಿ ಕೊಡಬೇಕು ಎಂಬ ಮನವಿ ಸಲ್ಲಿಸಿದ್ದವು.

ಮುಖ್ಯಾಂಶಗಳು
- ವಿನಾಯಿತಿಯು ಏಪ್ರಿಲ್ 1ರಿಂದ ಪೂರ್ವಾನ್ವಯ
- ವಿನಾಯಿತಿ ಕೋರಿದ್ದ ನವೋದ್ಯಮಗಳು, ವೆಂಚರ್ ಕ್ಯಾಪಿಟಲ್ ಸಂಸ್ಥೆಗಳು

ಆಸ್ಟ್ರಿಯಾ, ಕೆನಡಾ, ಜೆಕ್ ಗಣರಾಜ್ಯ, ಬೆಲ್ಜಿಯಂ, ಡೆನ್ಮಾರ್ಕ್, ಫಿನ್ಲೆಂಡ್, ಇಸ್ರೇಲ್, ಇಟಲಿ, ಐಸ್‌ಲೆಂಡ್, ಜಪಾನ್, ಕೊರಿಯಾ, ರಷ್ಯಾ, ನಾರ್ವೆ, ನ್ಯೂಜಿಲೆಂಡ್ ಮತ್ತು ಸ್ವೀಡನ್ ದೇಶಗಳಿಂದ ಮಾಡುವ



ಹೂಡಿಕೆಗಳಿಗೆ ಕೂಡ ಏಂಜೆಲ್ ತೆರಿಗೆಯಿಂದ ವಿನಾಯಿತಿ ಇರಲಿದೆ. ಈ ವಿನಾಯಿತಿ ಏಪ್ರಿಲ್ 1ರಿಂದ ಪೂರ್ವಾನ್ವಯ ಆಗಲಿದೆ.

ಮೊದಲಿನ ನಿಯಮಗಳ ಅನ್ವಯ, ದೇಶಿ ಹೂಡಿಕೆದಾರರು ಅಥವಾ ನಿವಾಸಿ ಭಾರತೀಯರು, ಷೇರುಪೇಟೆಯಲ್ಲಿ ನೋಂದಾಯಿತ ಅಲ್ಲದ ಕಂಪನಿಗಳಲ್ಲಿ ಅವುಗಳ ನ್ಯಾಯಸಮ್ಮತ ಮಾರುಕಟ್ಟೆ ಮೌಲ್ಯಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಮಾಡುವ ಹೂಡಿಕೆಗಳಿಗೆ ಮಾತ್ರ ಏಂಜೆಲ್ ತೆರಿಗೆ ವಿಧಿಸಲಾಗುತ್ತಿತ್ತು.

ಆದರೆ ಈ ನಿಯಮಕ್ಕೆ ಹಣಕಾಸು ಕಾಯ್ದೆ 2023ರ ಮೂಲಕ ಬದಲಾವಣೆ ತರಲಾಯಿತು. ಕಾಯ್ದೆಯು, ನ್ಯಾಯ ಸಮ್ಮತ ಮಾರುಕಟ್ಟೆ ಬೆಲೆಗಿಂತ ಹೆಚ್ಚಿನ ಮಟ್ಟದಲ್ಲಿ ಆಗುವ ಹೂಡಿಕೆಯು ಯಾರಿಂದಲೇ ಆಗಿದ್ದರೂ ಅದಕ್ಕೆ ಏಂಜೆಲ್ ತೆರಿಗೆ ಅನ್ವಯವಾಗುತ್ತದೆ ಎಂದು ಹೇಳಿತ್ತು.

ಪುನಶ್ಚೇತನ ಯೋಜನೆ: ಗೋ ಫಸ್ಟ್‌ಗೆ ಗಡುವು

ನವದೆಹಲಿ (ಪಿಟಿಐ): ಕಂಪನಿಯ ಕಾರ್ಯಾಚರಣೆಗೆ ಸಂಬಂಧಿಸಿದ ಸಮಗ್ರವಾದ ಪುನಶ್ಚೇತನ ಯೋಜನೆಯನ್ನು 30 ದಿನಗಳ ಒಳಗೆ ಸಲ್ಲಿಸುವಂತೆ 'ಗೋ ಫಸ್ಟ್'ಗೆ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ (ಡಿಜಿಸಿಎ) ತಿಳಿಸಿದೆ ಎಂದು ಮೂಲಗಳು ಹೇಳಿವೆ.

ಹಣಕಾಸಿನ ಹೊಣೆಗಾರಿಕೆಯನ್ನು ನಿಭಾಯಿಸಲು ಆಗುತ್ತಿಲ್ಲ ಎಂದು ಕಂಪನಿಯು ತಾನಾಗಿಯೇ, ದಿವಾಳಿ ಸಂಹಿತೆಯ ಅಡಿ ಕ್ರಮ ಕೈಗೊಳ್ಳುವಂತೆ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ (ಎನ್‌ಸಿಎಲ್‌ಟಿ) ಮೊರೆ ಹೋಗಿದ್ದು, ಮೇ 3 ರಿಂದ ಸೇವೆಯನ್ನು ನಿಲ್ಲಿಸಿದೆ.

ಪುನಶ್ಚೇತನ ಯೋಜನೆಯನ್ನು ಸಲ್ಲಿಸುವಂತೆ ಮೇ 24ರಂದು ಕಂಪನಿಗೆ ಡಿಜಿಸಿಎ ಸೂಚನೆ ನೀಡಿದೆ ಎಂದು ನಿಯಂತ್ರಣ ಸಂಸ್ಥೆಗೆ



ಸಂಬಂಧಿಸಿದ ಮೂಲಗಳು ತಿಳಿಸಿವೆ.

ಕಾರ್ಯಾಚರಣೆ ನಡೆಸಲು ಇರುವ ವಿಮಾನಗಳು, ಪೈಲಟ್ ಮತ್ತು ಇತರ ಸಿಬ್ಬಂದಿ, ನಿರ್ವಹಣಾ ಸೌಲಭ್ಯಗಳು ಮತ್ತು ಬಂಡವಾಳದ ಕುರಿತು ಮಾಹಿತಿ ನೀಡುವಂತೆಯೂ ಅದು ಕಂಪನಿಯನ್ನು ಕೇಳಿರುವುದಾಗಿ ಮೂಲಗಳು ಹೇಳಿವೆ.

ಗೋ ಫಸ್ಟ್ ಸಲ್ಲಿಸುವ ಯೋಜನೆಯನ್ನು ಡಿಜಿಸಿಎ ಪರಿಶೀಲಿಸಲಿದ್ದು, ನಂತರ ಮುಂದಿನ ಕ್ರಮ ಕೈಗೊಳ್ಳಲಿದೆ ಎಂದೂ ತಿಳಿಸಿವೆ.

'ಅದಾನಿ'ಯಲ್ಲಿ ಎಲ್‌ಐಸಿ ಹೂಡಿಕೆ ಮೌಲ್ಯ ವೃದ್ಧಿ

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಅದಾನಿ ಸಮೂಹದ ಏಳು ಕಂಪನಿಗಳಲ್ಲಿ ಮಾಡಿರುವ ಹೂಡಿಕೆಯ ಮೌಲ್ಯವು ಈಗ ₹44 ಸಾವಿರ ಕೋಟಿಗಿಂತ ಹೆಚ್ಚಾಗಿದೆ.

ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು ಅದಾನಿ ಸಮೂಹದ ವಿರುದ್ಧ ಕೆಲವು ಆರೋಪಗಳನ್ನು ಹೊರಿಸಿದ ನಂತರದಲ್ಲಿ, ಎಲ್‌ಐಸಿಯು ಸಮೂಹದ ಕಂಪನಿಗಳಲ್ಲಿ ಮಾಡಿದ್ದ ಹೂಡಿಕೆಯ ಮೌಲ್ಯವು ಕುಸಿದಿತ್ತು. ಈಗ ಅದಾನಿ ಸಮೂಹದ ಷೇರುಗಳ ಮೌಲ್ಯವು ಏರುಗತಿಯಲ್ಲಿ ಇರುವ ಕಾರಣ, ಎಲ್‌ಐಸಿಯ ಹೂಡಿಕೆಯ ಮೌಲ್ಯವೂ ಹೆಚ್ಚಾಗಿದೆ.

ಉದ್ಯಮಿ ಗೌತಮ್ ಅದಾನಿ ನೇತೃತ್ವದ ಅದಾನಿ ಸಮೂಹವು ತನ್ನ ಸಾಲವನ್ನು ಮರುಪಾವತಿ ಮಾಡುತ್ತಿದೆ, ಒಂದಿಷ್ಟು ಬಾಂಡ್‌ಗಳನ್ನು ಮರಳಿ ಖರೀದಿಸುತ್ತಿದೆ, ಸಮೂಹದ ಎರಡು ಪ್ರಮುಖ ಕಂಪನಿಗಳು ₹21 ಸಾವಿರ ಕೋಟಿ ಬಂಡವಾಳ ಸಂಗ್ರಹಿಸುವ ಆಲೋಚನೆ ಹೊಂದಿವೆ.

ಅದಾನಿ ಸಮೂಹದ ಕಂಪನಿಗಳ ಷೇರುಮೌಲ್ಯವು ಕೃತಕವಾಗಿ ಏರಿಳಿಯುವಂತೆ ಮಾಡಲಾಗಿದೆ ಎಂಬ ಆರೋಪಕ್ಕೆ ಸಾಕ್ಷ್ಯ ಲಭಿಸಿಲ್ಲ ಎಂದು ಸುಪ್ರೀಂ ಕೋರ್ಟ್ ನೇಮಕ ಮಾಡಿದ್ದ ತಜ್ಞರ ಸಮಿತಿಯು ಹೇಳಿದ ನಂತರದಲ್ಲಿ ಅದಾನಿ ಸಮೂಹದ ಷೇರುಗಳ ಮೌಲ್ಯ ಹೆಚ್ಚುತ್ತ ಸಾಗಿದೆ.

ಅದಾನಿ ಸಮೂಹದ ಕಂಪನಿಗಳಲ್ಲಿ ಎಲ್‌ಐಸಿ ಮಾಡಿರುವ ಹೂಡಿಕೆಯು ₹30,127 ಕೋಟಿ. ಇದು ಜನವರಿ 27ರ ಹೊತ್ತಿಗೆ ₹56,142 ಕೋಟಿಗೆ ತಲುಪಿತ್ತು. ಆದರೆ, ಹಿಂಡನ್‌ಬರ್ಗ್ ವರದಿಯ ನಂತರದಲ್ಲಿ ಸಮೂಹದ ಕಂಪನಿಗಳ ಷೇರುಮೌಲ್ಯ ಕುಸಿದ ಪರಿಣಾಮವಾಗಿ, ಎಲ್‌ಐಸಿ ಹೂಡಿಕೆಯ ಮೌಲ್ಯವು ಫೆಬ್ರುವರಿ 23ರ ಹೊತ್ತಿಗೆ ₹ 27 ಸಾವಿರ ಕೋಟಿಗೆ ತಲುಪಿತ್ತು.

ಏರಿಕೆ ಕಂಡ ಎಲ್‌ಐಸಿ: ಎಲ್‌ಐಸಿ ಷೇರುಮೌಲ್ಯ, ಮಾರ್ಚ್ ತ್ರೈಮಾಸಿಕದ ಹಣಕಾಸು ಫಲಿತಾಂಶ ಪ್ರಕಟವಾದ ನಂತರದಲ್ಲಿ ಶೇಕಡ 1.6ರಷ್ಟು ಏರಿಕೆ ಕಂಡಿದೆ. ನಿಗಮದ ಮಾರ್ಚ್ ತ್ರೈಮಾಸಿಕದ ಲಾಭವು ಐದು ಪಟ್ಟು ಹೆಚ್ಚಾಗಿದೆ.

ಕೇಂದ್ರ ಸರ್ಕಾರ ಹಿಂದಿನ ವರ್ಷ ಎಲ್‌ಐಸಿಯಲ್ಲಿ ಹೊಂದಿರುವ ಷೇರುಗಳಲ್ಲಿ ಶೇ 3.5ರಷ್ಟನ್ನು ಐಪಿಒ ಮೂಲಕ ಮಾರಾಟ ಮಾಡಿ, ₹20,557 ಕೋಟಿ ಬಂಡವಾಳ ಸಂಗ್ರಹಿಸಿದೆ. ಐಪಿಒ ಸಂದರ್ಭದಲ್ಲಿ ಪ್ರತಿ ಷೇರುಗಳನ್ನು ₹949ಕ್ಕೆ ನೀಡಲಾಗಿತ್ತು. ಆದರೆ, ಷೇರುಪೇಟೆಯಲ್ಲಿ ವಹಿವಾಟು ಆರಂಭಿಸಿದಾಗಿನಿಂದ ಎಲ್‌ಐಸಿ ಷೇರುಗಳು ಅದಕ್ಕಿಂತ ಕಡಿಮೆ ಮಟ್ಟದಲ್ಲಿವೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		ರಾಶಿ	36000-48529	ಕೆಂಪುಗೋಟು	32261-34889
ಬಂಟ್ವಾಳ		ಸಿಪ್ಪಗೋಟು	4074-21509	ರಾಶಿ	42709-46738
ಕೋಕ	12500-25000	**ಶಿವಮೊಗ್ಗ**		**ಯಲ್ಲಾಪುರ**	
ಹೊಸತು	27500-40500	ಬೆಟ್ಟೆ	46569-54089	ಬಿಳಿಗೋಟು	23899-34699
ಹಳತು	48000-53000	ಗೊರಬಲು	17009-35359	ಚಾಲಿ	33910-37801
ಕಾರ್ಕಳ		ರಾಶಿ	32669-48899	ಕೋಕ	17618-32691
ಹೊಸತು	30000-40500	ಸರಕು	45159-81986	ಕೆಂಪುಗೋಟು	28099-35499
ಹಳತು	40000-53000	**ಸಿದ್ದಾಪುರ**		ರಾಶಿ	41666-50699
ಕುಮಟಾ		ಬಿಳಿಗೋಟು	27899-32899	ತಟ್ಟಿಬೆಟ್ಟೆ	38099-46666
ಚಿಪ್ಪು	29091-33989	ಚಾಲಿ	36099-37508		
ಕೋಕ	18300-31199	ಕೋಕ	27299-32499		
ಹಳೆಚಾಲಿ	35500-39501	ಹಳೆಚಾಲಿ	36899-37399		
ಹೊಸಚಾಲಿ	35219-38069	ಕೆಂಪುಗೋಟು	31589-31589		
ಸಾಗರ		ರಾಶಿ	43489-47099		
ಬಿಳಿಗೋಟು	22099-32289	ತಟ್ಟಿಬೆಟ್ಟೆ	37869-42869		
ಚಾಲಿ	30699-36599	**ಶಿರಸಿ**			
ಕೋಕ	16699-34801	ಬೆಟ್ಟೆ	39099-45099		
ಕೆಂಪುಗೋಟು	27359-38509	ಬಿಳಿಗೋಟು	25599-32799		
		ಚಾಲಿ	34698-38111		

ಮೂಡಿಗೆರೆ ಕಾಫಿ (50 ಕೆ.ಜಿಗೆ ₹)

	ಮುದ್ರಮನೆ
ಎಪಿ	15250
ಎಸಿ	7980
ಆರ್‌ಪಿ	10500
ಆರ್‌ಸಿ	5910

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಕೆ.ಆರ್. ಪೇಟೆ	₹8000-8150
ಪುತ್ತೂರು	₹4500-7300
ತುರುವೇಕೆರೆ	₹9100-9100

ಮುಂಬೈ ಧಾರಣೆ

ಶೇಂಗಾ
25-5-2023

ಜಾವಾ 70/80(ಹೊಸ)	11950-12000
ಜಾವಾ 80/90(ಹೊಸ)	11450-11500
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12300-12400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1625 (1625)
ಒಂದು ವಾರದ ಡೆಲಿವರಿ	1620 (1620)
ಸೋಯಾ ಕಚ್ಚಾ	845 (850)
ಪಾಮ್ ವಾರದ ಡೆಲಿವರಿ	865 (868)
ಸೂರ್ಯಕಾಂತಿ ಎಣ್ಣೆ ಕಚ್ಚಾ	845 (850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)
ಅಪರಂಜಿ ಚಿನ್ನ 10ಗ್ರಾಂ
60250 (60350)
ಬೆಳ್ಳಿ ಕೆ.ಜಿ 70350 (71050)
ಆವರಣದಲ್ಲಿ ಹಿಂದಿನ ದಿನದ ಧಾರಣೆ

ಖಾಸಗಿ ಉದ್ಯೋಗಿಯ ರಜೆ ನಗದೀಕರಣದ ಮಿತಿ ಹೆಚ್ಚಳ

ನವದೆಹಲಿ (ಪಿಟಿಐ): ಖಾಸಗಿ ವಲಯದ ಉದ್ಯೋಗಿ ನಿವೃತ್ತಿ ಆದಾಗ ರಜೆ ನಗದೀಕರಕ್ಕೆ ಇರುವ ತೆರಿಗೆ ವಿನಾಯಿತಿ ಮಿತಿಯನ್ನು ₹3 ಲಕ್ಷದಿಂದ ₹25 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಇದು ಏಪ್ರಿಲ್ 1ರಿಂದಲೇ ಜಾರಿಯಾಗಲಿದೆ.

ಬಜೆಟ್‌ನಲ್ಲಿ ಘೋಷಿಸಿರುವಂತೆಯೇ, ಸರ್ಕಾರಿ ಹುದ್ದೆಯಲ್ಲಿ ಇಲ್ಲದ ವೇತನ ಪಡೆಯುವ ಉದ್ಯೋಗಿಯ ರಜೆ ನಗದೀಕರಣದ ತೆರಿಗೆ ವಿನಾಯಿತಿ ಮಿತಿಯನ್ನು ₹25 ಲಕ್ಷಕ್ಕೆ ಹೆಚ್ಚಿಸಲಾಗಿದೆ ಎಂದು ನೇರ ತೆರಿಗೆಗಳ ಕೇಂದ್ರೀಯ ಮಂಡಳಿ (ಸಿಬಿಡಿಟಿ) ಪ್ರಕಟಣೆಯಲ್ಲಿ ತಿಳಿಸಿದೆ.

ಈ ಮೊದಲು ಸರ್ಕಾರೇತರ ಉದ್ಯೋಗಿಗಳಿಗೆ ₹3 ಲಕ್ಷದವರೆಗಿನ ರಜೆ ನಗದೀಕರಣಕ್ಕೆ ತೆರಿಗೆ ವಿನಾಯಿತಿ ಇತ್ತು. 2002ರಲ್ಲಿ ಇದನ್ನು ನಿಗದಿಪಡಿಸಲಾಗಿತ್ತು. ಆ ವೇಳೆ ಸರ್ಕಾರದಲ್ಲಿ ಮೂಲ ವೇತನ ತಿಂಗಳಿಗೆ ಗರಿಷ್ಠ ₹30 ಸಾವಿರ ಇತ್ತು.


ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ ಪಿಟಿಐ ಮುಖ್ಯಸ್ಥ

'ಪಾಕ್‌ನಲ್ಲಿ ಅಘೋಷಿತ ಸೇನಾ ಆಡಳಿತ'

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಹಲವಾರು ಪ್ರಾಂತ್ಯಗಳಲ್ಲಿ 245ನೇ ವಿಧಿ ಜಾರಿಗೊಳಿಸುವ ಸರ್ಕಾರದ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿರುವ ಮಾಜಿ ಪ್ರಧಾನಿ ಇಮ್ರಾನ್ ಖಾನ್, ಇದನ್ನು 'ಅಘೋಷಿತ ಮಿಲಿಟರಿ ಆಡಳಿತ' ಎಂದು ಆರೋಪಿಸಿದ್ದಾರೆ.

ಪಾಕಿಸ್ತಾನ ಸಂವಿಧಾನದ 245ನೇ ವಿಧಿ ಅಡಿ, ದೇಶವನ್ನು ರಕ್ಷಿಸಲು ನಾಗರಿಕ ಆಡಳಿತಕ್ಕೆ ಸಹಾಯ ಮಾಡಲು ಸೇನೆಯನ್ನು ಕರೆಯಬಹುದು.

ಪಂಜಾಬ್, ಖೈಬರ್ ಪಖ್ತುಂಖ್ವಾ, ಬಲೂಚಿಸ್ತಾನ ಮತ್ತು ಇಸ್ಲಾಮಾಬಾದ್‌ನಲ್ಲಿ 245ನೇ ವಿಧಿ ಅನ್ವಯಿಸುವುದನ್ನು ಪ್ರಶ್ನಿಸಿ ಖಾನ್ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ.



ಇಮ್ರಾನ್ ಖಾನ್

ಸೇನಾ ಕಾಯ್ದೆ 1952ರ ಅಡಿ ನಾಗರಿಕರ ಬಂಧನ, ತನಿಖೆ ಮತ್ತು ವಿಚಾರಣೆಗಳು ಅಸಾಂವಿಧಾನಿಕ ಮತ್ತು ಅನೂರ್ಜಿತ ಹಾಗೂ ಕಾನೂನಿನ ನಿಯಮ ಮತ್ತು ನ್ಯಾಯಾಂಗದ ಸ್ವಾತಂತ್ರ್ಯವನ್ನು ನಿರಾಕರಿಸುತ್ತದೆ ಎಂದು ಪಾಕಿಸ್ತಾನ್ ತೆಹ್ರೀಕ್-ಇ-ಇನ್ಸಾಫ್ (ಪಿಟಿಐ) ಮುಖ್ಯಸ್ಥರೂ ಆದ ಇಮ್ರಾನ್ ತಮ್ಮ ಅರ್ಜಿಯಲ್ಲಿ ತಿಳಿಸಿದ್ದಾರೆ.

ಪಕ್ಷದ ಸದಸ್ಯತ್ವ ಮತ್ತು ಕಚೇರಿಯನ್ನು ಬಲವಂತವಾಗಿ ತ್ಯಜಿಸುವ ಮೂಲಕ ಪಿಟಿಐ ಪಕ್ಷವನ್ನು ವಿಸರ್ಜಿಸುವುದು ಅಸಾಂವಿಧಾನಿಕ ಮತ್ತು ಸಂವಿಧಾನದ 17ನೇ ವಿಧಿಗೆ ವಿರುದ್ಧವಾಗಿದೆ ಎಂದು ಅವರು ಹೇಳಿದ್ದಾರೆ ಎಂದು 'ಡಾನ್' ಪತ್ರಿಕೆ ವರದಿ ಮಾಡಿದೆ.

ಮೇ 9ರ ಹಿಂಸಾಚಾರದ ಕುರಿತು ತನಿಖೆ ನಡೆಸಲು ನ್ಯಾಯಾಂಗ ಆಯೋಗ ರಚಿಸಲು ಆದೇಶಿಸುವಂತೆ ಖಾನ್ ಸುಪ್ರೀಂ ಕೋರ್ಟ್ ಅನ್ನು ಒತ್ತಾಯಿಸಿದರು.

ದಾಳಿ ಹಿಂದೆ ಇಮ್ರಾನ್ ಕೈವಾಡ: ಇಮ್ರಾನ್ ಮತ್ತು ಅವರ ಆಪ್ತರು ಮೇ 9 ರಂದು ಲಾಹೋರ್ ಮತ್ತು ಪಂಜಾಬ್ ಪ್ರಾಂತ್ಯದ ಇತರ ಭಾಗಗಳಲ್ಲಿನ ಮಿಲಿಟರಿ ನೆಲೆಗಳ ಮೇಲಿನ ದಾಳಿಗಳನ್ನು ಸಂಘಟಿಸಿದ್ದಾರೆ ಎಂದು ಪಂಜಾಬ್ ಇನ್‌ಸ್ಪೆಕ್ಟರ್ ಜನರಲ್ ಡಾ.ಉಸ್ಮಾನ್ ಅನ್ವರ್ ಗುರುವಾರ ಆರೋಪಿಸಿದ್ದಾರೆ.

ಜಿಯೋ ಫೆನ್ಸಿಂಗ್ ವರದಿ ಉಲ್ಲೇಖಿಸಿ ಹೇಳಿರುವ ಉಸ್ಮಾನ್, ಸೇನಾ ನೆಲೆಗಳನ್ನು ಗುರಿಯಾಗಿಸಲು ಕಾರ್ಯಕರ್ತರನ್ನು ಪ್ರಚೋದಿಸಲು ಇಮ್ರಾನ್ ಖಾನ್ ಮತ್ತು ಅವರ ಪಕ್ಷದ ಪಾಕಿಸ್ತಾನ್ ತೆಹ್ರೀಕ್-ಇ-ಇನ್ಸಾಫ್ (ಪಿಟಿಐ)ನ ಇತರ ಹಿರಿಯ ನಾಯಕರು ಮಾಡಿದ 400ಕ್ಕೂ ಹೆಚ್ಚು ಕರೆಗಳನ್ನು ಪೊಲೀಸರು ಪತ್ತೆ ಹಚ್ಚಿದ್ದಾರೆ ಎಂದು ಹೇಳಿದ್ದಾರೆ.

ಇಸ್ರೊದ 'ಎನ್‌ವಿಎಸ್–01' ಉಪಗ್ರಹ 29ರಂದು ಉಡಾವಣೆ

ಪ್ರಜಾವಾಣಿ ವಾರ್ತೆ

ಚೆನ್ನೈ: ನೌಕೆಗಳ ಸಂಚಾರವನ್ನು ನಿರ್ಧರಿಸುವಲ್ಲಿ ನೆರವಾಗುವ 'ಎನ್‌ವಿಎಸ್-01' ನ್ಯಾವಿಗೇಷನ್ ಉಪಗ್ರಹವನ್ನು ಶ್ರೀಹರಿಕೋಟಾದಲ್ಲಿನ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದ ಎರಡನೇ ಉಡ್ಡಯನ ನೆಲೆಯಿಂದ ಮೇ 29ರಂದು ಉಡಾವಣೆ ಮಾಡಲಾಗುವುದು ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ತಿಳಿಸಿದೆ.

'2,232 ಕೆ.ಜಿ ತೂಕದ ಈ ಉಪಗ್ರಹವನ್ನು (ಎನ್‌ವಿಎಸ್ -01) ಹೊತ್ತ ರಾಕೆಟ್ 'ಜಿಎಸ್‌ಎಲ್‌ವಿ-ಎಫ್‌12' ಸೋಮವಾರ ಬೆಳಿಗ್ಗೆ 10.42ಕ್ಕೆ ನಭಕ್ಕೆ ಚಿಮ್ಮಲಿದೆ' ಎಂದು ಇಸ್ರೊ ಹೇಳಿಕೆಯಲ್ಲಿ ತಿಳಿಸಿದೆ.

'ನಾವಿಕ್' (ನ್ಯಾವಿಗೇಷನ್ ವಿತ್ ಇಂಡಿಯನ್ ಕಾನ್‌ಸ್ಟೆಲೇಷನ್) ಸೇವೆಗಳಿಗಾಗಿ ತಯಾರಿಸಲಾದ ಎರಡನೇ ತಲೆಮಾರಿನ ಉಪಗ್ರಹಗಳಲ್ಲಿ ಎನ್‌ವಿಎಸ್ -01 ಮೊದಲನೆಯದು.

ಎನ್‌ವಿಎಸ್ ಸರಣಿಯ ಉಪಗ್ರಹಗಳು ನಾವಿಕ್‌ನ ಸುಧಾರಿತ ವೈಶಿಷ್ಟ್ಯಗಳನ್ನು ಹೊಂದಿವೆ. ಈ ಸರಣಿಯು ನಾವಿಕ್ ಸೇವೆಗಳನ್ನು ವಿಸ್ತರಿಸಲು ಅನುಕೂಲವಾಗುಂತೆ ಹೆಚ್ಚುವರಿಯಾಗಿ ಎಲ್1 ಬ್ಯಾಂಡ್ ಸಂಕೇತಗಳನ್ನು ಒಳಗೊಂಡಿದೆ.

ಈ ಹಿಂದೆ ಉಡಾವಣೆ ಮಾಡಿರುವ ಎಲ್ಲ ಒಂಬತ್ತು ನ್ಯಾವಿಗೇಷನ್ ಉಪಗ್ರಹಗಳಲ್ಲಿ ಆಮದು ಮಾಡಿಕೊಂಡ 'ಪರಮಾಣು ಗಡಿಯಾರ'ಗಳನ್ನು (ಸಮಯ ಮತ್ತು ಸ್ಥಳವನ್ನು ನಿಖರವಾಗಿ ಗುರುತಿಸಲು ಇವನ್ನು ಬಳಸಲಾಗುತ್ತದೆ) ಬಳಸಲಾಗಿತ್ತು.

ಮೊದಲ ಬಾರಿಗೆ ದೇಶೀಯವಾಗಿ ನಿರ್ಮಿಸಲಾದ ಪರಮಾಣು ಗಡಿಯಾರವನ್ನು ನ್ಯಾವಿಗೇಷನ್ ಉಪಗ್ರಹದಲ್ಲಿ ಬಳಸಿರುವುದು ವಿಶೇಷ ಎಂದು ಇಸ್ರೊ ಹೇಳಿದೆ.

ಗಾಯಕಿ ಟೀನಾ ಟರ್ನರ್ ನಿಧನ

ನ್ಯೂಯಾರ್ಕ್ (ಎಪಿ): ಖ್ಯಾತ ಗಾಯಕಿ ಟೀನಾ ಟರ್ನರ್(83) ಅವರು ಸ್ವಿಟ್ಜರ್‌ಲೆಂಡ್‌ನ ಜ್ಯೂರಿಕ್‌ನಲ್ಲಿ ಬುಧವಾರ ನಿಧನರಾದರು.

ಇವರು ಕ್ಯಾನ್ಸರ್ ಸೇರಿ ಹಲವು ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದರು. ಸಂಗೀತ ಕ್ಷೇತ್ರದ ದಿಗ್ಗಜರು, ನಟರು, ಕ್ರೀಡಾಪಟುಗಳು ಸೇರಿ ಹಲವು ಗಣ್ಯರು ಕಂಬನಿ ಮಿಡಿದಿದ್ದಾರೆ.

'ನನ್ನ ಅದ್ಭುತ ಸ್ನೇಹಿತೆ ಟೀನಾ ಅವರ ನಿಧನದಿಂದ ದುಖಿಃತನಾಗಿದ್ದೇನೆ. ಅವರು ಅಗಾಧ ಪ್ರತಿಭೆ ಹೊಂದಿದ್ದ ಸಂಗೀತಗಾರ್ತಿ. ನನಗೆ ಅವರು ಮಾಡಿರುವ ಸಹಾಯವನ್ನು ಮರೆಯುವುದಿಲ್ಲ' ಎಂದು ಮಿಕ್ ಜಾಗ್ಗರ್ ಇನ್‌ಸ್ಟಗ್ರಾಂ ಪೋಸ್ಟ್ ಹಾಕಿದ್ದಾರೆ.

'ಟೀನಾ ಅವರು ಸದಾ ಮುನ್ನುಗ್ಗುವ ಛಲವುಳ್ಳ, ತನ್ನ ತನವನ್ನು ಕಾಪಾಡಿಕೊಂಡ ಕಲಾವಿದೆ. ಜಗತ್ತಿನಾದ್ಯಂತ ಇರುವ ಟೀನಾ ಅವರ ಅಭಿಮಾನಿಗಳ ಜೊತೆ ಸೇರಿ ಅವರಿಗೆ ಗೌರವ ಸೂಚಿಸುತ್ತಿದ್ದೇವೆ' ಎಂದು ಅಮೆರಿಕ ಮಾಜಿ ಅಧ್ಯಕ್ಷ ಬರಾಕ್ ಒಬಾಮ ಟ್ವೀಟ್ ಮಾಡಿದ್ದಾರೆ.



ಟೀನಾ ಟರ್ನರ್

'ಟೀನಾರಂಥ ಪ್ರತಿಭಾವಂತರು ಒಂದು ತಲೆಮಾರಿಗೆ ಒಬ್ಬರಷ್ಟೇ ಜನಿಸುವುದು. ಅವರು ಅಮೆರಿಕದ ಸಂಗೀತ ಕ್ಷೇತ್ರದ ದಿಕ್ಕನ್ನೇ ಬದಲಿಸಿದವರು. ಟೀನಾ ಅವರ ವೈಯಕ್ತಿಕ ಸಾಮರ್ಥ್ಯವು ಅಸಾಧಾರಣವಾದದ್ದು. ಸಂಕಷ್ಟಗಳು ಮತ್ತು ನಿಂದನೆಗಳನ್ನು ಮೀರಿ ವೃತ್ತಿ ಜೀವನ, ಜೀವನ ಮತ್ತು ಪರಂಪರೆಯನ್ನು ಅವರೇ ಸ್ವತಃ ಕಟ್ಟಿಕೊಂಡರು' ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಹೇಳಿದ್ದಾರೆ.

ವಿದಾಯ: ಟೀನಾ ಅವರ ಅಂತ್ಯ ಸಂಸ್ಕಾರ ಜೂರಿಕ್‌ನ ಹೊರವಲಯದ ಅವರ ನಿವಾಸದ ಬಳಿ ನೆರವೇರಿಸಲಾಯಿತು. ಆ ಸ್ಥಳದಲ್ಲಿ ಟೀನಾ ಅವರು ಮೂರು ದಶಕಗಳಿಂದ ನೆಲೆಸಿದ್ದರು. ಅಭಿಮಾನಿಗಳು ಅವರ ನಿವಾಸಕ್ಕೆ ತೆರಳಿ ಪ್ರಮುಖ ದ್ವಾರದ ಬಳಿ ಹೂಗುಚ್ಛ ಮತ್ತು ಸಂದೇಶಗಳನ್ನು ಬರೆಯಲಾಗಿದ್ದ ಪತ್ರಗಳನ್ನು ಇರಿಸಿ ಗೌರವ ಸಲ್ಲಿಸಿದರು.

ವಿರೋಧ

ನೂತನ ಸಂಸತ್ ಭವನವನ್ನು ರಾಷ್ಟ್ರಪತಿ ಮುರ್ಮು ಅವರು ಉದ್ಘಾಟಿಸುತ್ತಿಲ್ಲ ಎಂಬುದನ್ನು ತಿಳಿದು ನಮಗೆ ಬೇಸರವಾಗಿದೆ. ಈ ಭವನವನ್ನು ರಾಷ್ಟ್ರಪತಿ ಅವರಿಂದ ಏಕೆ ಉದ್ಘಾಟಿಸುತ್ತಿಲ್ಲ ಎಂಬುದನ್ನು ಪ್ರಧಾನಿ ತಿಳಿಸಬೇಕು.
ಅರವಿಂದ ಕೇಜ್ರಿವಾಲ್, ದೆಹಲಿ ಮುಖ್ಯಮಂತ್ರಿ

ಪ್ರಜಾಪ್ರಭುತ್ವ ವ್ಯವಸ್ಥೆಗೂ 'ಸೆಂಗೋಲ್'ಗೂ ಸಂಬಂಧವಿಲ್ಲ. 'ಸೆಂಗೋಲ್' ರಾಜಪ್ರಭುತ್ವದ ಸಂಕೇತ. 1947ರಲ್ಲಿ ಕೇವಲ ಇದನ್ನು ನೆಹರು ಅವರಿಗೆ ಕೊಡುಗೆಯಾಗಿ ನೀಡಿದ್ದರಷ್ಟೆ
ಟಿ.ಕೆ.ಎಸ್.ಇಳಂಗೋವನ್ ಡಿಎಂಕೆ ವಕ್ತಾರ

ರಾಷ್ಟ್ರಪತಿ ನಮ್ಮ ಗಣತಂತ್ರದ ಮುಖ್ಯಸ್ಥರು. ಇಂಥ ಮಹತ್ವದ ಸಮಾರಂಭದಲ್ಲಿ ರಾಷ್ಟ್ರಪತಿಗಳ ಅನುಪಸ್ಥಿತಿಯು ನಮ್ಮ ಗಣತಂತ್ರ ವ್ಯವಸ್ಥೆಯ ತತ್ವಗಳನ್ನು ಗೌಣವಾಗಿಸುತ್ತದೆ
ಕಪಿಲ್ ಸಿಬಲ್ ರಾಜ್ಯಸಭಾ ಸದಸ್ಯ

ವಂದೇ ಭಾರತ್ ರೈಲಿನಿಂದ ಹಿಡಿದು ನೂತನ ಸಂಸತ್ ಭವನದವರೆಗೂ ಪ್ರಧಾನಿಯೇ ಉದ್ಘಾಟನೆ ಮಾಡುತ್ತಿದ್ದಾರೆ. ಇಂಥ ಮಹತ್ವಾಕಾಂಕ್ಷೆಯು ಅವರ ಸರ್ವಾಧಿಕಾರಿಯ ಗುಣಲಕ್ಷಣ
ಸಾಕೇತ್ ಗೋಖಲೆ ಟಿಎಂಸಿ ವಕ್ತಾರ

ಪರ

ವಿರೋಧ ಪಕ್ಷಗಳು ಸಮಾರಂಭವನ್ನು ಬಹಿಷ್ಕರಿಸುತ್ತಿರುವುದು ಸರಿಯಲ್ಲ. ಈ ವಿಷಯವನ್ನು ಬುಡಕಟ್ಟು ಮಹಿಳೆಯ ಗೌರವದೊಂದಿಗೆ ತಳುಕು ಹಾಕುವುದು ನ್ಯಾಯಯುತವಲ್ಲ
ಮಾಯಾವತಿ ಬಿಎಸ್‌ಪಿ ಮುಖ್ಯಸ್ಥೆ

ವಿರೋಧ ಪಕ್ಷಗಳ ನಿಲುವು ಪ್ರಜಾತಂತ್ರದ ಆಶಯಕ್ಕೆ ಪೂರಕವಾಗಿಲ್ಲ. ತಮ್ಮಲ್ಲಿನ ಎಲ್ಲ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಈ ಸಮಾರಂಭದಲ್ಲಿ ಪಾಲ್ಗೊಳ್ಳಬೇಕು
ವೈ.ಎಸ್.ಜಗನ್‌ಮೋಹನ್ ರೆಡ್ಡಿ, ವೈಎಸ್‌ಆರ್ ಕಾಂಗ್ರೆಸ್ ಅಧ್ಯಕ್ಷ

ಪಕ್ಷದ ಅಧ್ಯಕ್ಷ ಸುಖ್ಬೀರ್ ಬಾದಲ್ ಅವರು ಸಮಾರಂಭದಲ್ಲಿ ಪಾಲ್ಗೊಳ್ಳುವರು. ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ನೀವು ಹೇಗೆ ನಡೆದುಕೊಂಡಿದ್ದಿರಿ ಎಂಬುದನ್ನು ನೆನಪಿಸಿಕೊಳ್ಳಿ. ಆಗ ಸಂಸತ್ತು ಹಾಗೂ ಸಂವಿಧಾನಕ್ಕೆ ಗೌರವ ಕೊಟ್ಟಿದ್ದಿರಾ?
ದಲ್‌ಜೀತ್ ಸಿಂಗ್ ಚೀಮಾ ಅಕಾಲಿ ದಳ ಮುಖಂಡ

ಸಿಡ್ನಿಯಲ್ಲಿ ಭಾರತೀಯರು ಆಯೋಜಿಸಿದ್ದ ಕಾರ್ಯಕ್ರಮ ಪ್ರಸ್ತಾಪ

ವಿಪಕ್ಷಗಳ ವಿರುದ್ಧ ವಾಗ್ದಾಳಿ


ಪ್ರಜಾವಾಣಿ ವಾರ್ತೆ

ನವದೆಹಲಿ: ನೂತನ ಸಂಸತ್ ಭವನ ಉದ್ಘಾಟನಾ ಸಮಾರಂಭವನ್ನು ಬಹಿಷ್ಕರಿಸುವುದಾಗಿ ಘೋಷಣೆ ಮಾಡಿರುವ ಹಲವು ವಿರೋಧ ಪಕ್ಷಗಳ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ಗುರುವಾರ ಪರೋಕ್ಷ ವಾಗ್ದಾಳಿ ನಡೆಸಿದರು.

'ಸಿಡ್ನಿಯಲ್ಲಿ ಭಾರತೀಯ ಸಮುದಾಯ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಆಸ್ಟ್ರೇಲಿಯಾದ ಆಡಳಿತ ಮತ್ತು ವಿರೋಧ ಪಕ್ಷದ ನಾಯಕರು ಪಾಲ್ಗೊಂಡಿದ್ದರು. ಅದು ಪ್ರಜಾಪ್ರಭುತ್ವ ವ್ಯವಸ್ಥೆಯ ಆತ್ಮ ಮತ್ತು ಶಕ್ತಿಯ ಪ್ರದರ್ಶನದಂತಿತ್ತು' ಎಂದು ಹೇಳುವ ಮೂಲಕ ವಿರೋಧ ಪಕ್ಷಗಳತ್ತ ಚಾಟಿ ಬೀಸಿದ್ದಾರೆ.

ಆಸ್ಟ್ರೇಲಿಯ ಪ್ರವಾಸದಿಂದ ಮರಳಿದ ನಂತರ ಪಾಲಂ ವಿಮಾನ ನಿಲ್ದಾಣದಲ್ಲಿ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, 'ಸಿಡ್ನಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಆಸ್ಟ್ರೇಲಿಯ ಪ್ರಧಾನಿ ಆಂಥೋಣಿ ಅಲ್ಬನೀಸ್ ಸೇರಿದಂತೆ ಆಡಳಿತ ಪಕ್ಷದ ಪದಾಧಿಕಾರಿಗಳು ಮಾತ್ರವಲ್ಲ, ಮಾಜಿ ಪ್ರಧಾನಿ ಸೇರಿ ವಿರೋಧ ಪಕ್ಷಗಳ ಸದಸ್ಯರು ಕೂಡ ಪಾಲ್ಗೊಂಡಿದ್ದರು' ಎಂದರು.

'ಭಾರತೀಯ ಸಮುದಾಯ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರತಿಯೊಬ್ಬರು ಪಾಲ್ಗೊಂಡಿದ್ದರಿಂದ ಅಲ್ಲಿ ಪ್ರಜಾತಂತ್ರದ ಪರಿಸರ ಕಂಡುಬಂದಿತ್ತು. ಭಾರತದ ಪ್ರತಿನಿಧಿಯೊಬ್ಬರಿಗೆ ಪ್ರತಿಯೊಬ್ಬರು ಗೌರವ ನೀಡಿದರು. ಅಂದಿನ ಕಾರ್ಯಕ್ರಮ ಮೋದಿಯ ವೈಭವೀಕರಣವಾಗಿರದೇ, ಭಾರತದ ಶಕ್ತಿಗೆ ಸಂದ ಗೌರವವಾಗಿತ್ತು' ಎಂದು ಹೇಳಿದರು.



ವಿದೇಶ ಪ್ರವಾಸದಿಂದ ಮರಳಿದ ನಂತರ ನವದೆಹಲಿಯ ಪಾಲಂ ವಿಮಾನ ನಿಲ್ದಾಣ ಬಳಿ ತಮಗೆ ಸ್ವಾಗತ ಕೋರಿದ ಬೆಂಬಲಿಗರತ್ತ ಪ್ರಧಾನಿ ಗುರುವಾರ ಕೈಬೀಸಿದರು — ಪಿಟಿಐ ಚಿತ್ರ

ವಿದೇಶ ನೆಲದಲ್ಲಿ ಭಾರತ ಮತ್ತು ಭಾರತೀಯರ ಶಕ್ತಿ ಬಗ್ಗೆ ವಿಶ್ವಾಸದಿಂದ ಮಾತನಾಡುತ್ತೇನೆ. ನನ್ನ ಮುಂದೆ ದೊಡ್ಡ ಸವಾಲುಗಳಿವೆ. ಆದರೆ, ಸವಾಲುಗಳಿಗೇ ಸವಾಲು ಒಡ್ಡುವುದು ನನ್ನ ಸ್ವಭಾವ
ನರೇಂದ್ರ ಮೋದಿ, ಪ್ರಧಾನಿ

ಹೆಚ್ಚಿದ ವಿಪಕ್ಷಗಳ ಸಂಖ್ಯೆ: ನೂತನ ಸಂಸತ್ ಭವನವನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಬದಲಾಗಿ ಪ್ರಧಾನಿ ಮೋದಿ ಉದ್ಘಾಟಿಸುತ್ತಿರುವುದರಿಂದ ಸಮಾರಂಭವನ್ನು ಬಹಿಷ್ಕರಿಸುವುದಾಗಿ ವಿರೋಧ ಪಕ್ಷಗಳು ಬುಧವಾರ ಘೋಷಿಸಿದ್ದವು. ಎಐಯುಡಿಎಫ್ ಕೂಡ ಕಾರ್ಯಕ್ರಮದಿಂದ ದೂರ ಉಳಿಯುವುದಾಗಿ ಹೇಳಿದ್ದು, ಸಮಾರಂಭವನ್ನು ಬಹಿಷ್ಕರಿಸುವ ವಿರೋಧ ಪಕ್ಷಗಳ ಸಂಖ್ಯೆ 22ಕ್ಕೆ ಏರಿದಂತಾಗಿದೆ.

ಈ ವಿಷಯವಾಗಿ ವಿರೋಧ ಪಕ್ಷಗಳು ಮೋದಿ ವಿರುದ್ಧ ಮತ್ತೆ ವಾಗ್ದಾಳಿ ನಡೆಸಿವೆ. 'ಮೋದಿ ನೇತೃತ್ವದ ಸರ್ಕಾರದ ಅಹಂಕಾರವು ದೇಶದ ಸಂಸದೀಯ ವ್ಯವಸ್ಥೆಯನ್ನು ನಾಶಪಡಿಸಿದೆ' ಎಂದು ಅವರು ಹರಿದಾಯ್ದಿವೆ.

ಎನ್‌ಡಿಎ ಮಿತ್ರ ಪಕ್ಷಗಳ ವಾಗ್ದಾಳಿ: ಸಮಾರಂಭದಿಂದ ದೂರ ಉಳಿಯುವ ವಿರೋಧ ಪಕ್ಷಗಳ ನಿರ್ಧಾರವು ಪ್ರಜಾಸತ್ತಾತ್ಮಕ ತತ್ವಗಳು ಹಾಗೂ ಸಾಂವಿಧಾನಿಕ ಮೌಲ್ಯಗಳಿಗೆ ಮಾಡಿರುವ ಘೋರ ಅವಮಾನ ಎಂದು ಎನ್‌ಡಿಎ ಮಿತ್ರ ಪಕ್ಷಗಳು ಟೀಕಿಸಿವೆ.

‘ದೇಶದ ಸಂಸದೀಯ ವ್ಯವಸ್ಥೆ ಧ್ವಂಸ’

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಕಾಂಗ್ರೆಸ್ ಸೇರಿದಂತೆ ಇತರ ವಿರೋಧ ಪಕ್ಷಗಳು ಗುರುವಾರ ಮತ್ತೆ ವಾಗ್ದಾಳಿ ನಡೆಸಿವೆ.

'ಒಬ್ಬ ವ್ಯಕ್ತಿಯ ಅಹಂ ಹಾಗೂ ತನ್ನ ಬಳಿಗೆ ಕುರಿತ ಹಂಬಲದಿಂದಾಗಿ, ರಾಷ್ಟ್ರಪತಿಯಾಗಿರುವ ದೇಶದ ಮೊದಲ ಬುಡಕಟ್ಟು ಮಹಿಳೆಯು ನೂತನ ಸಂಸತ್ ಭವನ ಉದ್ಘಾಟಿಸುವ ಸಾಂವಿಧಾನಿಕ ಹಕ್ಕಿನಿಂದ ವಂಚಿತರಾಗಬೇಕಾಗಿದೆ' ಎಂದು ಕಾಂಗ್ರೆಸ್ ಟೀಕಿಸಿದೆ.

'ಮೋದಿ ನೇತೃತ್ವದ ಸರ್ಕಾರದ ಅಹಂಕಾರವು ಸಂಸದೀಯ ವ್ಯವಸ್ಥೆಯನ್ನೇ ಧ್ವಂಸಗೊಳಿಸಿದೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದ್ದಾರೆ.

'ಸಂಸತ್ ಭವನ ಎಂಬುದು ಪ್ರಜಾತಂತ್ರದ ದೇವಾಲಯ ಇದ್ದಂತೆ. ರಾಷ್ಟ್ರಪತಿಗಳು ಸಂಸತ್ತಿನ ಮುಖ್ಯಸ್ಥರು. ನೂತನ ಸಂಸತ್ ಭವನವನ್ನು ರಾಷ್ಟ್ರಪತಿ ಉದ್ಘಾಟಿಸಬೇಕು. ಆದರೆ, ಅವರಿಂದ ಈ ಹಕ್ಕನ್ನು ಕಸಿದುಕೊಳ್ಳುವ ಮೂಲಕ ನೀವು ಏನು ಹೇಳಲು ಹೊರಟಿದ್ದೀರಿ ಎಂಬುದನ್ನು ತಿಳಿದುಕೊಳ್ಳಲು ದೇಶದ 140 ಕೋಟಿ ಜನರು ಬಯಸುತ್ತಾರೆ' ಎಂದು ಹೇಳಿದ್ದಾರೆ.

ಜೈರಾಮ್ ರಮೇಶ್ ವ್ಯಂಗ್ಯ: ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಟ್ವೀಟ್ ಮೂಲಕ ಪ್ರಧಾನಿ ವಿರುದ್ಧ ಮತ್ತೊಮ್ಮೆ ಹರಿಹಾಯ್ದಿದ್ದಾರೆ.

'ಅಶೋಕ ದಿ ಗ್ರೇಟ್, ಅಕ್ಬರ್ ದಿ ಗ್ರೇಟ್, ಮೋದಿ ದಿ ಇನಾಗುರೇಟ್' ಎಂದು ಇಂಗ್ಲಿಷ್‌ನಲ್ಲಿ ಟ್ವೀಟ್ ಮಾಡಿದ್ದಾರೆ.

ನೂತನ ಸಂಸತ್ ಭವನ ಉದ್ಘಾಟನೆ ವಿವಾದ ಸುಪ್ರೀಂ ಕೋರ್ಟ್‌ಗೆ ಪಿಐಎಲ್ ಸಲ್ಲಿಕೆ



ನವದೆಹಲಿ (ಪಿಟಿಐ): ನೂತನ ಸಂಸತ್ ಭವನ ಉದ್ಘಾಟನಾ ಸಮಾರಂಭ ವಿಚಾರವಾಗಿ ಕೇಂದ್ರ ಸರ್ಕಾರ ಹಾಗೂ ಹಲವು ವಿರೋಧ ಪಕ್ಷಗಳ ನಡುವೆ ಸಂಘರ್ಷ ಜೋರಾಗುತ್ತಿರುವ ನಡುವೆಯೇ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದಲೇ ಉದ್ಘಾಟನೆ ನೆರವೇರಿಸುವಂತೆ ಲೋಕಸಭೆಯ ಸೆಕ್ರೆಟರಿಯೇಟ್‌ಗೆ ನಿರ್ದೇಶಿಸುವಂತೆ ಕೋರಿ ಸುಪ್ರೀಂ ಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿದೆ.

ವಕೀಲ ಸಿ.ಆರ್. ಜಯ ಸುಕಿನ್ ಎಂಬುವವರು ಈ ಪಿಐಎಲ್ ಸಲ್ಲಿಸಿದ್ದು, ಈ ಸಂಬಂಧ ಕೇಂದ್ರ ಸರ್ಕಾರಕ್ಕೂ ನಿರ್ದೇಶನ ನೀಡುವಂತೆ ಕೋರಿದ್ದಾರೆ. ಸುಪ್ರೀಂ ಕೋರ್ಟ್ ಶುಕ್ರವಾರ ಅರ್ಜಿ ವಿಚಾರಣೆ ನಡೆಸಲಿದೆ.

'ನೂತನ ಸಂಸತ್ ಭವನದ ಉದ್ಘಾಟನೆಗೆ ರಾಷ್ಟ್ರಪತಿ ಅವರನ್ನು ಆಹ್ವಾನಿಸದಿರುವ ಲೋಕಸಭಾ ಸೆಕ್ರೆಟರಿಯೇಟ್ ಕ್ರಮ ಸಂವಿಧಾನದ ಉಲ್ಲಂಘನೆಯಾಗುತ್ತದೆ' ಎಂದು ಅರ್ಜಿದಾರರು ಹೇಳಿದ್ದಾರೆ.

ಲೋಕಸಭಾ ಸೆಕ್ರೆಟರಿಯೇಟ್, ಗೃಹ ಸಚಿವಾಲಯ, ಕಾನೂನು ಸಚಿವಾಲಯವನ್ನು ಅವರು ಪ್ರತಿವಾದಿಗಳನ್ನಾಗಿ ಮಾಡಿದ್ದಾರೆ.

‘ಇಂದು ದೇಶದಾದ್ಯಂತ ಪ್ರತಿಭಟನೆ’

ನವದೆಹಲಿ(ಪಿಟಿಐ): ನೂತನ ಸಂಸತ್ ಭವನವನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಉದ್ಘಾಟಿಸದಿರುವುದನ್ನು ಅಖಿಲ ಭಾರತ ಆದಿವಾಸಿ ಕಾಂಗ್ರೆಸ್ (ಎಐಎಸಿ) ಖಂಡಿಸಿದೆ.

'ಇಂಥ ನಡೆ ಮೂಲಕ ಮೋದಿ ನೇತೃತ್ವದ ಸರ್ಕಾರವು, ರಾಷ್ಟ್ರಪತಿ ಹುದ್ದೆಗೇರಿರುವ ದೇಶದ ಮೊದಲ ಬುಡಕಟ್ಟು ಮಹಿಳೆಗೆ ಅವಮಾನಿಸಿದೆ' ಎಂದು ಹೇಳಿರುವ ಎಐಎಸಿ ಅಧ್ಯಕ್ಷ ಶಿವಾಜಿರಾವ್ ಮೋಘೆ, ಇದರ ವಿರುದ್ಧ ಶುಕ್ರವಾರ ದೇಶದಾದ್ಯಂತ ಪ್ರತಿಭಟನೆ ನಡೆಸುವುದಾಗಿ ತಿಳಿಸಿದ್ದಾರೆ.

ಸರ್ವಧರ್ಮ ಪ್ರಾರ್ಥನೆ ಸೇರಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು

ನವದೆಹಲಿ (ಪಿಟಿಐ): ನೂತನ ಸಂಸತ್ ಭವನ ಉದ್ಘಾಟನೆ ಅಂಗವಾಗಿ ಭಾನುವಾರ ಬೆಳಿಗ್ಗೆಯಿಂದಲೇ ಹೋಮ-ಹವನ ಸೇರಿದಂತೆ ವಿವಿಧ ಧಾರ್ಮಿಕ ವಿಧಿಗಳು ನಡೆಯಲಿವೆ.

ಸರ್ವ ಧರ್ಮ ಪ್ರಾರ್ಥನೆ ಬಳಿಕ, ಪ್ರಧಾನಿ ನರೇಂದ್ರ ಮೋದಿ ಅವರಿಂದ ಔಪಚಾರಿಕ ಉದ್ಘಾಟನೆ ನೆರವೇರಿಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

7ಗಂಟೆಗೆ ಸಂಸತ್ ಭವನದ ಹೊರಗೆ ಹವನ ನಡೆಯಲಿದೆ. ನಂತರ,ತಮಿಳುನಾಡಿನಿಂದ ಬರುವ 20 ಮಠಾಧೀಶರು ಪ್ರಧಾನಿ ಮೋದಿ ಅವರಿಗೆ ಸೆಂಗೋಲ್ ಅನ್ನು ಹಸ್ತಾಂತರಿಸುವರು. ಬಳಿಕ ಅದನ್ನು ಸ್ಪೀಕರ್ ಪೀಠದ ಬಳಿ ಪ್ರತಿಷ್ಠಾಪಿಸಲಾಗುವುದು.

ಉದ್ಘಾಟನೆಗೆ ಸಂಬಂಧಿಸಿದ ಪ್ರಧಾನ ಸಮಾರಂಭ ಮಧ್ಯಾಹ್ನ ನಡೆಯಲಿದೆ. ಪ್ರಧಾನಿ ಮೋದಿ, ಮಾಜಿ ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು, ಲೋಕಸಭಾ ಸ್ಪೀಕರ್ ಓಂ ಬಿರ್ಲಾ, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ರಾಜ್ಯಸಭಾ ಉಪಸಭಾಪತಿ ಹರಿವಂಶ್ ಮತ್ತಿತರರು ಪಾಲ್ಗೊಳ್ಳುವರು.

ಬಹಿಷ್ಕಾರ ನಿರ್ಧಾರ ಮರುಪರಿಶೀಲಿಸಿ: ಸಚಿವೆ ನಿರ್ಮಲಾ

ಚೆನ್ನೈ (ಪಿಟಿಐ): ನೂತನ ಸಂಸತ್ ಭವನ ಉದ್ಘಾಟನಾ ಸಮಾರಂಭವನ್ನು ಬಹಿಷ್ಕರಿಸುವ ತಮ್ಮ ನಿರ್ಧಾರವನ್ನು ವಿರೋಧ ಪಕ್ಷಗಳು ಮರುಪರಿಶೀಲನೆ ಮಾಡಬೇಕು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಗುರುವಾರ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಂಸತ್ ಎಂಬುದು ಪ್ರಜಾಪ್ರಭುತ್ವ ವ್ಯವಸ್ಥೆಯ ದೇವಾಲಯ ಇದ್ದಂತೆ. ಹೀಗಾಗಿ, ವಿರೋಧ ಪಕ್ಷಗಳು ತಮ್ಮ ನಿರ್ಧಾರವನ್ನು ಮರುಪರಿಶೀಲಿಸಬೇಕು' ಎಂದರು.

'ಛತ್ತೀಸ್‌ಗಢ ವಿಧಾನಸಭೆ ಕಟ್ಟಡ ನಿರ್ಮಾಣಕ್ಕೆ ಆ ರಾಜ್ಯದ ರಾಜ್ಯಪಾಲರ ಬದಲಾಗಿ ಸೋನಿಯಾ ಗಾಂಧಿ ಶಿಲಾನ್ಯಾಸ ನೆರವೇರಿಸಿದ್ದರು' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. 'ತಮ್ಮ ಅನುಕೂಲಕ್ಕೆ ತಕ್ಕಂತೆ ರಾಜಕಾರಣ ಮಾಡುವ ಪ್ರವೃತ್ತಿ ಕೆಲ ರಾಜಕೀಯ ಪಕ್ಷಗಳಲ್ಲಿದೆ' ಎಂದು ತೆಲಂಗಾಣ ರಾಜ್ಯಪಾಲರಾದ ಡಾ.ತಮಿಳಿಸೈ ಸೌಂದರರಾಜನ್ ಹೇಳಿದರು.

ಕಾಂಗ್ರೆಸ್‌ನಿಂದ ಹಿಂದೂ ಪರಂಪರೆಗೆ ಅಗೌರವ- ಬಿಜೆಪಿ: ನವದೆಹಲಿ(ಪಿಟಿಐ): 'ಪವಿತ್ರವಾದ 'ಸೆಂಗೋಲ್' ಅನ್ನು ಮಾಜಿ ಪ್ರಧಾನಿ ಜವಾಹರಲಾಲ್ ನೆಹರೂ ಅವರಿಗೆ ಕೊಡುಗೆಯಾಗಿ ನೀಡಲಾಗಿದ್ದ ಬಂಗಾರದ ಕೋಲು ಎಂದು ಹೇಳುತ್ತಿದ್ದ ಕಾಂಗ್ರೆಸ್ ಅದನ್ನು ಮ್ಯೂಸಿಯಂನಲ್ಲಿ ಇಟ್ಟಿತ್ತು. ಆ ಮೂಲಕ ಕಾಂಗ್ರೆಸ್ ಪಕ್ಷ ಹಿಂದೂ ಆಚರಣೆಗಳಿಗೆ ಅಗೌರವ ತೋರಿಸಿತ್ತು' ಎಂದು ಬಿಜೆಪಿ ಆರೋಪಿಸಿದೆ.


ಈ ಕುರಿತು ಬಿಜೆಪಿ ಐಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಟ್ವೀಟ್ ಮಾಡಿದ್ದಾರೆ. 'ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ ಸಂದರ್ಭದಲ್ಲಿ, ಅಧಿಕಾರ ಹಸ್ತಾಂತರದ ದ್ಯೋತಕವಾಗಿ ಈ ಸೆಂಗೋಲ್ ಅನ್ನು ನೆಹರೂ ಅವರಿಗೆ ನೀಡಲಾಗಿತ್ತು. ನೆಹರೂ ಅವರಿಗೆ ನೀಡಿದ್ದ ಬಂಗಾರದ ಕೋಲು ಎಂದು ಹೇಳಿ, ಅದನ್ನು ಆನಂದ ಭವನಕ್ಕೆ (ನೆಹರೂ ಅವರ ಪೂರ್ವಿಕರ ನಿವಾಸ) ಒಯ್ಯಲಾಗಿತ್ತು' ಎಂದಿದ್ದಾರೆ.

‘ಉದ್ಘಾಟನೆಯಲ್ಲಿ ಪಾಲ್ಗೊಳ್ಳುವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೂತನ ಸಂಸತ್ ಭವನ ದೇಶದ ಆಸ್ತಿ. ಅದು ಯಾರೊಬ್ಬರ ವೈಯಕ್ತಿಕ ವಿಷಯವಲ್ಲ. ಹೀಗಾಗಿ ಸಂಸತ್ ಭವನದ ಉದ್ಘಾಟನೆಯಲ್ಲಿ ನಾನು ಪಾಲ್ಗೊಳ್ಳುತ್ತೇನೆ' ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಹೇಳಿದರು.

ನಗರದ ಅರಮನೆ ಮೈದಾನದಲ್ಲಿ ಗುರುವಾರ ನಡೆದ ಜೆಡಿಎಸ್ ಆತ್ಮಾವಲೋಕನ ಸಭೆಯಲ್ಲಿ ಮಾತನಾಡಿದ ಅವರು, 'ಸಂಸತ್ ಭವನವು ಬಿಜೆಪಿ ಅಥವಾ ಆರ್‌ಎಸ್‌ಎಸ್ ಕಚೇರಿಯಲ್ಲ. ದೇಶದ ಜನರ ತೆರಿಗೆಯ ಹಣದಿಂದ ನಿರ್ಮಿಸಿದ ಭವನ ಅದು. ಪ್ರಧಾನಿ ಮೋದಿ ಅವರು ಈ ಕಾರ್ಯಕ್ರಮಕ್ಕೆ ಆಹ್ವಾನ ನೀಡಿದ್ದಾರೆ. ಅದು ಅವರ ವೈಯಕ್ತಿಕ ಕಾರ್ಯಕ್ರಮವಲ್ಲ. ದೇಶದ ಕಾರ್ಯಕ್ರಮ' ಎಂದರು.



ದೇವೇಗೌಡ

'ಸಂಸತ್ತಿನ ಎರಡೂ ಸದನಗಳಲ್ಲಿ ನಾನು ಕೆಲಸ ಮಾಡಿದ್ದೇನೆ. ಈಗಲೂ ರಾಜ್ಯಸಭೆಯ ಸದಸ್ಯನಾಗಿದ್ದೇನೆ. ಬಿಜೆಪಿಯನ್ನು ವಿರೋಧಿಸಲು ನನಗೆ ಅನೇಕ ಕಾರಣಗಳಿವೆ. ಆದರೆ, ಈ ವಿಚಾರದಲ್ಲಿ ರಾಜಕೀಯ ಮಾಡುವುದು ನನಗೆ ಇಷ್ಟವಿಲ್ಲ' ಎಂದರು.

ಮಣಿಪುರದಲ್ಲಿ ಹಿಂಸೆ: ಯುವಕ ಸಾವು

ಇಂಫಾಲ್ (ಪಿಟಿಐ): ಮಣಿಪುರದ ಬಿಷ್ಣುಪುರ ಮತ್ತು ಚುರಾಚಂದ್‌ಪುರ ಜಿಲ್ಲೆಗಳ ಗಡಿ ಪ್ರದೇಶದಲ್ಲಿ ಶಂಕಿತ ಉಗ್ರರು ಮತ್ತು ಜನರ ಗುಂಪಿನ ನಡುವೆ ನಡೆದ ಹಿಂಸಾಚಾರದಲ್ಲಿ ಒಬ್ಬರು ಮೃತಪಟ್ಟಿದ್ದು, ಮತ್ತೊಬ್ಬರು ಗಾಯಗೊಂಡಿದ್ದಾರೆ ಎಂದು ಪೊಲೀಸರು ಗುರುವಾರ ತಿಳಿಸಿದರು.

ಬುಧವಾರ ನಡೆದ ಹಿಂಸಾಚಾರದಲ್ಲಿ ತೋಯಿಜಮ್ ಚಂದ್ರಮೋನಿ (30) ಎಂಬ ಯುವಕ ಗುಂಡೇಟಿಗೆ ಬಲಿಯಾಗಿದ್ದರೆ, ಲೀಚೊಂಬಮ್ ಅಬುಂಗ್ನಾವೊ (22) ಎಂಬುವರು ಗಾಯಗೊಂಡಿದ್ದಾರೆ.

ನಾನು ಸದ್ಯದಲ್ಲಿಯೇ ಮಣಿಪುರಕ್ಕೆ ಭೇಟಿ ನೀಡಲಿದ್ದೇನೆ. ಎರಡೂ ಗುಂಪಿನವರು ಪರಸ್ಪರರ ನಡುವೆ ಇರುವ ಅಪನಂಬಿಕೆಗಳಿಂದ ಹೊರಬರಬೇಕು
ಅಮಿತ್ ಶಾ, ಕೇಂದ್ರ ಗೃಹ ಸಚಿವ

ಬಿಷ್ಣುಪುರ ಜಿಲ್ಲೆಯ ಟೊರೊಂಗ್ಲಾಬಿಯಲ್ಲಿ ಕೆಲ ಗ್ರಾಮಸ್ಥರ ಮನೆಗಳಿಗೆ ಉಗ್ರರು ಮಂಗಳವಾರ ತಡರಾತ್ರಿ ಬೆಂಕಿ ಹಚ್ಚಿದ್ದಾರೆ ಎಂಬ ವರದಿಗಳಿವೆ ಎಂದು ಅವರು ಮಾಹಿತಿ ನೀಡಿದರು.

ಜಿಲ್ಲೆಯ ತಮ್ನಾಪೋಕ್ಪಿ ಬಳಿಯ ಶಾಲೆಯೊಂದಕ್ಕೆ ಉಗ್ರರು ಬೆಂಕಿ ಹಚ್ಚುವ ಸಾಧ್ಯತೆ ಇದೆ ಎಂಬ ವಿಷಯ ತಿಳಿಯುತ್ತಿದ್ದಂತೆ ಕುಪಿತರಾದ ಗ್ರಾಮಸ್ಥರು ಮತ್ತು ಮೊಯಿರಾಂಗ್ ಶಿಬಿರದಲ್ಲಿ ಆಶ್ರಯ ಪಡೆದಿದ್ದ ಜನರು ಗುಂಪುಗೂಡಿ ಶಾಲೆಯ ಬಳಿ ತೆರಳಿದ್ದರು. ಇದೇ ವೇಳೆ ಉಗ್ರರು ಜನರ ಗುಂಪಿನ ಮೇಲೆ ಗುಂಡಿನ ದಾಳಿ ನಡೆಸಿದರು. ಇದರಿಂದ ಇಬ್ಬರು ಗಾಯಗೊಂಡರು. ಅವರನ್ನು ಆಸ್ಪತ್ರೆಗೆ ಸಾಗಿಸುವಾಗ ಒಬ್ಬರು ಮೃತಪಟ್ಟರು ಎಂದು ಅವರು ವಿವರಿಸಿದರು.

ಈ ಹಿಂಸಾಚಾರದ ಬಳಿಕ ಸರ್ಕಾರ ಕೆಲವೆಡೆ 24 ಗಂಟೆಗಳ ಕರ್ಫ್ಯೂ ಹೇರಿದರೆ, ಕೆಲ ಜಿಲ್ಲೆಗಳಲ್ಲಿ ಕರ್ಫ್ಯೂ ಸಡಿಲಿಕೆ ಅವಧಿಯನ್ನು ಕಡಿತಗೊಳಿಸಿದೆ.

ಕೇಂದ್ರ ಸಚಿವ ಅಮಿತ್ ಶಾಗೆ ಮುಖ್ಯಮಂತ್ರಿ ಸ್ಟಾಲಿನ್ ಪತ್ರ

ಅಮೂಲ್‌ನಿಂದ ಹಾಲು ಸಂಗ್ರಹ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನಲ್ಲಿ ಹಾಲು ಸಂಗ್ರಹಣೆಗೆ ಮುಂದಾಗಿರುವ ಗುಜರಾತ್‌ನ ಅಮೂಲ್ ಧೋರಣೆಗೆ ಸಿ.ಎಂ ಎಂ.ಕೆ. ಸ್ಟಾಲಿನ್ ನೇತೃತ್ವದ ರಾಜ್ಯ ಸರ್ಕಾರ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ವಿಧಾನಸಭಾ ಚುನಾವಣಾ ಪೂರ್ವದಲ್ಲಿ ಕರ್ನಾಟಕದಲ್ಲಿಯೂ ಅಮೂಲ್, ಹಾಲು ಮಾರಾಟಕ್ಕೆ ಮುಂದಾಗಿತ್ತು. ಇದನ್ನು ವಿರೋಧಿಸಿ 'ನಂದಿನಿ' ಉಳಿಸಿ ಅಭಿಯಾನ ನಡೆದಿತ್ತು.



ಈಗ ತಮಿಳುನಾಡು ಹಾಲು ಉತ್ಪಾದಕರ ಸಹಕಾರ ಒಕ್ಕೂಟ (ಆವಿನ್)ದ ವ್ಯಾಪ್ತಿಯಲ್ಲಿ ಹಾಲು ಸಂಗ್ರಹಣೆಗೆ ಮುಂದಾಗಿರುವುದಕ್ಕೆ ಸ್ಟಾಲಿನ್ ವಿರೋಧ ವ್ಯಕ್ತಪಡಿಸಿದ್ದು, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಪತ್ರವನ್ನೂ ಬರೆದಿದ್ದಾರೆ.

'ಸಹಕಾರ ಸಂಘಗಳು ಹಾಲು ಉತ್ಪಾದನಾ ಪ್ರದೇಶಗಳಲ್ಲಿ ಹಸ್ತಕ್ಷೇಪ ಮಾಡದೆ ಅಭಿವೃದ್ಧಿ ಹೊಂದುವುದು ಭಾರತದಲ್ಲಿ ರೂಢಿಗತವಾಗಿದೆ. ಆದರೆ, ಅಮೂಲ್ ತಮಿಳುನಾಡಿನಲ್ಲಿ ಹಾಲು ಸಂಗ್ರಹಣೆಗೆ ಮುಂದಾಗಿದೆ. ಆ ಮೂಲಕ ಸಂಪ್ರದಾಯವನ್ನು ಉಲ್ಲಂಘಿಸುತ್ತಿದೆ. ಕೂಡಲೇ, ಈ ಪ್ರಕ್ರಿಯೆ ಸ್ಥಗಿತಗೊಳಿಸುವಂತೆ ಅಮೂಲ್‌ಗೆ ನಿರ್ದೇಶನ ನೀಡಬೇಕು ಎಂದು ಸ್ಟಾಲಿನ್ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ವಿಕ್ರಾಂತ್ ಮೇಲೆ ಮಿಗ್–29ಕೆ ವಿಮಾನ ‘ನೈಟ್ ಲ್ಯಾಂಡಿಂಗ್’

ನವದೆಹಲಿ (ಪಿಟಿಐ): ಮಿಗ್–29ಕೆ ಯುದ್ಧ ವಿಮಾನವು, ದೇಶೀಯವಾಗಿ ಅಭಿವೃದ್ಧಿಪಡಿಸಲಾಗಿರುವ ವಿಮಾನವಾಹಕ ಯುದ್ಧನೌಕೆ 'ಐಎನ್‌ಎಸ್ ವಿಕ್ರಾಂತ್' ಮೇಲೆ ಇದೇ ಮೊದಲ ಬಾರಿಗೆ ರಾತ್ರಿ ವೇಳೆಯಲ್ಲಿ (ನೈಟ್ ಲ್ಯಾಂಡಿಂಗ್) ಇಳಿದ ಸಾಧನೆ ಮಾಡಿದೆ. ಭಾರತೀಯ ನೌಕಾಪಡೆಯು ಇದನ್ನು ಐತಿಹಾಸಿಕ ಮೈಲಿಗಲ್ಲು ಎಂದು ಬಣ್ಣಿಸಿದೆ.

'ರಾತ್ರಿ ವೇಳೆಯಲ್ಲಿ ಐಎನ್‌ಎಸ್ ವಿಕ್ರಾಂತ್ ಮೇಲೆ ಮಿಗ್–29ಕೆ ಯುದ್ಧ ವಿಮಾನವನ್ನು ಇಳಿಸುವುದು ಅತ್ಯಂತ ಸವಾಲಿನ ಕೆಲಸವಾಗಿತ್ತು. ಪ್ರಾಯೋಗಿಕವಾಗಿ ನಡೆಸಿದ ಈ ಕಾರ್ಯದಲ್ಲಿ ಯಶಸ್ಸು ಲಭಿಸಿದೆ. ಐಎನ್‌ಎಸ್ ವಿಕ್ರಾಂತ್ ಹಾಗೂ ನೌಕಾಪಡೆಯ ಪೈಲಟ್‌ಗಳ ವೃತ್ತಿಪರತೆ ಹಾಗೂ ಕೌಶಲಕ್ಕೆ ಇದು ಸಾಕ್ಷಿಯಾಗಿದೆ' ಎಂದು ನೌಕಾಪಡೆ ತಿಳಿಸಿದೆ.

'ಐಎನ್‌ಎಸ್ ವಿಕ್ರಾಂತ್ ಬುಧವಾರ ರಾತ್ರಿ ಅರಬ್ಬಿ ಸಮುದ್ರದಲ್ಲಿ ಸಾಗುತ್ತಿದ್ದಾಗ ಅದರ ಮೇಲೆ ಮಿಗ್–29ಕೆ ಇಳಿದಿದೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

ಮಹಾಪಂಚಾಯತ್ ಸಂಘಟನೆಗಾಗಿ ಬಜರಂಗ್, ವಿನೇಶಾ ಪ್ರವಾಸ

ನವದೆಹಲಿ (ಪಿಟಿಐ): ಕುಸ್ತಿಪಟುಗಳಾದ ಬಜರಂಗ್ ಪೂನಿಯಾ ಹಾಗೂ ವಿನೇಶಾ ಪೋಗಟ್ ಅವರು ಇದೇ 28ರಂದು ಮಹಿಳಾ ಮಹಾಪಂಚಾಯತ್ ಆಯೋಜನೆಗೆ ಸಿದ್ಧತೆ ನಡೆಸಿದ್ದಾರೆ.

ಭಾರತ ಕುಸ್ತಿ ಫೆಡರೇಷನ್ ಮಾಜಿ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರು ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆಂದು ಆರೋಪಿಸಿರುವ ಖ್ಯಾತನಾಮ ಕುಸ್ತಿಪಟುಗಳು ಕಳೆದೊಂದು ತಿಂಗಳಿನಿಂದ ಧರಣಿ ನಡೆಸುತ್ತಿದ್ದಾರೆ. ತಮ್ಮ ಪ್ರತಿಭಟನೆಯನ್ನು ತೀವ್ರಗೊಳಿಸಲು ಧರಣಿಯ ನೇತೃತ್ವ ವಹಿಸಿರುವ ವಿನೇಶಾ ಪೋಗಟ್ ಹಾಗೂ ಬಜರಂಗ್ ಪೂನಿಯಾ ಅವರು ಮತ್ತೊಂದು ಹೆಜ್ಜೆ ಮುಂದಿಟ್ಟಿದ್ದಾರೆ.

ಇದೀಗ ಅವರು ಪಂಜಾಬ್ ಹಾಗೂ ಹರಿಯಾಣ ರಾಜ್ಯಗಳಲ್ಲಿ ಪ್ರವಾಸ ಕೈಗೊಂಡು ಖಾಪ್ ಪಂಚಾಯತ್ ಸೇರಿದಂತೆ ವಿವಿಧ ಸಂಘಟನೆಗಳ ಬೆಂಬಲ ಕೋರುತ್ತಿದ್ದಾರೆ. ಮಹಾಪಂಚಾಯತ್‌ಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಲು ಕೋರುತ್ತಿದ್ದಾರೆ. ಅದೇ ದಿನ ರಾಜಧಾನಿಯಲ್ಲಿ ನೂತನ ಸಂಸತ್ ಭವನವೂ ಉದ್ಘಾಟನೆಗೊಳ್ಳಲಿದೆ.

'ವಿನೇಶಾ ಹಾಗೂ ಬಜರಂಗ್ ಅವರು ಜಿಂದ್‌ನಲ್ಲಿ ಖಾಪ್ ಧುರೀಣರನ್ನು ಭೇಟಿಯಾಗಿದ್ದಾರೆ. ಸಾಕ್ಷಿ ಮಲಿಕ್ ಹಾಗೂ ಸತ್ಯವ್ರತ್ ಕಡಿಯಾನ್ ಅವರು ಪಂಜಾಬ್‌ನಲ್ಲಿ ಪ್ರವಾಸ ಮಾಡುತ್ತಿದ್ದು ಬೇರೆ ಬೇರೆ ಧುರೀಣರೊಂದಿಗೆ ಚರ್ಚಿಸುತ್ತಿದ್ದಾರೆ. ಮಹಾಪಂಚಾಯತ್‌ಗೆ ಆಗಮಿಸಲು ಕೋರುತ್ತಿದ್ದಾರೆ' ಎಂದು ಸಂಗೀತಾ ತಿಳಿಸಿದ್ದಾರೆ.

ಅಲ್ವಾರ್‌ನಲ್ಲಿ ಗುಂಪು ಹಲ್ಲೆ: ನಾಲ್ವರಿಗೆ ಏಳು ವರ್ಷ ಶಿಕ್ಷೆ

ಜೈಪುರ (ಪಿಟಿಐ): ರಾಜಸ್ಥಾನದ ಅಲ್ವಾರ್‌ನಲ್ಲಿ ಗೋವು ಕಳ್ಳಸಾಗಣೆದಾರನೆಂದು ಶಂಕಿಸಿ ರಕ್ಬರ್ ಖಾನ್ ಎಂಬುವವರ ಮೇಲೆ ಗುಂಪು ಹಲ್ಲೆ ನಡೆಸಿ ಕೊಲೆ ಮಾಡಿದ್ದ ಆರೋಪಿಗಳ ಪೈಕಿ ನಾಲ್ವರಿಗೆ ಇಲ್ಲಿನ ನ್ಯಾಯಾಲಯ ಗುರುವಾರ ಏಳು ವರ್ಷ ಶಿಕ್ಷೆಯನ್ನು ವಿಧಿಸಿದೆ.

ಐದನೇ ಆರೋಪಿ ನವಲ್ ಕಿಶೋರ್ ಎಂಬುವವರನ್ನು ಸೂಕ್ತ ಸಾಕ್ಷ್ಯಾಧಾರಗಳ ಕೊರತೆಯಿಂದ ಖುಲಾಸೆಗೊಳಿಸಿದೆ.

ಪರಮ್‌ಜಿತ್ ಸಿಂಗ್, ಧರ್ಮೇಂದ್ರ ಯಾದವ್, ನರೇಶ್ ಶರ್ಮಾ ಮತ್ತು ವಿಜಯ್ ಕುಮಾರ್ ಅವರನ್ನು ನ್ಯಾಯಾಧೀಶರು ಅಪರಾಧಿಗಳೆಂದು ಪರಿಗಣಿಸಿ, ಶಿಕ್ಷೆ ವಿಧಿಸಿದರು ಎಂದು ಪಬ್ಲಿಕ್ ಪ್ರಾಸಿಕ್ಯೂಟರ್ ಅಶೋಕ್ ಶರ್ಮಾ ತಿಳಿಸಿದರು.

2018ರ ಜುಲೈ 20ರಂದು ಅಲ್ವಾರ್ ಜಿಲ್ಲೆಯ ರಾಮಗಢ ಪೊಲೀಸ್ ಠಾಣೆ ವ್ಯಾಪ್ತಿಯ ಪ್ರದೇಶದಲ್ಲಿ ಗೋವುಗಳನ್ನು ಕಳ್ಳಸಾಗಣೆ ಮಾಡಿದ್ದಾರೆಂದು ಶಂಕಿಸಿ ರಕ್ಬರ್ ಖಾನ್ ಮತ್ತು ಅವರ ಸ್ನೇಹಿತ ಅಸ್ಲಾಂ ಅವರನ್ನು ಗುಂಪೊಂದು ತೀವ್ರವಾಗಿ ಥಳಿಸಿತ್ತು. ಆರೋಪಿಗಳನ್ನು ಬಂಧಿಸಿ ವಿಚಾರಣೆ ನಡೆಸಿದ ಪೊಲೀಸರು, 2019ರಲ್ಲಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಲಾಡ್‌ಪುರ ಗ್ರಾಮದಿಂದ ಗೋವುಗಳನ್ನು ಖರೀದಿಸಿ ಅವುಗಳನ್ನು ಹರಿಯಾಣದಲ್ಲಿನ ತಮ್ಮ ಊರಿಗೆ ರಕ್ಬರ್ ಖಾನ್ ಮತ್ತು ಅವರ ಸ್ನೇಹಿತ ಅಸ್ಲಾಂ ಕೊಂಡೊಯ್ಯುತ್ತಿದ್ದರು. ಲಲಾವಂಡಿ ಗ್ರಾಮ ಸಮೀಪದ ಗೋವುಗಳನ್ನು ಸಾಗಿಸುತ್ತಿದ್ದಾಗ ಅಡ್ಡಗಟ್ಟಿದ್ದ ಗುಂಪು ಹಲ್ಲೆ ನಡೆಸಿತ್ತು. ಅಸ್ಲಾಂ ತಪ್ಪಿಸಿಕೊಂಡಿದ್ದರು. ಆದರೆ, ಗಾಯಗೊಂಡಿದ್ದ ರಕ್ಬರ್ ಖಾನ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದರು.

ಸಂಕ್ಷಿಪ್ತ ಸುದ್ದಿ

ಕುಸಿದುಬಿದ್ದ ಸತ್ಯೇಂದ್ರ ಜೈನ್: ಆಸ್ಪತ್ರೆಗೆ ದಾಖಲು

ನವದೆಹಲಿ (ಪಿಟಿಐ): ಆಮ್ ಆದ್ಮಿ ಪಕ್ಷದ (ಎಎಪಿ) ನಾಯಕ, ದೆಹಲಿಯ ಮಾಜಿ ಸಚಿವ ಸತ್ಯೇಂದ್ರ ಜೈನ್ ಅವರು ತಿಹಾರ್ ಜೈಲಿನ ಸ್ನಾನಗೃಹದಲ್ಲಿ ಗುರುವಾರ ತಲೆಸುತ್ತಿನಿಂದ ಕುಸಿದು ಬಿದ್ದು ಅಸ್ವಸ್ಥಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಸದ್ಯ ಅವರಿಗೆ ಕೃತಕ ಉಸಿರಾಟದ ವ್ಯವಸ್ಥೆ ಒದಗಿಸಲಾಗಿದೆ.

ಆರಂಭದಲ್ಲಿ ಅವರನ್ನು ಇಲ್ಲಿನ ದೀನ್ ದಯಾಳ್ ಉಪಾಧ್ಯಾಯ ಆಸ್ಪತ್ರೆಗೆ ದಾಖಲಾಗಿಸಿತ್ತು. ಉಸಿರಾಟದ ಸಮಸ್ಯೆಯಿಂದಾಗಿ ಅವರನ್ನು ನಂತರ ಹೆಚ್ಚಿನ ಚಿಕಿತ್ಸೆಗಾಗಿ ಲೋಕ ನಾಯಕ ಜಯಪ್ರಕಾಶ ಆಸ್ಪತ್ರೆಗೆ ದಾಖಲಿಸಲಾಯಿತು.

ಈ ಹಿಂದೆ ಕೂಡ ಅವರು ಸ್ನಾನಗೃಹದಲ್ಲಿ ಕುಸಿದು ಬಿದ್ದಿದ್ದರು. ಪರಿಣಾಮ ಅವರ ಬೆನ್ನುಮೂಳೆಗೆ ಗಂಭೀರ ಗಾಯ ಉಂಟಾಗಿತ್ತು ಎಂದು ಎಎಪಿ ಹೇಳಿದೆ.


ಭಗವಂತ ಮಾನ್‌ಗೆ ಝಡ್ ಪ್ಲಸ್ ಭದ್ರತೆ

ನವದೆಹಲಿ: ಕೇಂದ್ರವು ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಅವರಿಗೆ ಝಡ್ ಪ್ಲಸ್ ಭದ್ರತೆ ನೀಡಿದೆ.

ಖಾಲಿಸ್ತಾನಿ ಪರ ಇರುವವರನ್ನು ಮಟ್ಟಹಾಕಲು ಹೊರಟಿರುವ ಅವರಿಗೆ ಜೀವ ಬೆದರಿಕೆ ಇರುವ ಕಾರಣ ಈ ಭದ್ರತೆ ಒದಗಿಸಲಾಗಿದೆ.

ಪ್ರವೀಣ್ ಸೂದ್ ಅಧಿಕಾರ ಸ್ವೀಕಾರ

ನವದೆಹಲಿ (ಪಿಟಿಐ): ಹಿರಿಯ ಐಪಿಎಸ್ ಅಧಿಕಾರಿ ಪ್ರವೀಣ್ ಸೂದ್ ಅವರು ಸಿಬಿಐನ ನೂತನ ನಿರ್ದೇಶಕರಾಗಿ ಗುರುವಾರ ಅಧಿಕಾರ ಸ್ವೀಕರಿಸಿದರು.



ನವದೆಹಲಿಯಲ್ಲಿರುವ ಸಿಬಿಐ ಪ್ರಧಾನ ಕಚೇರಿಯಲ್ಲಿ ನಿರ್ಗಮಿತ ನಿರ್ದೇಶಕ ಸುಬೋಧ್ ಕುಮಾರ್ ಜೈಸ್ವಾಲ್ ಅವರು ಸೂದ್ ಅವರಿಗೆ ಅಧಿಕಾರ ಹಸ್ತಾಂತರಿಸಿದರು. ಸೂದ್ ಅವರ ಅಧಿಕಾರ ಅವಧಿ ಎರಡು ವರ್ಷ ಇರಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

1986ನೇ ಬ್ಯಾಚ್‌ನ ಕರ್ನಾಟಕ ಕೇಡರ್‌ನ ಐಪಿಎಸ್ ಅಧಿಕಾರಿಯಾಗಿರುವ ಸೂದ್ ಅವರು ಕರ್ನಾಟಕ ರಾಜ್ಯ ಪೊಲೀಸ್ ಮಹಾನಿರ್ದೇಶಕರಾಗಿದ್ದರು.

ಖರ್ಗೆ, ರಾಹುಲ್ ಭೇಟಿ ಆಗಲಿದ್ದೇನೆ ಎಂದ ಕೇಜ್ರಿವಾಲ್


ಕಾಂಗ್ರೆಸ್ ವಿರುದ್ಧ ಎಎಪಿ ಚಾಟಿ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ/ಮುಂಬೈ: ದೆಹಲಿಯ ಸೇವಾ ವಿಷಯಗಳ ಮೇಲಿನ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಹೊರಡಿಸಿರುವ ಸುಗ್ರೀವಾಜ್ಞೆಯ ವಿರುದ್ಧ ವಿರೋಧ ಪಕ್ಷಗಳನ್ನು ಒಗ್ಗೂಡಿಸಲು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸತತ ಪ್ರಯತ್ನ ನಡೆಸುತ್ತಿದ್ದಾರೆ. ಆದರೆ, ಕಾಂಗ್ರೆಸ್ ಮಾತ್ರ ಈ ಬಗ್ಗೆ ಇದುವರೆಗೂ ತನ್ನ ತೀರ್ಮಾನ ಪ್ರಕಟಿಸಿಲ್ಲ. ಹೀಗಾಗಿ, ದೆಹಲಿ ಕಾಂಗ್ರೆಸ್ ಘಟಕವು 'ಅವಕಾಶವಾದಿ ರಾಜಕಾರಣ' ಮಾಡುತ್ತಿದೆ ಎಂದು ಆಮ್ ಆದ್ಮಿ ಪಕ್ಷವು ಗುರುವಾರ ದೂರಿದೆ.

ಮತ್ತೊಂದೆಡೆ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರನ್ನು ಮುಂಬೈನಲ್ಲಿ ಭೇಟಿಯಾದರು. ನಂತರ ಮಾತನಾಡಿದ ಕೇಜ್ರಿವಾಲ್, 'ಬಿಜೆಪಿಯೇತರ ಪಕ್ಷಗಳು ಒಂದಾದರೆ, ಈ ಮಸೂದೆಯನ್ನು ರಾಜ್ಯಸಭೆಯಲ್ಲಿ ಮಣಿಸಬಹುದು. ಈ ಸುಗ್ರೀವಾಜ್ಞೆಯು ದೇಶದ ಒಕ್ಕೂಟ ವ್ಯವಸ್ಥೆಗೆ ಪೆಟ್ಟು ನೀಡಲಿದೆ' ಎಂದರು.

'ಮುಂಬೈ ಪ್ರವಾಸದ ನಂತರ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿಯಾಗುತ್ತೇನೆ' ಎಂದೂ ಹೇಳಿದರು.



ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಹಾಗೂ ಆಮ್ ಆದ್ಮಿ ಪಕ್ಷದ ನಾಯಕರಾದ ಸಂಜಯ್ ಸಿಂಗ್, ರಾಘವ್ ಛಡ್ಡ ಅವರು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರನ್ನು ಮುಂಬೈನಲ್ಲಿ ಗುರುವಾರ ಭೇಟಿಯಾದರು — ಪಿಟಿಐ ಚಿತ್ರ

ಪವಾರ್ ಮಾತನಾಡಿ, 'ದೇಶದಲ್ಲಿ ಬಿಕ್ಕಟ್ಟು ಉದ್ಭವಿಸಿದೆ. ಇದು ದೆಹಲಿಗೆ ಮಾತ್ರ ಸಂಬಂಧಿಸಿದ ವಿಚಾರವಲ್ಲ. ಕೇಜ್ರಿವಾಲ್ ಅವರನ್ನು ಎನ್‌ಸಿಪಿ ಬೆಂಬಲಿಸಲಿದೆ. ಕೇಜ್ರಿವಾಲ್ ಅವರನ್ನು ಬೆಂಬಲಿಸುವಂತೆ ಇತರ ನಾಯಕರೊಂದಿಗೂ ಮಾತುಕತೆ ನಡೆಸುತ್ತೇವೆ' ಎಂದರು.

ದೆಹಲಿ ಕಾಂಗ್ರೆಸ್ ಘಟಕದ ವಿರುದ್ಧ ವಾಗ್ದಾಳಿ ನಡೆಸಿರುವ ಆಮ್ ಆದ್ಮಿ ಪಕ್ಷವು ಮಾಧ್ಯಮಗೋಷ್ಠಿ ನಡೆಸಿದೆ.

ಪಕ್ಷದ ಮುಖಂಡ ಸೌರಭ್ ಭಾರಧ್ವಾಜ್ ಮಾತನಾಡಿ, 'ರಾಷ್ಟ್ರ ರಾಜಧಾನಿ ಪ್ರದೇಶ- ದೆಹಲಿಯ ಸರ್ಕಾರಕ್ಕೆ ಮಾನ್ಯತೆ ನೀಡಲು ಸಾಧ್ಯವಿಲ್ಲ. ದೆಹಲಿಯಲ್ಲಿ ಒಂದು ಸರ್ಕಾರ ಮಾತ್ರ ಇರಲು ಸಾಧ್ಯ ಎಂದಿದ್ದ ಅಂದಿನ ಕೇಂದ್ರ ಸರ್ಕಾರದ ಆದೇಶವನ್ನು ವಿರೋಧಿಸಿ ಅವರದೇ (ಕಾಂಗ್ರೆಸ್) ಪಕ್ಷದ ಮುಖ್ಯಮಂತ್ರಿ ಶೀಲಾ ದೀಕ್ಷಿತ್ ಅವರು 2002ರಲ್ಲಿ ದೆಹಲಿ ವಿಧಾನಸಭೆಯಲ್ಲಿ ನಿರ್ಣಯ ಅಂಗೀಕರಿಸಿದ್ದರು' ಎಂದರು.

‘ದೆಹಲಿ: ಒಕ್ಕೂಟ ವ್ಯವಸ್ಥೆ ಸಿದ್ಧಾಂತ ಅನ್ವಯಿಸದು’

ಕಾಂಗ್ರೆಸ್ ನಾಯಕ ಅಜಯ್ ಮಾಕನ್ ಪ್ರತಿಕ್ರಿಯಿಸಿ, 'ದೆಹಲಿಗೆ ರಾಜ್ಯ ಸ್ಥಾನಮಾನ ನೀಡುವ ಕುರಿತ ಬೇಡಿಕೆಯನ್ನು ಶೀಲಾ ದೀಕ್ಷಿತ್ ಎಂದಿಗೂ ಕೇಳಿಲ್ಲ. ಈ ಹಿಂದೆ ದೆಹಲಿಯಲ್ಲಿ ಮುಖ್ಯಮಂತ್ರಿಯಾಗಿದ್ದ ಯಾರಿಗೂ ಸಿಗದ ವಿಶೇಷ ಸವಲತ್ತು ತಮಗೆ ಸಿಗಬೇಕು ಎಂದು ಕೇಜ್ರಿವಾಲ್ ಅವರು ಬಯಸುತ್ತಿದ್ದಾರೆ' ಎಂದು ಟ್ವೀಟ್ ಮಾಡಿದ್ದಾರೆ.

'ಸಂವಿಧಾನದಲ್ಲಿ ದೆಹಲಿಯನ್ನು ದೆಹಲಿ ಎಂದು ಮಾತ್ರ ಹೇಳಿಲ್ಲ. ಅದು ರಾಷ್ಟ್ರದ ರಾಜಧಾನಿ. ಆದ್ದರಿಂದ ದೆಹಲಿಗೆ ಒಕ್ಕೂಟ ವ್ಯವಸ್ಥೆ ಸಿದ್ಧಾಂತವು ಅನ್ವಯಿಸುವುದಿಲ್ಲ. ಆಮ್ ಆದ್ಮಿ ಪಕ್ಷದ ಬೆಂಬಲಿಗರು ಈ 'ರಾಷ್ಟ್ರ ರಾಜಧಾನಿ ಪ್ರದೇಶ'ದ ಸತ್ವವನ್ನು ಅರಿತುಕೊಂಡು, ತಮ್ಮ ಬೇಡಿಕೆಯನ್ನು ಹಿಂಪಡೆಯಬೇಕು' ಎಂದರು.

ಕ್ವಾಲಿಫೈಯರ್: ಹಾಲಿ ಚಾಂಪಿಯನ್ ಗುಜರಾತ್, ಐದು ಸಲ ವಿಜೇತ ಮುಂಬೈ ಮುಖಾಮುಖಿ

ಹಾರ್ದಿಕ್–ರೋಹಿತ್ ಹಣಾಹಣಿ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಸತತ ಎರಡನೇ ಬಾರಿ ಪ್ರಶಸ್ತಿ ಮೇಲೆ ಕಣ್ಣಿಟ್ಟಿರುವ ಗುಜರಾತ್ ಟೈಟನ್ಸ್ ಹಾಗೂ ಐದು ಸಲದ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡಗಳು ಶುಕ್ರವಾರ ಎರಡನೇ ಕ್ವಾಲಿಫೈಯರ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

16ನೇ ಆವೃತ್ತಿಯ ಐಪಿಎಲ್ ಟೂರ್ನಿಯ ಫೈನಲ್‌ಗೆ ಲಗ್ಗೆ ಇಡಲು ಉಭಯ ತಂಡಗಳಿಗೂ ಇದು ಕೊನೆಯ ಅವಕಾಶ. ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಹೋದ ವರ್ಷ ನಡೆದಿದ್ದ ಫೈನಲ್‌ನಲ್ಲಿ ಹಾರ್ದಿಕ್ ಪಾಂಡ್ಯ ನಾಯಕತ್ವದ ಗುಜರಾತ್ ಬಳಗವು ಪ್ರಶಸ್ತಿ ಗೆದ್ದಿತ್ತು. ಈ ಬಾರಿಯೂ ಇಲ್ಲಿಯೇ ಎರಡನೇ ಕ್ವಾಲಿಫೈಯರ್ ಹಾಗೂ ಫೈನಲ್ ನಡೆಯಲಿದೆ.

ಟೂರ್ನಿಯುದ್ದಕ್ಕೂ ಅಮೋಘ ಆಟವಾಡಿರುವ ಹಾರ್ದಿಕ್ ಬಳಗವು ಲೀಗ್ ಹಂತದಲ್ಲಿ 20 ಅಂಕ ಗಳಿಸಿ ಮೊದಲ ಸ್ಥಾನದೊಂದಿಗೆ ಪ್ಲೇ ಆಫ್ ಪ್ರವೇಶಿಸಿತ್ತು.

ಆದರೆ, ಚೆನ್ನೈನಲ್ಲಿ ಈಚೆಗೆ ನಡೆದಿದ್ದ ಮೊದಲ ಕ್ವಾಲಿಫೈಯರ್ ಪಂದ್ಯದಲ್ಲಿ ಗುಜರಾತ್ ತಂಡವು ಚೆನ್ನೈ ಸೂಪರ್ ಕಿಂಗ್ಸ್ ಎದುರು ಮಣಿದಿತ್ತು.

ರೋಹಿತ್ ಶರ್ಮಾ ನಾಯಕತ್ವದ ಮುಂಬೈ ತಂಡವು ಲೀಗ್ ಹಂತದಲ್ಲಿ ನಾಲ್ಕನೇ ಸ್ಥಾನ ಗಳಿಸಿ, ಪ್ಲೇ ಆಫ್ ಪ್ರವೇಶಿಸಿತ್ತು. ಎಲಿಮಿನೇಟರ್ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಜಯಿಸಿತ್ತು. ಚೆನ್ನೈನಲ್ಲಿ ನಡೆದಿದ್ದ ಪಂದ್ಯದಲ್ಲಿ ಆಕಾಶ್ ಮಧ್ವಾಲ್ ಐದು ವಿಕೆಟ್ ಗೊಂಚಲು ಗಳಿಸಿ ಮುಂಬೈ ತಂಡಕ್ಕೆ ಜಯದ ಕಾಣಿಕೆ ನೀಡಿದ್ದರು.



ರೋಹಿತ್ ಶರ್ಮಾ ಮತ್ತು ಹಾರ್ದಿಕ್ ಪಾಂಡ್ಯ

ಆರೆಂಜ್ ಕ್ಯಾಪ್ (ಹೆಚ್ಚು ರನ್)		
ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	730

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)		
ಆಟಗಾರ	ತಂಡ	ವಿಕೆಟ್
ಶಮಿ	ಗುಜರಾತ್	26

ಜಸ್‌ಪ್ರೀತ್ ಬೂಮ್ರಾ ಹಾಗೂ ಜೋಫ್ರಾ ಆರ್ಚರ್ ಅವರಿಲ್ಲದ ಮುಂಬೈ ತಂಡಕ್ಕೆ ಆಕಾಶ್ ಹೊಸ ಭರವಸೆ ಮೂಡಿಸಿದ್ದಾರೆ. ಆದರೆ ಗುಜರಾತ್ ತಂಡದಲ್ಲಿ ಎರಡು ಶತಕ ಗಳಿಸಿ ಅಮೋಘ ಲಯದಲ್ಲಿರುವ ಶುಭಮನ್ ಗಿಲ್, ಆರಂಭಿಕ ಬ್ಯಾಟರ್ ವೃದ್ಧಿಮಾನ್ ಸಹಾ, ಡೇವಿಡ್ ಮಿಲ್ಲರ್, ಸ್ಪಿನ್ ಬೌಲಿಂಗ್ ಜೊತೆಗೆ ಬ್ಯಾಟಿಂಗ್‌ನಲ್ಲಿಯೂ ಅಬ್ಬರಿಸುತ್ತಿರುವ ರಶೀದ್ ಖಾನ್ ಅವರನ್ನು ಕಟ್ಟಿ ಹಾಕುವಲ್ಲಿ ಆಕಾಶ್ ಯಾವ ರೀತಿ ಪರಿಣಾಮಕಾರಿಯಾಗುವರು ಎಂಬ ಕುತೂಹಲ ಗರಿಗೆದರಿದೆ.

ಹೋದ ಸಲದ ಟೂರ್ನಿಯಲ್ಲಿ ಮುಂಬೈ ತಂಡವು ಪ್ಲೇ ಆಫ್ ಕೂಡ ಪ್ರವೇಶಿಸಿರಲಿಲ್ಲ. ಈ ಬಾರಿಯೂ ಆರಂಭದಲ್ಲಿ ಸೋಲುಗಳ ಕಹಿಯುಂಡಿತ್ತು. ಆದರೆ ನಂತರದಲ್ಲಿ ತನ್ನ ಸೀಮಿತ ಸಂಪನ್ಮೂಲವನ್ನೇ ಬಳಸಿಕೊಂಡು ಈ ಹಂತಕ್ಕೆ ಬಂದು ನಿಂತಿದೆ. ನಾಯಕ ರೋಹಿತ್ ಬ್ಯಾಟಿಂಗ್‌ನಲ್ಲಿ ಲಯ ಕಂಡಿಲ್ಲ. ಆದರೆ, ಇಶಾನ್ ಕಿಶನ್, ಸೂರ್ಯಕುಮಾರ್ ಯಾದವ್, ಕ್ಯಾಮರಾನ್ ಗ್ರೀನ್, ಯುವ ಬ್ಯಾಟರ್ ನೆಹಲ್ ವಡೇರಾ ಹಾಗೂ ಟಿಮ್ ಡೇವಿಡ್ ಅವರನ್ನೇ ನೆಚ್ಚಿಕೊಂಡಿದೆ.

ಇದೀಗ ಈ ಬ್ಯಾಟರ್‌ಗಳ ಮುಂದೆ ಗುಜರಾತ್ ತಂಡದ ಯಶಸ್ವಿ ಬೌಲರ್ ಎನಿಸಿರುವ ಮೊಹಮ್ಮದ್ ಶಮಿ (26 ವಿಕೆಟ್), ನೂರ್ ಅಹಮದ್ ಹಾಗೂ ರಶೀದ್ ಖಾನ್ ಅವರನ್ನು ಎದುರಿಸುವ ಸವಾಲು ಇದೆ.

ಲೀಗ್ ಹಂತದಲ್ಲಿ ಉಭಯ ತಂಡಗಳು ಎರಡು ಬಾರಿ ಮುಖಾಮುಖಿಯಾಗಿವೆ. ಇದರಲ್ಲಿ ಗುಜರಾತ್ ಒಂದು ಸಲ ಹಾಗೂ ಮುಂಬೈ ಒಂದು ಬಾರಿ ಗೆದ್ದಿವೆ. ಅದರಿಂದಾಗಿ ಈ ಪಂದ್ಯದಲ್ಲಿ ಸಮಬಲದ ಪೈಪೋಟಿ ನಡೆಯುವ ನಿರೀಕ್ಷೆ ಇದೆ. ಅಲ್ಲದೇ ಭಾರತ ಟಿ20 ತಂಡದ ನಾಯಕ ಹಾರ್ದಿಕ್ ಹಾಗೂ ಟೆಸ್ಟ್ ತಂಡದ ನಾಯಕ ರೋಹಿತ್ ನಡುವಣ ಹಣಾಹಣಿಯೆಂದೇ ಈ ಪಂದ್ಯ ಕುತೂಹಲ ಕೆರಳಿಸಿದೆ.

ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ವಾಹಿನಿ, ಜಿಯೊ ಸಿನಿಮಾ ಆ್ಯಪ್

ಮುಂಬೈ ಗೆಲುವಿನ 'ಎಂಜಿನಿಯರ್'

ಮಧ್ವಾಲ್: ಟೆನಿಸ್‌ಬಾಲ್ ಕ್ರಿಕೆಟ್‌ನಿಂದ ಐಪಿಎಲ್ ಹೀರೊ..

ಚೆನ್ನೈ (ಎಎಫ್‌ಪಿ): ಕ್ರಿಕೆಟ್ ಮೇಲಿನ ವ್ಯಾಮೋಹದಿಂದ ಸಿವಿಲ್ ಎಂಜಿನಿಯರ್ ಕೆಲಸ ಬಿಟ್ಟಿದ್ದ ಆಕಾಶ್ ಮಧ್ವಾಲ್ ಕೆಲ ವರ್ಷ ಹಿಂದಿನವರೆಗೆ ಟೆನಿಸ್ ಬಾಲ್ ಕ್ರಿಕೆಟ್‌ನಲ್ಲೇ ನೆಲೆ ಕಂಡುಕೊಂಡವರು. ಆದರೆ ಈಗ ಉತ್ತರಾಖಂಡದ ಈ ವೇಗದ ಬೌಲರ್ ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಉತ್ತಮ ಪ್ರದರ್ಶನದ ಮೂಲಕ ಮನೆ ಮಾತಾಗಿದ್ದಾರೆ. ದಾಖಲೆ ಪುಸ್ತಕದಲ್ಲಿ ಹೆಸರು ಮೂಡಿಸಿದ್ದಾರೆ.

ಬುಧವಾರ, ಲಖನೌ ಸೂಪರ್ ಜೈಂಟ್ಸ್ ವಿರುದ್ಧ 3.3 ಓವರುಗಳಲ್ಲಿ 5 ರನ್ನಿಗೆ 5 ವಿಕೆಟ್ ಪಡೆದು ಐದು ಸಲದ ಚಾಂಪಿಯನ್ ಮುಂಬೈ ತಂಡವನ್ನು ಫೈನಲ್ ಅಂಚಿಗೆ ತಂದು ನಿಲ್ಲಿಸಿದ್ದಾರೆ. ಪ್ಲೇ ಆಫ್ ಹಂತದಲ್ಲಿ ಐದು ವಿಕೆಟ್ ಪಡೆದ ಮೊದಲ ಬೌಲರ್ ಎಂಬ ಅಗ್ಗಳಿಕೆ ಅವರದು.

ಮುಂಬೈನ ಅಗ್ರಗಣ್ಯ ಬೌಲರ್‌ಗಳಾದ ಜಸ್‌ಪ್ರೀತ್ ಬೂಮ್ರಾ ಮತ್ತು ಜೋಫ್ರಾ ಆರ್ಚರ್ ಇಬ್ಬರೂ ಗಾಯಾಳಾಗಿದ್ದಾರೆ. ಈ ಸನ್ನಿವೇಶದಲ್ಲಿ 'ಅಪರಿಚಿತ'ನಂತೆ ಇದ್ದ, 29 ವರ್ಷದ ಮಧ್ವಾಲ್ ದೊರೆತ ಅವಕಾಶವನ್ನು ಬಾಚಿಕೊಂಡಿದ್ದಾರೆ.

ಕಳೆದ ವರ್ಷ ಗಾಯಾಳಿಗೆ ಬದಲಿ ಆಟಗಾರನಾಗಿ ಮುಂಬೈ ಇಂಡಿಯನ್ಸ್ ತಂಡಕ್ಕೆ ಸೇರ್ಪಡೆ ಆದರು. ಆದರೆ ನೆಟ್ ಬೌಲರ್ ಆಗಿ ಕಳೆದ ಋತು ಮತ್ತು ಹಾಲಿ ಐಪಿಎಲ್‌ನ ಅರ್ಧಭಾಗ ಅಭ್ಯಾಸ ಪಂದ್ಯಗಳಿಗಷ್ಟೇ ಸೀಮಿತರಾಗಿದ್ದರು.



ಆಕಾಶ್ ಮಧ್ವಾಲ್– ಎಎಫ್‌ಪಿ ಚಿತ್ರ

ಈ ತಿಂಗಳ ಆರಂಭದಲ್ಲಷ್ಟೇ ರೋಹಿತ್ ಶರ್ಮಾ, ಮಧ್ವಾಲ್‌ಗೆ ಪದಾರ್ಪಣೆ ಅವಕಾಶ ನೀಡಿದರು.

'ಕ್ರಿಕೆಟ್ ನನ್ನ ಪ್ಯಾಷನ್. ಹೀಗಾಗಿ ಹೊರೆ ಎನಿಸದೇ ಖುಷಿಯಿಂದ ಆಡುತ್ತೇನೆ' ಎನ್ನುತ್ತಾರೆ ಅವರು.

ಟೆನಿಸ್ ಬಾಲ್ ಕ್ರಿಕೆಟ್‌ನಿಂದಲೇ ಅವರು ದೊಡ್ಡ ಮಟ್ಟದ ಕ್ರಿಕೆಟ್‌ಗೆ ಕಾಲಿಟ್ಟರು. ಅವರ ಬೌಲಿಂಗ್ ಈ ಮಟ್ಟಕ್ಕೆ ತಲುಪುವಲ್ಲಿ ಅದರ ಪಾತ್ರವೂ ಇದೆ. 'ನಾನು ಯಾರ್ಕರ್‌ಗಳನ್ನು ಕಲಿತದ್ದು ಟೆನಿಸ್ ಬಾಲ್ ಕ್ರಿಕೆಟ್‌ನಿಂದ. ಅದನ್ನು ಇಲ್ಲೂ ಬಳಸುತ್ತಿದ್ದೇನೆ. ಯಾರ್ಕರ್‌ಗಳಿಂದ ಮಾತ್ರ ಎದುರಾಳಿ ಬ್ಯಾಟರ್ ದೊಡ್ಡ ಹೊಡೆತಗಳಿಗೆ ಹೋಗುವುದನ್ನು ತಡೆಯಲು ಸಾಧ್ಯ' ಎನ್ನುತ್ತಾರೆ. 'ನನ್ನ ಅಸ್ತ್ರ ಯಾರ್ಕರ್‌ಗಳು. ಭಯ್ಯಾ (ರೋಹಿತ್) ನನ್ನ ಶಕ್ತಿ ಯಾವುದೊ ಅದರಲ್ಲಿ ನನ್ನನ್ನು ಬಳಸಿದರು' ಎಂದರು.

ಕೊನೆಯ ಲೀಗ್ ಪಂದ್ಯದಲ್ಲಿ ಸನ್‌ರೈಸರ್ಸ್ ವಿರುದ್ಧ 37 ರನ್ನಿಗೆ 4 ವಿಕೆಟ್ ಪಡೆದರೂ, ಆ ಪಂದ್ಯದಲ್ಲಿ ಕ್ಯಾಮರೂನ್ ಗ್ರೀನ್ ಭರ್ಜರಿ ಶತಕದ (ಔಟಾಗದೇ 100) ಮುಂದೆ ಅವರ ಸಾಧನೆ ಎದ್ದುಕಂಡಿರಲಿಲ್ಲ.

5 ಅಡಿ 9 ಇಂಚು ಎತ್ತರದ ಮಧ್ವಾಲ್, ಕರಾರುವಾಕ್ ದಾಳಿ ಪ್ರದರ್ಶಿಸಿ, ಕಳೆದ ಎರಡು ಪಂದ್ಯಗಳಲ್ಲಿ ಒಂಬತ್ತು ವಿಕೆಟ್ ಗಳಿಸಿದ್ದಾರೆ. ಚೆನ್ನೈ ಪಿಚ್‌ನಲ್ಲಿ ಅವರ ಎಸೆತಗಳಲ್ಲಿ ಸ್ಕಿಡ್ ಆದ ನಂತರ ಚೆಂಡಿನ ಬೌನ್ಸ್ ಅರಿಯುವಲ್ಲಿ ಲಖನೌ ಬ್ಯಾಟರ್‌ಗಳು ಎಡವಿದರು. ನಿಕೋಲಸ್ ಪೂರನ್ ಅವರ ವಿಕೆಟ್ ಸೇರಿದಂತೆ ಸತತ ಎಸೆತಗಳಲ್ಲಿ ವಿಕೆಟ್‌ಗಳನ್ನು ಪಡೆದು ಲಖನೌ ತಂಡದ ಬೆನ್ನೆಲುಬು ಮುರಿದಿದ್ದರು.

ಮಧ್ವಾಲ್ ಅವರಿಗೆ ಅವಕಾಶಗಳು ಸುಲಭವಾಗೇನೂ ಸಿಗಲಿಲ್ಲ. ಆರ್‌ಸಿಬಿ ತಂಡಕ್ಕೆ 2019ರಲ್ಲಿ ನೆಟ್ ಬೌಲರ್ ಆಗಿದ್ದರು. ಮುಂಬೈ ತಂಡಕ್ಕೂ ಅವರು ಆಯ್ಕೆ ಆಗಿದ್ದು ಇದೇ ಸ್ವರೂಪದಲ್ಲಿ. 50 ಓವರುಗಳ ಮಾದರಿಯಲ್ಲಿ ಉತ್ತರಾಖಂಡ ತಂಡ ಮುನ್ನಡೆಸಿದ್ದ ಅವರು ಭರವಸೆಯನ್ನು ಕಳೆದುಕೊಳ್ಳಲಿಲ್ಲ. 'ಇಂಥ ಉತ್ತಮ ತಂಡ ನೆಟ್ ಬೌಲರ್ ಆಗಿ ಆಯ್ಕೆ ಮಾಡಿದ ನಂತರ, ಅಭ್ಯಾಸದ ವೇಳೆ ಕೌಶಲಗಳನ್ನು ತೋರಿದರೆ ಅದನ್ನು ಗಮನಿಸಿ ಅವಕಾಶವನ್ನೂ ನೀಡುತ್ತದೆ' ಎಂದು ಮಧ್ವಾಲ್ ನಂಬಿದ್ದರು.

ಐಪಿಎಲ್ ಫೈನಲ್ ನಂತರ ಏಷ್ಯಾಕಪ್ ಭವಿಷ್ಯ ನಿರ್ಧಾರ

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಫೈನಲ್ ನಂತರ ಏಷ್ಯಾ ಕಪ್ ಟೂರ್ನಿಯ ಭವಿಷ್ಯ ನಿರ್ಧಾರವಾಗಲಿದೆ.

ಈ ಬಾರಿಯ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಆತಿಥ್ಯದ ಹಕ್ಕುಗಳನ್ನು ಪಾಕಿಸ್ತಾನ ಪಡೆದುಕೊಂಡಿದೆ. ಆದರೆ ಭಾರತ ಸರ್ಕಾರದ ಅನುಮತಿಯಿಲ್ಲದೇ ತಂಡವನ್ನು ಪಾಕಿಸ್ತಾನದಲ್ಲಿ ಆಡಲು ಕಳಿಸಲಾಗದು ಎಂದು ಈಗಾಗಲೇ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಘೋಷಿಸಿದೆ.

ಅದರಿಂದಾಗಿ ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಮುಖ್ಯಸ್ಥ ನಜಾಂ ಸೇಥಿ ಅವರು 'ಹೈಬ್ರಿಡ್ ಮಾದರಿ'ಯ ಪ್ರಸ್ತಾವ ಇಟ್ಟಿದ್ದಾರೆ. ಅದರನ್ವಯ ಭಾರತ ತಂಡವು ತನ್ನ ಪಂದ್ಯಗಳನ್ನು ತಟಸ್ಥ ತಾಣದಲ್ಲಿ ಆಡುವ ಪ್ರಸ್ತಾವ ಇದೆ. ಆದರೆ ಇದುವರೆಗೆ ಯಾವುದೇ ನಿರ್ಧಾರವನ್ನು ಬಿಸಿಸಿಐ ತೆಗೆದುಕೊಂಡಿಲ್ಲ.

'ಇಲ್ಲಿಯವರೆಗೂ ಏಷ್ಯಾ ಕಪ್ ಆಯೋಜನೆಯ ಕುರಿತು ಯಾವುದೇ ನಿರ್ಧಾರ ಕೈಗೊಂಡಿಲ್ಲ. ಸದ್ಯ ಐಪಿಎಲ್ ಟೂರ್ನಿಯ ಆಯೋಜನೆಯಲ್ಲಿ ವ್ಯಸ್ತರಾಗಿದ್ದೇವೆ. ಶ್ರೀಲಂಕಾ ಕ್ರಿಕೆಟ್ (ಎಸ್‌ಎಲ್‌ಸಿ), ಬಾಂಗ್ಲಾದೇಶ ಮತ್ತು ಅಫ್ಗಾನಿಸ್ತಾನ ಕ್ರಿಕೆಟ್ ಮಂಡಳಿಗಳ ಉನ್ನತಾಧಿಕಾರಿಗಳನ್ನು ಐಪಿಎಲ್ ಫೈನಲ್ ಪಂದ್ಯದ ವೀಕ್ಷಣೆಗೆ ಆಹ್ವಾನಿಸಲಾಗಿದೆ. ನಂತರ ಚರ್ಚೆ ನಡೆಸಿ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಹೇಳಿದ್ದಾರೆ.



ಜಯ್ ಶಾ

ಭಾರತ ಹಾಗೂ ಪಾಕಿಸ್ತಾನ ನಡುವಣದ ಎರಡು ಪಂದ್ಯಗಳು ಶ್ರೀಲಂಕಾದಲ್ಲಿ ನಡೆಯುವ ಸಾಧ್ಯತೆ ಇದೆ. ಆದರೆ ಪಿಸಿಬಿಯು ಈ ಪಂದ್ಯಗಳನ್ನು ದುಬೈನಲ್ಲಿ ನಡೆಸಲು ಉತ್ಸುಕವಾಗಿದೆ. ಆದರೆ ಟೂರ್ನಿ ನಡೆಯುವ ಸೆಪ್ಟೆಂಬರ್ ತಿಂಗಳಲ್ಲಿ ಯುಎಇನಲ್ಲಿರುವ ತಾಪಮಾನದಲ್ಲಿ ಏಕದಿನ ಮಾದರಿಯ ಕ್ರಿಕೆಟ್ ಆಯೋಜಿಸುವುದು ಕಷ್ಟದ ಕಾರ್ಯವಾಗಿದೆ. ಆದರೆ, ಪ್ರಯಾಣ ಹಾಗೂ ಸರಂಜಾಮು ಸಾಗಣೆ ದೃಷ್ಟಿಯಿಂದ ದುಬೈ ಸೂಕ್ತ ಎನ್ನಲಾಗಿದೆ. ಈ ಕುರಿತು ಎಸಿಸಿ ಚಿಂತಿಸುತ್ತಿದೆ.

ಏಷ್ಯಾ ಕಪ್ ಟೂರ್ನಿಯು ಸೆ. 1 ರಿಂದ 17ರವರೆಗೆ ಆಯೋಜನೆಗೊಂಡಿದೆ.



ಬೆಂಗಳೂರಿನಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಬೆಂಗಳೂರು ಮ್ಯಾರಥಾನ್ ಪ್ರಾಯೋಜಕರಾಗಿ ವಿಪ್ರೋ ಲಿಮಿಟೆಡ್ ಒಪ್ಪಂದ ಮಾಡಿಕೊಂಡಿತು. ಈ ಸಂದರ್ಭದಲ್ಲಿ ಲೋಗೊ ಅನಾವರಣಗೊಳಿಸಲಾಯಿತು. ರೇಸ್ ನಿರ್ದೇಶಕ ನಾಗರಾಜ್ ಅಡಿಗ, ಪ್ರಚಾರ ರಾಯಭಾರಿ ರೀತ್ ಅಬ್ರಹಾಂ, ಕರ್ನಾಟಕ ಒಲಿಂಪಿಕ್ ಸಂಸ್ಥೆ ಅಧ್ಯಕ್ಷ ಕೆ. ಗೋವಿಂದರಾಜ್, ವಿಪ್ರೊ ಸಿಎಫ್‌ಒ ಜತಿನ್ ದಲಾಲ್ ಹಾಜರಿದ್ದರು –ಪ್ರಜಾವಾಣಿ ಚಿತ್ರ

ಎಂಟರಘಟ್ಟಕ್ಕೆ ಸಿಂಧು, ಪ್ರಣಯ್

ಮಲೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿ: ಕಿದಂಬಿ ಶ್ರೀಕಾಂತ್ ಮುನ್ನಡೆ

ಕ್ವಾಲಾಲಂಪುರ (ಪಿಟಿಐ): ಗೆಲುವಿನ ಓಟ ಮುಂದುವರಿಸಿದ ಭಾರತದ ಪಿ.ವಿ.ಸಿಂಧು, ಕಿದಂಬಿ ಶ್ರೀಕಾಂತ್ ಮತ್ತು ಎಚ್.ಎಸ್. ಪ್ರಣಯ್ ಅವರು ಮಲೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್‌ಫೈನಲ್ ಪ್ರವೇಶಿಸಿದ್ದಾರೆ.

ಗುರುವಾರ ನಡೆದ ಮಹಿಳಾ ಸಿಂಗಲ್ಸ್ ವಿಭಾಗದ ಪ್ರೀಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಸಿಂಧು 21-16, 21-11ರಿಂದ ಜಪಾನ್‌ನ ಅಯಾ ಒಹೊರಿ ಸವಾಲು ಮೀರಿದರು. ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧು ಕೇವಲ 40 ನಿಮಿಷಗಳಲ್ಲಿ ಎದುರಾಳಿಯನ್ನು ಮಣಿಸಿದರು.

ವಿಶ್ವ ರ್‍ಯಾಂಕಿಂಗ್‌ನಲ್ಲಿ 13ನೇ ಸ್ಥಾನದಲ್ಲಿರುವ ಸಿಂಧು ಅವರಿಗೆ ಎಂಟರಘಟ್ಟದಲ್ಲಿ ಚೀನಾದ ಯಿ ಮಾನ್ ಜಾಂಗ್ ಸವಾಲು ಎದುರಾಗಿದೆ.



ಎಚ್‌.ಎಸ್‌. ಪ್ರಣಯ್ ಆಟದ ವೈಖರಿ– ಪಿಟಿಐ ಚಿತ್ರ

ಪುರುಷರ ಸಿಂಗಲ್ಸ್ ವಿಭಾಗದ 16ರ ಘಟ್ಟದ ಹಣಾಹಣಿಯಲ್ಲಿ ಪ್ರಣಯ್ 13-21, 21-16, 21-11ರಿಂದ ಚೀನಾದ ಷಿ ಫೆಂಗ್ ಲೀ ಅವರಿಗೆ ಸೋಲುಣಿಸಿದರು. ಜಿದ್ದಾಜಿದ್ದಿ ಪೈಪೋಟಿ ನಡೆದ ಪಂದ್ಯದ ಮೊದಲ ಗೇಮ್ ಕೈಚೆಲ್ಲಿದ ಭಾರತದ ಆಟಗಾರ, ಬಳಿಕ ಎರಡು ಗೇಮ್‌ಗಳಲ್ಲಿ ಪಾರಮ್ಯ ಮೆರೆದರು.

ಪ್ರಣಯ್ ಅವರು ಮುಂದಿನ ಪಂದ್ಯದಲ್ಲಿ ಜಪಾನ್‌ನ ಕೆಂಟಾ ನಿಶಿಮೊಟೊ ಎದುರು ಆಡುವರು.

ಪ್ರೀಕ್ವಾರ್ಟರ್‌ನ ಮತ್ತೊಂದು ಸೆಣಸಾಟದಲ್ಲಿ ಶ್ರೀಕಾಂತ್ 21-19, 21-19ರಿಂದ ಇಂಡಿಯಾ ಓಪನ್ ಚಾಂಪಿಯನ್, ಥಾಯ್ಲೆಂಡ್‌ನ ವಿತಿದ್ಸನ್ ಕುನ್ಲಾವತ್ ಅವರನ್ನು ಮಣಿಸಿದರು.

2021ರ ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ಪದಕ ವಿಜೇತ ಶ್ರೀಕಾಂತ್ ತಮ್ಮ ಮುಂದಿನ ಪಂದ್ಯವನ್ನು ಇಂಡೊನೇಷ್ಯಾದ ಕ್ರಿಸ್ಟಿಯನ್ ಆದಿನಾಥ ವಿರುದ್ಧ ಆಡುವರು.

ಲಕ್ಷ್ಯ ಸವಾಲು ಅಂತ್ಯ: ಭಾರತದ ಇನ್ನೊಬ್ಬ ಪ್ರಮುಖ ಆಟಗಾರ ಲಕ್ಷ್ಯ ಸೇನ್ ಅವರ ಅಭಿಯಾನ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಕೊನೆಗೊಂಡಿತು. ಹಾಂಗ್‌ಕಾಂಗ್‌ನ ಆ್ಯಂಗಸ್ ಎನ್‌ಜಿ ಕಾ ಲಾಂಗ್ 21–14, 21–19ರಿಂದ ಲಕ್ಷ್ಯ ಅವರಿಗೆ ಸೋಲುಣಿಸಿದರು.

ಪ್ರೊ ಲೀಗ್ ಹಾಕಿ: ಭಾರತಕ್ಕೆ ಇಂದು ಬೆಲ್ಜಿಯಂ ಸವಾಲು

ಲಂಡನ್ (ಪಿಟಿಐ): ಎಫ್‌ಐಎಚ್ ಪ್ರೊ ಲೀಗ್ ಟೂರ್ನಿಯಲ್ಲಿ ಪಾರಮ್ಯ ಮುಂದುವರಿಸುವ ಉತ್ಸಾಹದಲ್ಲಿರುವ ಭಾರತ ಪುರುಷರ ಹಾಕಿ ತಂಡವು ಯೂರೋಪ್ ಲೆಗ್‌ನ ಮೊದಲ ಪಂದ್ಯದಲ್ಲಿ ಬೆಲ್ಜಿಯಂ ತಂಡಕ್ಕೆ ಶುಕ್ರವಾರ ಮುಖಾಮುಖಿಯಾಗಲಿದೆ.

ಈ ವರ್ಷದ ಆರಂಭದಲ್ಲಿ, ವಿಶ್ವ ಚಾಂಪಿಯನ್ ಜರ್ಮನಿ ಹಾಗೂ ಆಸ್ಟ್ರೇಲಿಯಾ ತಂಡಗಳ ಎದುರಿನ ಪಂದ್ಯಗಳಲ್ಲಿ ಅಜೇಯ ಸಾಧನೆ ಮಾಡಿದ್ದರು.

ಹರ್ಮನ್‌ಪ್ರೀತ್ ಸಿಂಗ್ ನಾಯಕತ್ವದ ಭಾರತ, ಲೀಗ್‌ನಲ್ಲಿ ಸದ್ಯ 19 ಪಾಯಿಂಟ್ಸ್‌ನೊಂದಿಗೆ ಮೊದಲ ಸ್ಥಾನದಲ್ಲಿದೆ. ಅದೇ ಉತ್ತಮ ಲಯವನ್ನು ಮುಂದುವರಿಸುವ ಛಲದಲ್ಲಿದೆ. ಹೊಸ ಕೋಚ್ ಕ್ರೇಗ್ ಫುಲ್ಟನ್ ಮಾರ್ಗದರ್ಶನಕ್ಕೂ ಇದು ಮೊದಲ 'ಸವಾಲು'.

ಪಂದ್ಯ ಆರಂಭ: ರಾತ್ರಿ 7.10

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಫ್ಯಾನ್‌ಕೋಡ್ ಆ್ಯಪ್

ಮಹಿಳಾ ತಂಡಕ್ಕೆ ಸೋಲು

ಭಾರತ ಮಹಿಳಾ ಹಾಕಿ ತಂಡದವರು ಅಡಿಲೇಡ್‌ನಲ್ಲಿ ನಡೆದ ಪಂದ್ಯದಲ್ಲಿ 2–3ರಿಂದ ಆಸ್ಟ್ರೇಲಿಯಾ 'ಎ 'ತಂಡಕ್ಕೆ ಸೋತರು.


ಭಾರತ ತಂಡಕ್ಕಾಗಿ ಸಲೀಮಾ ಟೆಟೆ (40ನೇ ನಿಮಿಷ), ಸಂಗೀತಾ ಕುಮಾರಿ (54ನೇ ನಿ.) ಗೋಲು ಗಳಿಸಿದರೆ, ಆಸ್ಟ್ರೇಲಿಯಾ 'ಎ' ಪರ ಅಲಿಸ್ ಅರ್ನಾಟ್ (18ನೇ ನಿ.) ಮತ್ತು ರೂಬಿ ಹ್ಯಾರಿಸ್ (20 ಮತ್ತು 35ನೇ ನಿ.) ಚೆಂಡನ್ನು ಗುರಿ ಸೇರಿಸಿದರು.

ಸಂಕ್ಷಿಪ್ತ ಸುದ್ದಿ

ಫ್ರೆಂಚ್ ಓಪನ್: ಅಲ್ಕರಾಜ್‌ಗೆ ಕಠಿಣ ಹಾದಿ

ಪ್ಯಾರಿಸ್ (ರಾಯಿಟರ್ಸ್): ಮೊದಲ ಬಾರಿ ಫ್ರೆಂಚ್ ಓಪನ್ ಪ್ರಶಸ್ತಿ ಗೆಲ್ಲುವ ಉಮೇದಿನಲ್ಲಿರುವ ವಿಶ್ವದ ಅಗ್ರಮಾನ್ಯ ಆಟಗಾರ ಕಾರ್ಲೊಸ್ ಅಲ್ಕರಾಜ್ ಅವರು ಪ್ರಯಾಸದ ಹಾದಿ ಕ್ರಮಿಸಬೇಕಾಗಿದೆ. ಗುರುವಾರ 'ಡ್ರಾ' ನಡೆದಿದ್ದು, ಅವರು ಮತ್ತು 22 ಬಾರಿಯ ಗ್ರ್ಯಾಂಡ್ ಸ್ಲಾಮ್ ಚಾಂಪಿಯನ್ ನೊವಾಕ್ ಜೊಕೊವಿಚ್ ಅವರು ಒಂದೇ ಭಾಗದಲ್ಲಿದ್ದಾರೆ.

14 ಬಾರಿ ಫ್ರೆಂಚ್ ಓಪನ್ ಪ್ರಶಸ್ತಿ ಮುಡಿಗೇರಿಸಿಕೊಂಡಿರುವ ರಫೆಲ್ ನಡಾಲ್ ಅವರು ಅನುಪಸ್ಥಿತಿಯಲ್ಲಿ ಜೊಕೊವಿಚ್ ಮತ್ತು ಸ್ಪೇನ್‌ನ ಅಲ್ಕರಾಜ್ ಮೇಲೆ ಎಲ್ಲರ ಕಣ್ಣುಗಳು ನೆಟ್ಟಿವೆ. ಹಾಲಿ ಚಾಂಪಿಯನ್ ಸಹ ಆಗಿರುವ ನಡಾಲ್ ಗಾಯಾಳಾಗಿದ್ದಾರೆ. ಮೇ 28ರಂದು ಟೂರ್ನಿ ಆರಂಭವಾಗಲಿದೆ.



ಅಲ್ಕರಾಜ್

ಮೊದಲ ಸುತ್ತಿನಲ್ಲಿ ಕ್ವಾಲಿಫೈರ್ ಆಟಗಾರನನ್ನು ಎದುರಿಸುವ ಅಲ್ಕರಾಜ್, ಸೆಮಿಫೈನಲ್‌ನಲ್ಲಿ ಸಂಭವನೀಯ ಎದುರಾಳಿ ಜೊಕೊವಿಚ್ ಅವರ ಸವಾಲು ಎದುರಿಸಬೇಕಾಗುತ್ತದೆ.

ಐಐಎಸ್‌ಬಿಗೆ ಜಯ

ಬೆಂಗಳೂರು: ಐಐಎಸ್‌ಬಿ ಮತ್ತು ಡಿಪಿಎಸ್ ಸೌತ್ ತಂಡಗಳು ಟೈಗರ್ ಕಪ್ 14 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯಲ್ಲಿ ಅಲ್ಟಾಯರ್ ಸ್ಪೋರ್ಟ್ಸ್ ಗ್ರೀನ್ ಪಾರ್ಕ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯಗಳಲ್ಲಿ ಜಯ ಗಳಿಸಿದವು.

ಸಂಕ್ಷಿಪ್ತ ಸ್ಕೋರುಗಳು: ಕ್ರೀಡಾಕ್ಷೇತ್ರ: 29.3 ಓವರ್‌ಗಳಲ್ಲಿ 162 (ಗೋಕುಲ್ ಸಾಯಿ 26, ಕಾನಿಷ್ಕ 25; ಸುವಿಕ್ 25ಕ್ಕೆ 5, ಸಂಚಿತ್ ತಾಲಂಕಿ 22ಕ್ಕೆ 3). ಐಐಎಸ್‌ಬಿ: 29.2 ಓವರ್‌ಗಳಲ್ಲಿ 1 ವಿಕೆಟ್‌ಗೆ 163 (ಋತ್ವಿಕ್ ಕುಲಶೇಖರ 104, ಸುವಿಕ್ 31)

ಸಿಸಿಇ: 27.5 ಓವರ್‌ಗಳಲ್ಲಿ 137 (ಮೊಹಮ್ಮದ್ ಉಮ್ಮೈರ್ 41; ಸಮರ್ಥ್ ರತೀಶ್ 7ಕ್ಕೆ 2, ಸಿದ್ಧಾರ್ಥ್ ವಸಿಷ್ಠ 18ಕ್ಕೆ 2). ಡಿಪಿಎಸ್ ಸೌತ್: 26 ಓವರ್‌ಗಳಲ್ಲಿ 1 ವಿಕೆಟ್‌ಗೆ 138 (ಶಮಂತಕ್ 48, ರಚಿತ್ ದಾಸ್ 44, ರ್‍ಯಾನ್ ತೋಮರ್ 33).

ಜೂನಿಯರ್ ಹಾಕಿ: ಭಾರತಕ್ಕೆ ಜಯ

ಸಲಾಲಾ (ಒಮಾನ್): ಭಾರತ ತಂಡ, ಏಷ್ಯಾ ಕಪ್ ಜೂನಿಯರ್ ಹಾಕಿ ಟೂರ್ನಿಯ 'ಎ' ಗುಂಪಿನ ಲೀಗ್ ಪಂದ್ಯದಲ್ಲಿ ಗುರುವಾರ 3–1 ಗೋಲುಗಳಿಂದ ಜಪಾನ್ ತಂಡವನ್ನು ಸೋಲಿಸಿತು. ಇದು ಭಾರತಕ್ಕೆ ಸತತ ಎರಡನೇ ಜಯ.

19ನೇ ನಿಮಿಷ ಕುಂಪಿ ಯೆಸುಡಾ ಗಳಿಸಿದ ಗೋಲಿನಿಂದ ಜಪಾನ್ ವಿರಾಮದ ವೇಳೆ 1–0 ಗೋಲಿನಿಂದ ಮುಂದಿತ್ತು. ಆದರೆ ಅರಿಜಿತ್ ಸಿಂಗ್ ಹುಂದಲ್ (36ನೇ ನಿಮಿಷ), ಶಾರ್ದಾನಂದ್ ತಿವಾರಿ (39ನೇ) ಮತ್ತು ಉತ್ತಮ್ ಸಿಂಗ್ (56ನೇ ನಿಮಿಷ) ಗೋಲುಗಳನ್ನು ಗಳಿಸಿ ಭಾರತದ ಗೆಲುವಿಗೆ ನೆರವಾದರು.

ಭಾರತ, ಶುಕ್ರವಾರ ಪಾಕಿಸ್ತಾನ ತಂಡವನ್ನು ಎದುರಿಸಲಿದೆ.

ಬೆಂಗಳೂರು ಮ್ಯಾರಥಾನ್‌ಗೆ ವಿಪ್ರೊ ಟೈಟಲ್ ಪ್ರಾಯೋಜಕತ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ ಅಕ್ಟೋಬರ್‌ನಲ್ಲಿ ನಡೆಯಲಿರುವ ಬೆಂಗಳೂರು ಮ್ಯಾರಥಾನ್‌ನ ಟೈಟಲ್ ಪ್ರಾಯೋಜಕತ್ವವನ್ನು ವಿಪ್ರೋ ಲಿಮಿಟೆಡ್ ಸಂಸ್ಥೆಯು ವಹಿಸಲಿದೆ.

ಗುರುವಾರ ನಡೆದ ಕಾರ್ಯಕ್ರಮದಲ್ಲಿ ಮ್ಯಾರಥಾನ್ ಆಯೋಜಕರಾದ ಎನ್‌ಇಬಿ ಸ್ಪೋರ್ಟ್ಸ್ ಜೊತೆಗೆ ವಿಪ್ರೋ ಒಪ್ಪಂದ ಮಾಡಿಕೊಂಡಿತು. ಇದೇ ಸಂದರ್ಭದಲ್ಲಿ ಶೀರ್ಷಿಕೆಯನ್ನೂ ಅನಾವರಣಗೊಳಿಸಲಾಯಿತು.

ಹತ್ತನೇ ಆವೃತ್ತಿಯ ಬೆಂಗಳೂರು ಮ್ಯಾರಥಾನ್ ಅಕ್ಟೋಬರ್ 8ರಂದು ನಡೆಯಲಿದೆ. ಕಂಠೀರವ ಕ್ರೀಡಾಂಗಣದಲ್ಲಿ ಆರಂಭವಾಗಿ, ನಗರದ ಪ್ರಮುಖ ರಸ್ತೆಗಳಲ್ಲಿ ಓಟವು ನಡೆಯಲಿದೆ. ಮ್ಯಾರಥಾನ್ (42.195 ಕಿ.ಮೀ), ಹಾಫ್ ಮ್ಯಾರಥಾನ್ (21.1 ಕಿ.ಮೀ) ಹಾಗೂ 5 ಕಿ.ಮೀ ಓಟದ ಸ್ಪರ್ಧೆಗಳು ನಡೆಯಲಿವೆ. ದೇಶ, ವಿದೇಶಗಳಿಂದ 20 ಸಾವಿರಕ್ಕೂ ಹೆಚ್ಚು ಓಟಗಾರರು ಸ್ಪರ್ಧಿಸಲಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಮ್ಯಾರಥಾನ್ ಪ್ರಚಾರ ರಾಯಭಾರಿಯಾಗಿರುವ ಮಾಜಿ ಅಂತರರಾಷ್ಟ್ರೀಯ ಅಥ್ಲೀಟ್ ರೀತ್ ಅಬ್ರಹಾಂ, 'ಆರೋಗ್ಯ ರಕ್ಷಣೆಗೆ ಎಲ್ಲರೂ ಆದ್ಯತೆ ನೀಡಬೇಕು. ಈ ಮ್ಯಾರಥಾನ್ ಕೇವಲ ಕ್ರೀಡೆಯಾಗಿ ಅಲ್ಲ, ಜನಸಾಮಾನ್ಯರಲ್ಲಿ ಆರೋಗ್ಯ ಜಾಗೃತಿಯನ್ನೂ ಮಾಡಲಿದೆ' ಎಂದರು.

ರೇಸ್ ನಿರ್ದೇಶಕ ನಾಗರಾಜ್ ಅಡಿಗ, ವಿಪ್ರೋ ಸಂಸ್ಥೆ ಮುಖ್ಯ ಹಣಕಾಸು ಅಧಿಕಾರಿ ಜತಿನ್ ದಲಾಲ್, ಕರ್ನಾಟಕ ಒಲಿಂಪಿಕ್ ಸಂಸ್ಥೆ ಅಧ್ಯಕ್ಷ ಕೆ. ಗೋವಿಂದರಾಜ್, ಐಎಎಸ್ ಅಧಿಕಾರಿ ರಾಜೇಂದ್ರ ಕಠಾರಿಯಾ ಈ ಸಂದರ್ಭದಲ್ಲಿ ಇದ್ದರು.

ಫ್ರಾನ್ಸ್ ಒಲಿಂಪಿಕ್ ಸಮಿತಿ ಮೊದಲ ಅಧ್ಯಕ್ಷೆ ರಾಜೀನಾಮೆ

ಪ್ಯಾರಿಸ್ (ಎಪಿ): ಫ್ರಾನ್ಸ್ ಒಲಿಂಪಿಕ್ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ಬ್ರಿಜೆಟ್ಟೆ ಹೆನ್ರಿಕ್ಸ್ ರಾಜೀನಾಮೆ ನೀಡಿದ್ದಾರೆ. ಇದರಿಂದ ಮುಂದಿನ ವರ್ಷದ ಬೇಸಿಗೆ ಒಲಿಂಪಿಕ್ಸ್ ಸಿದ್ಧತೆಯ ಮೇಲೆ ಸಣ್ಣ ಮಟ್ಟಿಗೆ ಕಂಪನವಾಗಿದೆ.

ಒಲಿಂಪಿಕ್ಸ್‌ನಲ್ಲಿ ಫ್ರಾನ್ಸ್ ಫುಟ್‌ಬಾಲ್ ತಂಡವನ್ನು ಪ್ರತಿನಿಧಿಸಿದ್ದ ಬ್ರಿಜೆಟ್ಟೆ, ಒಲಿಂಪಿಕ್ ಸಮಿತಿಗೆ ಮೊದಲ ಅಧ್ಯಕ್ಷೆ ಆಗಿದ್ದರು. ಫ್ರೆಂಚ್ ಒಲಿಂಪಿಕ್ ಸಮಿತಿಯಲ್ಲಿ ಆಂತರಿಕ ಕಲಹದ ತೀವ್ರಗೊಂಡ ಅವಧಿಯಲ್ಲೇ ಅವರ ರಾಜೀನಾಮೆ ಪ್ರಕಟಗೊಂಡಿದೆ.

ಗುರುವಾರ ನಡೆದ ಜನರಲ್ ಅಸೆಂಬ್ಲಿ ಸಭೆಯ ಆರಂಭದಲ್ಲೇ, ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿರುವುದಾಗಿ ಅವರು ಪ್ರಕಟಿಸಿದರು ಎಂದು ಫ್ರೆಂಚ್ ಒಲಿಂಪಿಕ್ ಸಮಿತಿ ಹೇಳಿಕೆ ತಿಳಿಸಿದೆ. ರಾಜೀನಾಮೆಗೆ ಕಾರಣವೇನೆಂಬುದು ಉಲ್ಲೇಖವಾಗಿಲ್ಲ. ಆದರೆ ಸಭೆಯಲ್ಲಿದ್ದವರಿಗೆ ಅವರು ವಿವರಣೆ ನೀಡಿರುವುದಾಗಿ ಹೇಳಿಕೆಯಲ್ಲಿ ತಿಳಿಸಲಾಗಿದೆ.